# ಶಿವರಾತ್ರಿ

## ನನ್ನ ಮಾತು

೧೨ನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಏನು ನಡೆಯಿತು, ಏನು ನಡೆಯಲಿಲ್ಲ ಎಂಬುದರ ಬಗೆಗೆ ಇಂದಿಗೂ ವಿವಾದ ಮುಂದುವರಿದಿದೆ. ಕಲ್ಯಾಣದ ಕ್ರಾಂತಿ ಐತಿಹಾಸಿಕ ಘಟನೆಯೇ ಅಲ್ಲವೆಂದು ವಾದಿಸುವ ಇತಿಹಾಸಕಾರರೂ ಇದ್ದಾರೆ. ಆದರೆ ಕವಿಕಲ್ಪನೆ ಮತ್ತು ಜನಮಾನಸಗಳು ನಡೆದದ್ದಕ್ಕಿಂತ ನಡೆಯಬೇಕಾದ್ದನ್ನೇ ಹೆಚ್ಚಿಗೆ ಕಾಣುವಂತೆ ಹೇಳಿವೆ. ಹೀಗಾಗಿ ಪಾಲ್ಕುದಾರಿಕೆ ಸೋಮನಾಥನಿಂದ ಆರಂಭವಾದ ಕಲ್ಯಾಣದ ಕಥನವನ್ನು ಕನ್ನಡದ ಮುಂದಿನ ಶತಮಾನಗಳ ಕವಿಗಳು ಮುಂದು ಮಾಡಿ ಅಷ್ಟಿಷ್ಟು ಬದಲಿಸಿ ಕಟ್ಟುತ್ತಲೇ ಬಂದಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲಂತೂ ಕಲ್ಯಾಣದ ಕಥನದ ಮಾದರಿಗಳಿದ್ದು ಕೆಲವರು ಈ ಕಥನವನ್ನು ಅನಂತರ ಸಂಸ್ಥೀಕರಣಗೊಂಡ ಧರ್ಮದ ದೃಷ್ಟಿಯಿಂದಲೂ ನೋಡಿದ್ದಾರೆ. ನಮ್ಮ ಉತ್ತಮ ನಾಟಕಕಾರರಲ್ಲಿ ಒಬ್ಬರಾದ ಎಚ್.ಎಸ್. ಶಿವಪ್ರಕಾಶ ಅವರು ಮಲೆಮಾದೀಶ್ವರ, ಮಂಟೇಸ್ವಾಮಿ ಕಾವ್ಯಗಳಲ್ಲಿ ಇದೇ ಕಥನವನ್ನು ಬಹುಜನ ಸಮಾಜದ ದೃಷ್ಟಿಯಿಂದ ರೂಪಿಸಿದ್ದಾರೆ. ಇಂತಹ ಕಥನಗಳು, ಪ್ರತಿಕಥನಗಳು ಇಂದಿಗೂ ಕನ್ನಡ ಭಾಷೆಯಲ್ಲಿ ರಚಿತಗೊಳ್ಳುತ್ತಲೇ ಇವೆ.

ಬಿಜ್ಜಳನ ಬಗ್ಗೆ ಒಂದು ನಾಟಕ ಬರೆಯಬೇಕೆಂದು ಅನೇಕ ವರ್ಷಗಳ ಹಿಂದೆಯೇ ಕನಸು ಕಂಡಿದ್ದೆ. ಬಸವಣ್ಣವರು ಕಾಯಕ, ದಾಸೋಹವೇ ಮುಂತಾದ ಮೌಲ್ಯಗಳೊಂದಿಗೆ ಕಲ್ಯಾಣದಲ್ಲಿ ಮಾಡುತ್ತಿದ್ದ ಪರಿವರ್ತನೆಯ ಬಗ್ಗೆ ಅವನಿಗೆ ಅನುಮಾನ ಯಾಕೆ? - ಎನ್ನುವುದು ನನ್ನ ಚಿಂತನೆಯ ವಿಷಯವಾಗಿತ್ತು. ಈ ಬಗ್ಗೆ ನನ್ನ ಗುರುಗಳಾದ ಪ್ರೊ.ಎಸ್.ಎಸ್. ಭೂಸನೂರಮಠ ಅವರೊಂದಿಗೆ ಚರ್ಚಿಸಿದ್ದೆ. ಆದಮೇಲೆ ಮಿತ್ರ ಎಚ್.ಎಸ್. ಶಿವಪ್ರಕಾಶ್ ಹಾಗೂ ಪ್ರಸಿದ್ಧ ವಿಮರ್ಶಕರಾದ ಸಿ.ಎನ್. ರಾಮವಂದ್ರನ್ - ಅವರೊಂದಿಗೆ ದೀರ್ಘವಾಗಿ ವ್ಯಾಪಕವಾಗಿ ಚರ್ಚಿಸಿದ್ದರ ಫಲ ಈ ನಾಟಕ. ಬರೆದಾದ ಮೇಲೆ ಪ್ರಸಿದ್ಧ ಕತೆಗಾರ ಮತ್ತು ವಿಮರ್ಶಕರಾದ ಮಾಧವ ಕುಲಕರ್ಣಿ ಮತ್ತು ಪಸಿದ್ಧ ವಿಮರ್ಶಕರಾದ ಬಸವರಾಜ ಕಲ್ಗುಡಿ ಅವರು ಓದಿ ಕೆಲವು ಸೂಚನೆಗಳನ್ನು ನೀಡಿದ್ದಾರೆ. ಸಿ.ಎನ್. ರಾಮಚಂದ್ರನ್ ಮತ್ತು ಮಾಧವ ಕುಲಕರ್ಣಿ ಅವರು ಉಪಯುಕ್ತವಾದ ಮುನ್ನುಡಿ ಹಿನ್ನುಡಿಗಳನ್ನು ಬರೆದಿದ್ದಾರೆ. ಈ ಎಲ್ಲ ಮಿತ್ರರಿಗೆ ನನ್ನ ಹೃತ್ಪೂರ್ವಕ ವಂದನೆಗಳು ಸಲ್ಲುತ್ತವೆ. ಕಾಯಕ ತತ್ವದ ಬಗ್ಗೆ ನನ್ನ ತಿಳುವಳಿಕೆಯನ್ನ ತಿದ್ದಿದವರು ಸಾಣೇಹಳ್ಳಿಯ ಪೂಜ್ಯ ಪಂಡಿತಾರಾಧ್ಯ ಸ್ವಾಮಿಗಳು. ಆ ಮೂಲಕ ನಾಟಕ ರಚನೆಯಲ್ಲೇ ಬದಲಾವಣೆ ಮಾಡಬೇಕಾಯಿತು. ಪೂಜ್ಯ ಸ್ವಾಮೀಜಿಯವರಿಗೂ ಹಾಗೆಯೇ ಮುಖಪುಟಕ್ಕೆ ಚಿತ್ರ ಒದಗಿಸಿದ ಮಿತ್ರರಾದ ಕಲಾವಿದ ಎಸ್.ಜಿ. ವಾಸುದೇವ ಅವರಿಗೂ ನನ್ನ ವಂದನೆಗಳು. ಹಾಗೆಯೇ ಮಲ್ಲಿಬೊಮ್ಮಣ್ಣನ ಬಗ್ಗೆ ಮಾಹಿತಿ ಕೊಟ್ಟ ಡಾ. ಎಂ.ಎಂ. ಕಲಬುರ್ಗಿ ಅವರಿಗೂ ವಂದನೆಗಳು ಸಲ್ಲುತ್ತವೆ.

ಈ ನಾಟಕವನ್ನು ಪ್ರೀತಿಯಿಂದ ಪ್ರಕಾಶಪಡಿಸಿದ ಪ್ರಕಾಶ್ ಕಂಬತ್ತಳ್ಳಿ ದಂಪತಿಗಳಿಗೂ ಪ್ರಕಟಣೆಯ ಪೂರ್ವದಲ್ಲೇ ಈ ನಾಟಕದ ಒಂದು ಓದನ್ನು ವ್ಯವಸ್ಥೆ ಮಾಡಿದ್ದ ಮಿತ್ರ ಕಪ್ಪಣ್ಣ ಅವರಿಗೂ, ವಂದನೆಗಳು ಸಲ್ಲಬೇಕು. ಈ ನಾಟಕವನ್ನು ಬೆಳಗಾವಿಯ ವಿಶ್ವಕನ್ನಡ ಸಮ್ಮೇಳನದಲ್ಲಿ ಪ್ರಥಮ ಬಾರಿ ಅಭಿನಯಿಸಿದ ಸಾಣೇಹಳ್ಳಿಯ ತಂಡಕ್ಕೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

**ಚಂದ್ರಶೇಖರ ಕಂಬಾರ**

ಬೆಂಗಳೂರು

[ಈ ನಾಟಕವನ್ನು ಅನುವಾದಿಸುವ, ಅಭಿನಯಿಸುವ, ಸಿನಿಮಾ, ಟಿವಿಗೆ ಉಪಯೋಗಿಸಿಕೊಳ್ಳುವ ಮೊದಲಾದ ಎಲ್ಲ ಹಕ್ಕುಗಳೂ ಲೇಖಕರಿಂದ ಕಾದಿರಿಸಲ್ಪಟ್ಟಿವೆ. ರಂಗದ ಮೇಲೆ ಅಭಿನಯಿಸುವವರು ಪ್ರಯೋಗಕ್ಕೆ ಮುನ್ನ ಪ್ರತಿ ಪ್ರಯೋಗಕ್ಕೆ ೩೦೦ ರೂ. ಗೌರವಧನವನ್ನು ಕೆಳಗಿನ ವಿಳಾಸಕ್ಕೆ ಕಳಿಸಿ ಲಿಖಿತ ಅನುಮತಿ ಪಡೆದಿರತಕ್ಕದ್ದು.

**ಚಂದ್ರಶೇಖರ ಕಂಬಾರ**

"ಸಿರಿಸಂಪಿಗೆ" ನಂ. ೪೪, ೧ನೇ ಮುಖ್ಯರಸ್ತೆ, ಬನಶಂಕರಿ ೩ನೇ ಹಂತ, ೪ನೇ ಬ್ಲಾಕ್, ಬೆಂಗಳೂರು - ೫೬೦೦೮೫.]

# ಮುನ್ನುಡಿ

ನಾಟಕಕಾರ - ಕವಿ - ಕಾದಂಬರಿಕಾರ - ಡಾ. ಚಂದ್ರಶೇಖರ ಕಂಬಾರರ ಇಡೀ ವಾಙ್ಮಯವನ್ನು ಲಕ್ಷಿಸಿದಾಗ ನಮಗೆ ಮೊದಲಿಗೆ ಎದ್ದು ಕಾಣುವ ಒಂದು ಸಂಗತಿಯೆಂದರೆ ಕಂಬಾರರ ನಿರಂತರ ಪ್ರಯೋಗಶೀಲತೆ. ಯಾವ ಸಾಹಿತ್ಯ ಪ್ರಭೇದವೇ ಆಗಲಿ, ನೂತನ ವಸ್ತು - ಸಂವಹನ ಮಾರ್ಗಗಳನ್ನು ಸದಾ ಶೋಧಿಸುತ್ತಾ, ಸೃಜನಾತ್ಮಕ ಅತೃಪ್ತಿಯಿಂದ ನಿರಂತರ ಕುದಿಯುತ್ತಾ ಇರುವ ಪ್ರತಿಭೆ ಕಂಬಾರರದು. ನಮ್ಮ ಚರ್ಚೆಯನ್ನು ಕಂಬಾರರ ನಾಟಕಗಳಿಗೆ ಸೀಮಿತಗೊಳಿಸಿದರೂ, ೧೯೬೧ - ೯೯ ಈ ನಾಲ್ಕು ದಶಕಗಳ ಅವಧಿಯಲ್ಲಿ ಇದುವರೆಗೆ ಅವರು ಬರೆದಿರುವ ೨೧ ನಾಟಕಗಳಲ್ಲಿ ಫ್ಯೂಡಲ್ ಪ್ರಭುತ್ವದ ಪೊಳ್ಳಿನ ವಿಶ್ಲೇಷಣೆ, ಬದುಕಿನ ಅವಿಭಾಜ್ಯ ಅಂಗವಾಗಿರುವ ಲೈಂಗಿಕತೆಯ ಮೂಲ ಸ್ವರೂಪದ ಶೋಧ, ಮಾನವ ಅಸ್ತಿತ್ವದ ಅನಿವಾರ್ಯ ಸ್ವವೈರುದ್ಧ್ಯಗಳು ಮತ್ತು ದ್ವಂದ್ವಗಳು, ಕೌಂಟುಂಬಿಕ - ರಾಜಕೀಯ ವಲಯಗಳ ಸಂಘರ್ಷ, ಪ್ರಭುತ್ವ - ವ್ಯವಸ್ಥೆಗಳ ವಿಡಂಬನೆಗಳು, ಇತ್ಯಾದಿ ಆಶಯಗಳು ರಕ್ತ - ಮಾಂಸಗಳೊಡನೆ ಮೂಡಿಬಂದಿವೆ. ೧೯೯೯ರಲ್ಲಿ ಹೊರಬಂದ ಇವರ ನಾಟಕ ಮಹಾಮಾಯಿ ವಾಸ್ತವ ನೆಲೆಯನ್ನೇ ತಿರಸ್ಕರಿಸಿ (ಇವರ ಬೃಹತ್ ಕಾದಂಬರಿ ಶಿಖರ ಸೂರ್ಯದಂತೆ), ಸಂಪೂರ್ಣವಾಗಿ ಒಂದು ದಂತಕಥೆಯ ರೂಪದಲ್ಲಿ ಮಾನವಜಾತಿಗಿರುವ ಸ್ವಾತಂತ್ರ್ಯದ ಸೀಮಾರೇಖೆಗಳನ್ನು ಗುರುತಿಸಲು ಪ್ರಯತ್ನಿಸುತ್ತದೆ. ಹನ್ನೆರಡು ವರ್ಷಗಳ ನಂತರ ಹೊರಬರುತ್ತಿರುವ 'ಶಿವರಾತ್ರಿ' ಇವರ ೨೨ನೆಯ ನಾಟಕ - ಕರ್ನಾಟಕದಲ್ಲಿ ೧೨ನೆಯ ಆತಮಾನದಲ್ಲಿ ನಡೆದ ಅಭೂತಪೂರ್ವ ಶರಣ ಚಳುವಳಿಯ ಹಿನ್ನೆಲೆಯಲ್ಲಿ ರಚಿಸಲ್ಪಟ್ಟ ಕಂಬಾರರ ಮೊದಲ ಚಾರಿತ್ರಿಕ ನಾಟಕ.

ಬಸವೇಶ್ವರರ ನಾಯಕತ್ವದಲ್ಲಿ ನಡೆದ ೧೨ನೆಯ ಶತಮಾನದ ಶರಣ ಚಳುವಳಿ ಎಷ್ಟು ವ್ಯಾಪಕವಾಗಿತ್ತು ಹಾಗೂ ಕ್ರಾಂತಿಕಾರಕವಾಗಿತ್ತು ಎಂದರೆ, ಆ ಚಳುವಳಿಯನ್ನು ವಸ್ತುವಾಗುಳ್ಳ ಅನೇಕ ಕಾವ್ಯ - ಕಥೆ - ಕಾದಂಬರಿ - ನಾಟಕಗಳು ಕನ್ನಡದಲ್ಲಿ ೧೩ನೆಯ ಶತಮಾನದ ಹರಿಹರನಿಂದ ಪ್ರಾರಂಭವಾಗಿ ಇಂದಿನವರೆಗೂ ಸಾಕಷ್ಟು ಬಂದಿವೆ. (ಒಂದು ಅಧ್ಯಯನದ ಪ್ರಕಾರ, ಇಂತಹ ಕೃತಿಗಳ ಸಂಖ್ಯೆ ಇನ್ನೂರನ್ನೂ ದಾಟುತ್ತದೆ.) ಕೇವಲ ನಾಟಕ - ಪ್ರಭೇದವನ್ನು ಲಕ್ಷಿಸಿದರೆ, ಆಧುನಿಕ ಕಾಲದಲ್ಲಿ, ಈ ಚಳುವಳಿಯ ಹಿನ್ನೆಲೆಯಲ್ಲಿ ಬಂದಿರುವ ಮೊದಲ ಕೃತಿ, ಪ್ರಾಯಃ, ಬಳೂರ್ ಬಿ.ಸಿ. ಅವರಿಂದ ೧೯೧೮ ರಲ್ಲಿ ರಚಿಸಲ್ಪಟ್ಟ ನಾಟಕ ಬಸವೇಶ್ವರ ನಾಟಕ. ಅನಂತರ ಬಂದಿರುವ ಗಮನೀಯ ನಾಟಕಗಳೆಂದರೆ: ಅನಕೃ: ಜಗಜ್ಯೋತಿ ಬಸವೇಶ್ವರ, ಲಂಕೇಶ್: ಸಂಕ್ರಾಂತಿ, ಎಂ.ಎಂ. ಕಲಬುರ್ಗಿ: ಕೆಟ್ಟಿತು ಕಲ್ಯಾಣ, ಎಚ್.ಎಸ್. ಶಿವಪ್ರಕಾಶ್: ಮಹಾಚೈತ್ರ, ಗಿರೀಶ್ ಕಾರ್ನಾಡ್: ತಲೆದಂಡ, ಇತ್ಯಾದಿ.

ಆದರೆ, ಆಶಯ - ಆಕೃತಿಗಳೆರಡರಲ್ಲೂ ಶಿವರಾತ್ರಿ ಇತರ ಎಲ್ಲಾ ನಾಟಕಗಳಿಗಿಂತಲೂ ಭಿನ್ನವಾಗಿದೆ. ಈ ನಾಟಕದ ಕಾಲಾವಧಿ ಕೇವಲ ಒಂದು ರಾತ್ರಿ - ಹರಳಯ್ಯ - ಮಧುವರಸರನ್ನು ಎಳೆಹೊಟೆಗೆ ಕಟ್ಟಿ ನಂತರ ಅವರನ್ನು ಶೂಲಕ್ಕೇರಿಸಿದ ಮಾರನೆಯ ದಿನದ ರಾತ್ರಿ; ರಾಜಭಟರು ಶರಣರನ್ನು ಬೀದಿ ಬೀದಿಗಳಲ್ಲಿ ಬೇಟೆಯಾಡುತ್ತಿರುವ ರಾತ್ರಿ: ಎಲ್ಲೆಡೆ ಭೀತಿಯ ಕತ್ತಲೆ ಅಮಾವಾಸ್ಯೆಯ ಕತ್ತಲೆಯನ್ನು ಇನ್ನಷ್ಟು ದಟ್ಟಗೊಳಿಸುವ ರಾತ್ರಿ. ಸ್ಥಳ - ಕಲ್ಯಾಣ ನಗರದ ದಲಿತರು, ವೇಶ್ಯೆಯರು, ಹಿಂದುಳಿದವರು, ಬಡವರು ಇರುವ ಕೇರಿ: ಮತ್ತು ಬಸವಣ್ಣ - ಬಿಜ್ಜಳರನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ಪಾತ್ರಗಳು ಸಮಾಜದ ಕೇಳವರ್ಗಕ್ಕೆ ಸೇರಿದುವು. ನಾಟಕದಲ್ಲಿ ಪ್ರಾರಂಭ - ಶಿಖರ - ಅಂತ್ಯಗಳಿರುವ ಸಮವಿಧಾನವೂ ಇಲ್ಲ. ಪ್ರಾರಂಭದಲ್ಲಿ ಸೂತ್ರಧಾರನು ಸಂಕ್ಷಿಪ್ತವಾಗಿ ಹಿಂದಿನ ಕಥೆಯೆಲ್ಲವನ್ನೂ ನಿರೂಪಿಸಿ, ಕೊನೆಗೆ ಹರಳಯ್ಯ - ಮಧುವರಸರ ಪ್ರಸಂಗಕ್ಕೆ ಬರುತ್ತಾನೆ: ನಾಟಕ ಅಲ್ಲಿಂದ ಮುಂದುವರೆಯುತ್ತದೆ. ಕೆಲವು ಪಾತ್ರಗಳು ವಾಸ್ತವ ನೆಲೆಯಲ್ಲಿದ್ದರೆ ಮುಗ್ಧ ಸಂಗಯ್ಯ, ಹುಚ್ಚಿಯಾದ ಕಲ್ಯಾಣ ನಗರಲಕ್ಷ್ಮಿ, ಮುಂತಾದವರ ಪಾತ್ರಗಳು ವಾಸ್ತವ - ಸಾಂಕೇತಿಕ ನೆಲೆಗಳ ನಡುವೆ ವರ್ತಿಸುತ್ತವೆ. ಅರ್ಥಾತ್, ಶಿವರಾತ್ರಿ ಶರಣ ಚಳುವಳಿಯನ್ನು ದಲಿತರ ಹಾಗೂ ಇತರ ಕೆಳವರ್ಗದವರ ದೃಷ್ಟಿಕೋನದಿಂದ ಕಟ್ಟಿಕೊಡಲು ಪ್ರಯತ್ನಿಸುತ್ತದೆ. ನಾಟಕವೂ ಕಾಲವನ್ನು ಸ್ಥಿರವಾಗಿಟ್ಟುಕೊಂಡು, ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತಾ ಹೋಗುತ್ತದೆ. ಎಂದರೆ, ಆ ಒಂದು ರಾತ್ರಿಯಲ್ಲಿ ಭಿನ್ನ ಸ್ಥಳಗಳಲ್ಲಿ ನಡೆಯುತ್ತಿದ್ದ ಕಾರ್ಯಗಳ ಮೇಲೆ ಅನುಕ್ರಮವಾಗಿ ತನ್ನ ಕ್ಯಾಮೆರಾ - ಕಣ್ಣನ್ನು ಹರಿಸುತ್ತದೆ - ಚಲನಚಿತ್ರಗಳ ನಿಪುಣ ಛಾಯಾಗ್ರಾಹಕನಂತೆ. ಈ ಬಗೆಯ ತಂತ್ರಗಳ ಮೂಲಕ ನಾಟಕವು ಎತ್ತುವ ಹಾಗೂ ಉತ್ತರಿಸ ಲಪೇಕ್ಷಿಸುವ ಪ್ರಶ್ನೆಗಳೆಂದರೆ: ಅಂದಿನ ಕೆಳವರ್ಗದ ಜನರು ಶರಣ ಚಳುವಳಿಯನ್ನು ಹೇಗೆ

ಗ್ರಹಿಸಿದರು? ಆ ಚಳುವಳಿಯ ಯಾವ ಯಾವ ಮೌಲ್ಯಗಳು ಅವರ ಬದುಕನ್ನು ಪ್ರವೇಶಿದವು? ಬಸವಣ್ಣ ಮತ್ತು ಬಿಜ್ಜಳ ಇವರಿಬ್ಬರ ನಡುವೆ ನಿರ್ಮಾಣವಾದ ಬಿರುಕಿನ ಸ್ವರೂಪವೇನು? ಇತ್ಯಾದಿ.

ಈಗ, ಮೊದಲನೆಯ ಪ್ರಶ್ನೆಗೆ ಬಂದಾಗ, ನಾವು ಗಮನಿಸಬೇಕಾದ ಸಂಗತಿ ಎಂದರೆ, ಪ್ರತಿಯೊಂದು ಸಾಮಾಜಿಕ - ಧಾರ್ಮಿಕ ಚಳುವಳಿಗೂ ಎರಡು ಸ್ತರಗಳಿರುತ್ತವೆ: ದೇವರು - ಈ ಸೃಷ್ಟಿ, ದೇವ - ಮಾನವ ಸಂಬಂಧ, ಇತ್ಯಾದಿಗಳನ್ನು ಕುರಿತ ಅಮೂರ್ತ ತತ್ವಗಳ ಸ್ತರ ಮತ್ತು ದೈನಿಕ ಬದುಕಿಗೆ ಸಂಬಂಧಿಸಿದ ಕೆಲವು ಸರಳ ಮೌಲ್ಯಾತ್ಮಕ ಸೂತ್ರಗಳು. ಈ ಹೇಳಿಕೆ ಶರಣ ಚಳುವಳಿಗೂ ಅನ್ವಯಿಸುತ್ತದೆ. ಆ ಚಳುವಳಿಯ 'ಇಷ್ಟಲಿಂಗ - ಸ್ಥಾವರ - ಜಂಗಮ - ಮಹಾಮನೆ' ಇತ್ಯಾದಿ ಪರಿಕಲ್ಪನೆಗಳ ಸಂಪೂರ್ಣ ಅರ್ಥವನ್ನು ಬಸವಣ್ಣನವರ ಬಗ್ಗೆ ಹಾಗೂ ಅವರು ಹುಟ್ಟುಹಾಕಿದ ಚಳುವಳಿಯ ಬಗ್ಗೆ ಗೌರವವಿದ್ದ ಅಂದಿನ ಜನಸಾಮಾನ್ಯರು ಗ್ರಹಿಸಿದ್ದರು ಎಂದೇನೂ ಹೇಳಲಾಗುವುದಿಲ್ಲ. ನಾಟಕದಲ್ಲಿ, ಒಂದು ಸಂದರ್ಭದಲ್ಲಿ ಕಲ್ಲಪ್ಪ ಎಂಬುವವನು ಮಹಾಮನೆಯನ್ನು ತಾನು ತಿಳಿದಂತೆ ವರ್ಣಿಸುತ್ತಾ, "ಅಣ್ಣಾವರು ಎಲ್ಲರಿಗೂ ಒಂದೊಂದು ಆತ್ಮ ಕೊಡತಾರಂತಲ್ಲ, ಹೌದೇನು?" ಎಂದು ಕೇಳುತ್ತಾನೆ. ಆಗ ಅಲ್ಲಿಯೇ ಇದ್ದ ಕಾಶವ್ವ "ಪುಕ್ಕಟ ಕೊಡ್ತಾರವ್ವಾ, ಅದಕ್ಕ ಲಿಂಗಪ್ಪ ಅಂತಾರ" ಎಂದುತ್ತರಿಸುತ್ತಾಳೆ. ಆಗ, ಕಲ್ಲಪ್ಪ ಉದ್ಗರಿಸುತ್ತಾನೆ: "ಪುಟ್ಟಕ್ಕ ಅಂದರ ಒಂದೆರಡು ತರಬಾರದೇನವ್ವಾ ಅಕ್ಕಾ? ನಾವೂ ಹಾಂಗ ಕುಣಿಸಿಕೋತ ಕುಂದರತಿದ್ದಿವಿ" ಎಂದರೆ, 'ಇಷ್ಟಲಿಂಗ'ದ ಪರಿಕಲ್ಪನೆಯಾಗಲಿ ಅದರ ಸಾಂಕೇತಿಕತೆಯಾಗಲಿ ಕಲ್ಲಪ್ಪ, ಕಾಶವ್ವ, ತುಂಗವ್ವ, ಮುಂತಾದ ಜನಸಾಮಾನ್ಯರಿಗೇನೂ ಗೊತ್ತಿರಲಿಲ್ಲ. ಆದರೆ, ಬಸವಣ್ಣನವರ ಕೆಲವು ಮೂಲಭೂತ ಮೌಲ್ಯಗಳು - 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡಾ...' ಇತ್ಯಾದಿ - ಜನ ಸಾಮಾನ್ಯರ ಬದುಕಿನಲ್ಲಿ ಹಾಸುಹೊಕ್ಕಾಗಿದ್ದುವು ಎಂಬುದನ್ನು ಅರಮನೆಯ ರತ್ನದ ಸರದ ಕಥೆ ದರ್ಶಿಸುತ್ತದೆ. ಆ ಸರವನ್ನು ಹರಿಹರ ಪಂಡಿತನ ಮಗ ದಾಮೋದರ ತಂದೆಯ ಪ್ರಚೋದನೆಯಿಂದ ಕದ್ದು, ತಮ್ಮ ಮನೆಯಲ್ಲಿ ಬಚ್ಚಿಟ್ಟಾಗ, ಕಾಶವ್ವ - ಮುದುಕ, ಇವರಿಗೆ ಅದರಿಂದ 'ಸತ್ತ ಹೆಗ್ಗಣದ ನಾತ' ಹೊಡೆಯುತ್ತದೆ; ಅದನ್ನು ಮುಗ್ಧ ಸಂಗಯ್ಯ ಕಾಮಾಕ್ಷಿಗೆ ಕೊಟ್ಟಾಗ ಅದರ ಕಿಮ್ಮತ್ತು ಹೆಚ್ಚಾಯಿತೆಂದು ಅವಳು ಅದನ್ನು ಸೂಳೆ ಸಾವಂತ್ರಿಗೆ ಕೊಡುತ್ತಾಳೆ; ಅವಳು ತನಗದು ಕಾಯಕದಿಂದ ಲಭಿಸದ್ದಲ್ಲವೆಂದು ಅದನ್ನು ಒಂದು ಮೂಲೆಯಲ್ಲಿ ಬಿಸಾಡುತ್ತಾಳೆ; ಆದರೆ, ಅದೇ ಸರಕ್ಕೆ ಆಸೆಪಟ್ಟು ಅದನ್ನು ಕದಿಯಲು ತನ್ನ ಮಗನಿಗೇ ಹೇಳುವವನು ಮೇಲ್ವರ್ಗಕ್ಕೆ ಸೇರಿದ ಹರಿಹರ ಪಂಡಿತ. ಕಾಶವ್ವ, ಕಲ್ಲಪ್ಪ, ಮುದುಕ ಮುಂತಾದ ಸಾಮಾನ್ಯರು ಅರಸೊತ್ತಿಗೆ, ಹರಳಯ್ಯ - ಮಧುವರಸರ ಶಿಕ್ಷೆ, ಅಂತರ್ಜಾತಿಯ ವಿವಾಹ, ಇತ್ಯಾದಿಗಳನ್ನು ತಮ್ಮಲ್ಲಿ ಅಂತರ್ಗತವಾಗಿರುವ 'ಸಹಜ ನ್ಯಾಯ'ದ (Natural Justice) ನೆಲೆಯಲ್ಲಿ ವಿಮರ್ಶಿಸುತ್ತಾರೆ: "ಆ ನನ್ನ ಹಾಟ್ಯಾ ರಾಜಾ ಇಂದು ಯಾರ್ಯಾರನ್ನ ಕೊಂದನೋ ಏನ್ ಕಥಿಯೋ!" ಎಂದು ತುಂಗವ್ವ ಉದ್ಗರಿಸಿದರೆ, "ಇವರವ್ವನ ಈ ರಾಜಾನ ಮಂದೀನ ಕಂಡರ ನನಗ ಆಗಿ ಬರಾಣಿಲ್ಲ ನೋಡು" ಎಂದು ಕಲ್ಲಪ್ಪ ತನ್ನ ತಿರಸ್ಕಾರವನ್ನು ಪ್ರಕಟಿಸುತ್ತಾನೆ. ಸೂಳೆ ಸಾವಂತ್ರಿ "ನಮಗೂ ನಿಯಮಗಳಿವೆ ಸ್ವಾಮಿ; ಸಂದರ್ಭಾನುಸಾರ ಮುಖ ನೋಡಿ ಮಣೆ ಹಾಕುವ ನಿಯಮಗಳಲ್ಲ ಇವು. ಎಲ್ಲರಿಗೂ ಸಮಾನವಾದ ನಿಯಮಗಳು" ಎಂದು ಬಿಜ್ಜಳನೊಡನೆ ತನ್ನ ಕಾಯಕವನ್ನು ಸಮರ್ಥಿಸಿಕೊಳ್ಳುತ್ತಾಳೆ. ಕಾಶ್ಮೀರದಿಂದ ಅಣ್ಣನವರನ್ನು ಕೊಲ್ಲಲು ಬಂದ ಕಳ್ಳ ಚಿಕ್ಕಯ್ಯನ ಮನಃಪರಿವರ್ತನೆಯಾಗಿ ಅವನು ಶರಣ ಚಿಕ್ಕಯ್ಯನಾಗುತ್ತಾನೆ. ಹೀಗೆ, ಸಮಾಜದ ಅಂಚಿನಲ್ಲಿರುವವರೆಲ್ಲರನ್ನೂ ಬಸವಣ್ಣವರ ಚಳುವಳಿ ಒಂದು ನೆಲೆಯಲ್ಲಿ ಮುಟ್ಟಿ, ಅವರ ಬದುಕನ್ನು ಆಳವಾಗಿ ಪ್ರಭಾವಿಸಿದೆ. ಆದರೆ, ಆದರಿಂದ ದೂರವೇ ಉಳಿದಿರುವವರು ಹರಿಹರ ಪಂಡಿತನಂತಹ ಮೇಲ್ವರ್ಗದ 'ಅರಮನೆ'ಯ ಜನರು.

'ಮಹಾಮನೆ' ಮತ್ತು 'ಅರಮನೆ' - ಈ ಎರಡು ಕೇಂದ್ರ ರೂಪಕಗಳ ಸುತ್ತ ನಾಟಕ ಕಟ್ಟಲ್ಪಟ್ಟಿದೆ; ಮತ್ತು ಪರಸ್ಪರ ವಿರುದ್ಧವಿರುವ ಈ ಎರಡು ರೂಪಕಗಳು ಸೂಳೆ ಸಾವಂತ್ರಿಯ - - ನೆಯಲ್ಲಿ ಪರಸ್ಪರ ಎದುರಾಗುತ್ತವೆ. 'ಮಹಾಮನೆ'ಯನ್ನು ಪ್ರತಿನಿಧಿಸುವ ಬಸವಣ್ಣ ಅಲ್ಲಿಗೆ ಮುಗ್ಧ ಸಂಗಯ್ಯನನ್ನು ಹುಡುಕಿಕೊಂಡು ಬಂದರೆ, 'ಅರಮನೆ'ಯನ್ನು ಪ್ರತಿನಿಧಿಸುವ ಬಿಜ್ಜಳ ಶ್ಯಾಸಂಕ್ಕಾಗಿ ಅಲ್ಲಿಗೆ ಬರುತ್ತಾನೆ. ಬೀದಿ ಬೀದಿಗಳಲ್ಲಿ ಶರಣರ ಬೇಟೆಯಾಗುತ್ತಿರುವಾಗ ಅಮಾವಾಸ್ಯೆಯ ಕತ್ತಲಲ್ಲಿ, ವೇಶ್ಯೆಯ ಮನೆಯಲ್ಲಿ ರಾಜ ಹಾಗೂ ಅವನ ಪ್ರಧಾನಿ ಸಂಧಿಸುವುದೇ ಅದು ಅತ್ಯಂತ ನಾಟಕೀಯ ಸನ್ನಿವೇಶ. ನಾಟಕಕಾರರು ಇವರಿಬ್ಬರ ಮುಖಾಮುಖಿಯಲ್ಲಿ 'ಮಹಾಮನೆ'ಯ ಹಾಗೂ 'ಅರಮನೆ'ಯ ಮೌಲ್ಯಗಳನ್ನು ಸ್ಪಷ್ಟಪಡಿಸುತ್ತಾರೆ. ಬಸವಣ್ಣನಿಗೆ ಸಾವಂತ್ರಿ 'ತಾಯಿ'ಯಂತೆ ಕಂಡರೆ ಬಿಜ್ಜಳನಿಗೆ ಅವಳು ತನ್ನ ದೇಹವನ್ನು ಮಾರಿ ಜೀವಿಸುವ ವೇಶ್ಯೆ. 'ಅರಮನೆ'ಯೆಂದರೆ ಕಾನೂನು - ಕಟ್ಟಳೆಗಳು, ಚಾಡಿಕೋರರು, ಗೂಢಚಾರರು;

'ಮಹಾಮನೆ'ಯೆಂದರೆ ಅಂತ್ಯಜನಿಂದ ವಿಪ್ರನವರೆಗೆ ಜಾತಿಭೇದವಿಲ್ಲದೆ ಎಲ್ಲರೂ ಸಮಾನವಾಗಿ ವಿಹರಿಸುವ ತಾಣ. 'ಅರಮನೆ'ಯಲ್ಲಿ ದೇವರೊಡನೆ ಎಲ್ಲರೂ ದೇವಭಾಷೆಯಲ್ಲಿಯೇ ಮಾತನಾಡಬೇಕು; 'ಮಹಾಮನೆ'ಯಲ್ಲಿ ದೇವರು ಭಕ್ತರೊಡನೆ ಭಕ್ತರ ಭಾಷೆಯಲ್ಲಿಯೇ ಮಾತನಾಡುತ್ತಾನೆ. ಈ ಸಂದರ್ಭದಲ್ಲಿ ಬಸವಣ್ಣನು ಬಿಜ್ಜಳನಿಗೆ ಹೇಳುವ ಮಾತುಗಳು ಕೃತಿಯ - - ದ್ರಾಶಯವಾಗಿವೆ: "ರಾಜನ ಕಾನೂನಿಗೆ ದೈವಪ್ರಜ್ಞೆ ಆಧಾರವಾಗಿರಬೇಕು. ಮನುಷ್ಯನ ಗೌರವದ ಬಗ್ಗೆ ಸಮ್ಮತಿ ಇರಬೇಕು. ಎಲ್ಲಿಯ ತನಕ ಕಾನೂನು ಇವನ್ನು ಮೀರುವುದಿಲ್ಲವೋ ಅಲ್ಲಿಯ ತನಕ ತಾವು ರಾಜರು. ಮೀರಿದ್ದರಿಂದ ನಾವು ಬೇರೆ ದಾರಿ ಹುಡುಕಬೇಕಾಯಿತು - - ." ಈ ಮಾತುಗಳ ಅರ್ಥ ಜಗದೇವ - ಬೊಮ್ಮರಸರ ಕೈಯಲ್ಲಿ ಸಾಯುವಾಗ ಬಿಜ್ಜಳನಿಗೆ - - ತ್ತದೆ. "ಹೇಳಿ ಕೇಳಿ ಭವಿ ನಾನು, ಬಸವ, ಕ್ಷಮಿಸು ನನ್ನ" ಎಂದು ವಿಷಾದದಿಂದ - - ರಿಸಿ ಬಿಜ್ಜಳ ಸಾಯುವುದಕ್ಕೆ ಸಿದ್ಧನಾಗುತ್ತಾನೆ. ಹಾಗೆಯೇ, ಬಸವಣ್ಣನವರ ಮುಂದಾಳತ್ವ ನಡೆದ ಚಳವಳಿಯ ಸೋಲಿಗೆ ಕಾರಣವನ್ನೂ ಬಿಜ್ಜಳನ ಮಾತುಗಳು ಗುರುತಿಸುತ್ತವೆ: - - ಸಿದ್ಧಾಂತವನ್ನು ಜೀರ್ಣಿಸಿಕೊಂಬ ಶಕ್ತಿ ಸಮಾಜಕ್ಕಿಲ್ಲ ಬಸವಣ್ಣ."ದುರದೃಷ್ಟವಶಾತ್, - - ನ ಮಾತೇ ನಿಜವಾಗುತ್ತದೆ.

ಇಷ್ಟು ಸಶಕ್ತವಾಗಿ ಮೂಡಿ ಬಂದಿರುವ ನಾಟಕದ ಭಾಷೆಯಲ್ಲಿ ಅತ್ಯಂತ ಸಹಜವಾಗಿ - - ರ ವಚನಗಳ ಮಾರ್ದನಿಗಳು ಮತ್ತೆ ಮತ್ತೆ ಕೇಳಿಸಿ, ನಾಟಕಕ್ಕೆ ಮತ್ತೊಂದೇ ಆಯಾಮವನ್ನು ಕೊಡುತ್ತವೆ. ನಿದರ್ಶನಾರ್ಥವಾಗಿ ಈ ಕೆಲವು ವಾಕ್ಯಗಳನ್ನು ಗಮನಿಸಬಹುದು: "ದೇವಲೋಕ - ಮರ್ತ್ಯಲೋಕಗಳನ್ನು ಒಂದು ಮಾಡಲು ಕರ್ತಾರನ ಕಮ್ಮಟ ನಡೆಸಿದ"; "ಬಸವಣ್ಣನ - - ಮುತ್ತಿನ ಹಾರ; ಅಲ್ಲಮನ ಮಾತು ಜ್ಯೋತಿರ್ಲಿಂಗ"; "ಬಸವಣ್ಣನ ಮನೆಯನ್ನು - - ವನು; ಅದು ಸದಾ ಕಾಲ ಹಸನಾಗಿರುವಂತೆ, ಅದರಲ್ಲಿ ಮನೆಯೊಡೆಯ ಸದಾಕಾಲ - - ಂತೆ ನೋಡಿಕೊಂಡವನು"; ಇತ್ಯಾದಿ.

'ಶಿವರಾತ್ರಿ' ಎಂಬ ನಾಟಕದ ಹೆಸರು ಅನೇಕ ನೆಲೆಗಳಲ್ಲಿ ಅರ್ಥಪೂರ್ಣವಾಗಿದೆ. - - ಹಲದ ಸಂಗತಿಯೆಂದರೆ, ಕಂಬಾರರ ಮಹತ್ವಾಕಾಂಕ್ಷೆಯ, ಅನ್ಯೋಕ್ತಿ ಸ್ವರೂಪದ ಚಕೋರಿ ಕಾದಂಬರಿಯೂ ಕೂಡಾ ಶಿವರಾತ್ರಿಯಂದು ಕನಸುಗಳಿಂದ ನಿರೂಪಿಸಲ್ಪಡುತ್ತದೆ.) ಮೊದಲನೆಯದಾಗಿ, ಕಂಬಾರರ ಅನೇಕ ನಾಟಕ - ಕಾವ್ಯಗಳಲ್ಲಿ 'ಆದರ್ಶ ಸಮಾಜ'ದ ರೂಪಕದಂತೆ ಬರುವ 'ಶಿವಾಪುರ'ವನ್ನು 'ಶಿವರಾತ್ರಿ'ಯೂ ಧ್ವನಿಸುತ್ತದೆ. ನಾಟಕದ ಒಂದು ಸಂದರ್ಭದಲ್ಲಿ ಶರಣರ ಕಲ್ಯಾಣ ಹಾಗೂ ಶಿವಾಪುರ ಸಮೀಕರಿಸಲ್ಪಡುತ್ತವೆ ('...ನಿಂತ ನೀರಿಗೇ ಹರಿವು ನೀಡಿ, ಹೊಸದರೊಂದಿಗೆ ಸೇರಿಸಿ ಶಿವಪುರವೆಂಬ ಕೂಡಲಸಂಗಮವನ್ನ ರೂಪಿಸಬೇಕೆಂಬುದು ನಮ್ಮ ಕನಸಾಗಿತ್ತು'). ಮತ್ತೊಂದು ನೆಲೆಯಲ್ಲಿ, 'ಶಿವರಾತ್ರಿ' ಎಂಬುದು ಘೋರ ವ್ಯಂಗ್ಯವನ್ನು ಧ್ವನಿಸುತ್ತದೆ. ಪುರಾಣಗಳ ಪ್ರಕಾರ, ಮಾಘ ಕೃಷ್ಣಪಕ್ಷದ ಚತುರ್ದಶಿಯಂದು ಆಚರಿಸಲ್ಪಡುವ ಮಹಾಶಿವರಾತ್ರಿ 'ಅಹಿಂಸೆ, ಸತ್ಯ, ದಯೆ, ಕ್ಷಮೆ' ಇತ್ಯಾದಿ ಜೀವದಾಯಕ ಮೌಲ್ಯಗಳನ್ನು ಸಂಕೇತಿಸುತ್ತದೆ; ಆದರೆ ನಾಟಕ ದರ್ಶಿಸಿವುದು ಶಿವರಾತ್ರಿಯಂದು ಕ್ರೂರ ವ್ಯವಸ್ಥೆ ನಡೆಸುವ ಕ್ರೌರ್ಯ; "(ಅಂದು) ಕಲ್ಯಾಣದಲ್ಲಿ ಇರಬೇಕಾದ ಸ್ಥಳ ಮತ್ತು ಕ್ರಮದಲ್ಲಿ ಯಾವುದೂ ಇರಲಿಲ್ಲ. ಯಾರೊಬ್ಬರ ಮ್ಯಾಲೂ ಯಾರಿಗೂ ನಂಬಿಕೆ ಇರಲಿಲ್ಲ, ...ಆ ರಾತ್ರಿ, ಶಿವರಾತ್ರಿ, ಕಲ್ಯಾಣ ಮಲಗಿರಲಿಲ್ಲ." ಓಣಿ ಓಣಿಗಳಲ್ಲಿ ಶರಣರ ಬೇಟೆ - ಸತ್ತವರ ಶವಗಳನ್ನೂ ಅವರ ಮನೆಯವರಿಗೆ ಕೊಡದೆ ಹದ್ದು - ಕಾಗೆಗಳಿಗೆ ಆಹಾರವಾಗಿಸುವ ಪ್ರಭುತ್ವದ ಕ್ರೌರ್ಯ - ಮಗಳನ್ನೇ ಕಳ್ಳತನಕ್ಕೆ ಪ್ರಚೋದಿಸುವ ತಂದೆ - ಶರಣಾಗುವ ಕಳ್ಳ - ತನ್ನ ವೃತ್ತಿಯಲ್ಲಿಯೂ ಧರ್ಮವನ್ನು ಪಾಲಿಸುವ ವೇಶ್ಯೆ - ವೇಶ್ಯೆಯ ಮನೆಯಲ್ಲಿಯೇ ಲಿಂಗಪೂಜೆ ಮಾಡಬೇಕೆಂದು ಬರುವ ಮುಗ್ಧಸಂಗಯ್ಯ - ಮತ್ತು, ಶಿವರಾತ್ರಿಯಲ್ಲಿ ವೇಶ್ಯೆಯ ಮನೆಯಲ್ಲಿ ಸಂಧಿಸುವ ರಾಜ ಮತ್ತು ಅವನ ಪ್ರಧಾನಿ - ಇದೊಂದು ಬಗೆಯ ಅಸಂಗತ ಪ್ರಪಂಚ; ಮತ್ತು ಈ ಅಸಾಂಗತ್ಯವನ್ನು ನಾಟಕದ ಶೀರ್ಷಿಕೆ ಕಣ್ಣಿಗೆ ರಾಚುತ್ತದೆ.

ಕುವೆಂಪು ಅವರ ಸ್ಮಶಾನ ಕುರುಕ್ಷೇತ್ರ ಹಾಗೂ ಎಲಿಯಟ್ ಮರ್ಡರ್ ಇನ್ ದ ಕೆಥೀಡ್ರೆಲ್ ನಾಟಕಗಳನ್ನು ಮತ್ತು ಎರಡನೆಯ ಮಹಾಯುದ್ಧ ಕೊನೆಯ ದಿನದ ಕರಾಳ ಮೃತ್ಯು ನೃತ್ಯವನ್ನು ಅದ್ಭುತವಾಗಿ ದಾಖಲಿಸುವ ದ ಲಾಂಗೆಸ್ಟ್ ಡೇ ಚಲನಚಿತ್ರವನ್ನು ನೆನಪಿಗೆ ತರುವ 'ಶಿವರಾತ್ರಿ', ನಾಟಕಕಾರ ಕಂಬಾರರ ನೂತನ, ಅರ್ಥಪೂರ್ಣ ಪ್ರಯೋಗ; ಹಾಗೂ ಕನ್ನಡ ನಾಟಕ ಕ್ಷೇತ್ರಕ್ಕೆ ಆವರಿಸುತ್ತಿರುವ ಮೌಲಿಕ ಕೊಡುಗೆ. ಕಂಬಾರರಿಗೆ ನಮ್ಮೆಲ್ಲರ ಅಭಿನಂದನೆಗಳು.

**ಸಿ.ಎನ್. ರಾಮಚಂದ್ರನ್**

# ಪಾತ್ರ ವರ್ಗ

| | |
|---|---|
| ಸೂತ್ರಧಾರ | ಲಲಿತ |
| ನಟಿ | ವನಜ |
| ಬಿಜ್ಜಳ | ಶಾರದಾ |
| ಬಸವಣ್ಣ | ಕಾಶವ್ವ |
| ಮುಗ್ಧ ಸಂಗಯ್ಯ | ಮುದುಕಪ್ಪ |
| ಕಳ್ಳ ಚಿಕ್ಕಯ್ಯ | ಕಲ್ಲಪ್ಪ |
| ದಾಮೋದರ | ತುಂಗವ್ವ |
| ಹರಿಹರ | ಹುಚ್ಚಿ - ಕಲ್ಯಾಣದ ನಗರದೇವತೆ |
| ಜಗದೇವ | ಕೊತವಾಲ |
| ಮಲ್ಲಿಬೊಮ್ಮಣ್ಣ | ರಾಜಭಟರು |
| ಸಾವಂತ್ರಿ | ಜನರು |
| ಕಾಮಾಕ್ಷಿ | |

# ಶಿವರಾತ್ರಿ ಇಂತಿದು ಪ್ರಸ್ತಾವನೆ

ಸೂತ್ರಧಾರ : ಮಾಂಡಳಿಕನಾಗಿದ್ದ ಬಿಜ್ಜಳ ಸದ್ದಿಲ್ಲದೆ ಚಾಲುಕ್ಯ
ಸಾಮ್ರಾಜ್ಯವನ್ನ ಆಕ್ರಮಿಸಿ,
ಮಂಗಳವೇಡೆಯಿಂದ ಕಲ್ಯಾಣಕ್ಕೆ ಬಂದ.
ಅವನಿಗೂ ಕಲ್ಯಾಣ ಹೊಸದು; ಆಯವ್ಯಯದ ವಿಚಾರದಲ್ಲಿ
ಯಾರಮೇಲೂ ನಂಬಿಕೆ ಇರಲಿಲ್ಲ, ಬಿಜ್ಜಳನಿಗೆ.
ನಂಬಿಕಸ್ಥರಾದ ಬಸವಣ್ಣ ಕಲ್ಯಾಣಕ್ಕೆ ಬಂದ.
ಮರ್ತ್ಯದ ಹಲವಾರು ಸಂಬಂಧಗಳಲ್ಲಿ
ಕೂಡಲಸಂಗಯ್ಯನ ಮೂಲಸಂಬಂಧವನ್ನು
ಬಸವಣ್ಣ ಮರೆಯಲಿಲ್ಲ. ದೇವಲೋಕ -
ಮರ್ತ್ಯಲೋಕಗಳನ್ನು ಒಂದು ಮಾಡಲು
ಕರ್ತಾರನ ಕಮ್ಮಟ ನಡೆಸಿದ. ಚಿನ್ನದ
ಅರಮನೆಯೆದುರು ಮಣ್ಣಿನ ಮಹಾಮನೆ
ಕಟ್ಟಿದ. ಚಿನ್ನದ ಸುತ್ತ ಆಸೆ ಆಮಿಷಗಳಿರುತ್ತವೆ.
ಮಣ್ಣಿನ ಸುತ್ತ ಮನುಷ್ಯರಿರುತ್ತಾರೆ!
ಮಹಾಮನೆಯ  ತೇಜಸ್ಸು
ಅರಮನೆಯ ಕಣ್ಣು ಕುಕ್ಕಿತು.

ನಟಿ : ಹರಳಯ್ಯ ಮಧುವರಸರು ಮಹಾಮನೆಯ ಶರಣರು.
ಆದರೆ ಅರಮನೆಯ ಕಣ್ಣಲ್ಲಿ ಅವರು
ಹೊಲೆಯ ಮತ್ತು ಬ್ರಾಹ್ಮಣರು.
ಶರಣನಿಗೆ ಜಾತಿಯಿಲ್ಲವೆಂದು ಮಹಾಮನೆ ಹೇಳಿದರೆ
ಮನುಷ್ಯರೆಲ್ಲ ಯಾವುದೋ ಒಂದು ಜಾತಿಗೆ
ಸೇರಿದವರಿರಲೇಬೇಕೆಂದು ಅರಮನೆ ಹೇಳಿತು.
ಹರಳಯ್ಯ ಮಧುವರಸರ ಶರಣಸಂಬಂಧ
ಬಸವಣ್ಣನಿಗೆ ಒಪ್ಪಿಗೆಯಾದರೂ ಬಿಜ್ಜಳನಿಗೆ ಆಗಲಿಲ್ಲ.
ಬಸವಣ್ಣನ ಮಾತು ಮುತ್ತಿನಹಾರ.
ಅಲ್ಲಮನ ಮಾತು ಜ್ಯೋತಿರ್ಲಿಂಗ.
ಆದರೆ ಬಿಜ್ಜಳನ ಮಾತಿಗೆ ಹತ್ತು ಮನಸ್ಸು,
ಹದಿನೆಂಟು ಬುದ್ಧಿ!
ಬಿಜ್ಜಳ ಹರಳಯ್ಯ ಮಧುವರಸರ ಕಣ್ಣು ಕೀಳಿಸಿದ!
ಎಳೆಹೂಟ ಎಳೆಸಿ ಶೂಲಕ್ಕೇರಿಸಿದ.
ಇದು ಇತಿಹಾಸದ ಜಾಣ ಕುರುಡು.

ಸೂತ್ರಧಾರ : ಬಸವಣ್ಣ ಮನೆಯನ್ನು ಕಟ್ಟಿದವನು. ಅದು
ಸದಾಕಾಲ ಹಸನಾಗಿರುವಂತೆ, ಅದರಲ್ಲಿ ಮನೆಯೊಡೆಯ
ಸದಾಕಾಲ ಇರುವಂತೆ ನೋಡಿಕೊಂಡವನು.

ನಟಿ : ಕಲ್ಯಾಣದ ಈಗಿನ ಗೊಂದಲಗಳನ್ನ ದೇವರೇ
ವಿವರಿಸಬೇಕು. ಹರಳಯ್ಯ ಮಧುವರಸರನ್ನು ನಿನ್ನೆಯಷ್ಟೇ
ಶೂಲಕ್ಕೇರಿಸಿದ್ದಾಗಿದೆ. ನಗರದ ಎಲ್ಲ ಶೈವಮಠಗಳ ಮೇಲೆ,
ಮಹಾಮನೆಯ ಮೇಲೂ ಕಾವಲಿದೆ.
ನಗರದ ರಸ್ತೆ ಬೀದಿಗಳು ಭಿಕೋ ಎನ್ನುತ್ತಿವೆ.
ಯಾರು ಕೊಂಡೆಯರು, ಯಾರು ಕಳ್ಳರು,
ಯಾರು ಸಜ್ಜನರು, ಆಳುವವರ್ಯಾರು, -
ಎಲ್ಲಾ ಗೊಂದಲಮಯವಾಗಿದೆ.

ಸೂತ್ರಧಾರ : ಇದು ಹನ್ನೆರಡನೆಯ ಶತಮಾನದಲ್ಲಾದ ಸಂಗತಿ.
ಕಲ್ಯಾಣದ ರಾಜಕೀಯವನ್ನು ಧರ್ಮವಿವೇಕ ಸಂಧಿಸಿತು.
ಈ ಸಂವಾದ ಕಾಲದ ಕಿವಿಗೆ ಬಿದ್ದಿದೆಯೋ ಇಲ್ಲವೋ!
ಶಿವನ ಡಂಗುರ ಬಸವಣ್ಣನ ಕಿವಿಗೆ ಕೇಳಿಸಿತು.
ಅವರು ಕೇಳಿದ್ದನ್ನು ನೋಡುವುದಷ್ಟೇ ನಮ್ಮ ಕಾರ್ಯ.
ಅದನ್ನು ಪ್ರಾಚಾರ್ಯ ಭೂಸನೂರಮಠ ಮತ್ತು
ಸಾವಳಗಿ ಶಿವಲಿಂಗೇಶ್ವರ ಮಠದ ಶಿವಯೋಗಿ

ಸಿದ್ಧರಾಮೇಶ್ವರ ಸ್ವಾಮಿಗಳ ಪಾದಸಾಕ್ಷಿಯಾಗಿ ಹೇಳುತ್ತೇವೆ.
ನೋಡಿರಿ :

*(ಓಡೋಡುತ್ತ ಒಬ್ಬ ಹುಚ್ಚಿ ಬಂದು ವಿಕಾರವಾಗಿ ಒದರುತ್ತಾಳೆ.)*

ನಟಿ : ಇವಳು ಯಾರೆಂದು ಯಾರಿಗೂ ತಿಳಿಯದು.
ಯಾರನ್ನ ಕೇಳಿದರೂ 'ಹಳೆಗಾಲದ ಮುದುಕಿ,
ಅರಮನೆಯವಳು' ಎನ್ನುತ್ತಾರೆ. ಅರಮನೆಯಲ್ಲಿ
ಕೇಳಿದರೆ ಹೊರಗಿನವಳು, ಕಲ್ಯಾಣ ಹುಟ್ಟಿದಾಗಿನಿಂದಲೂ
ಇರುವಳೆನ್ನುತ್ತಾರೆ.
ಇಡೀ ಊರು ತುಟಿಕಚ್ಚಿಕೊಂಡು
ತನ್ನ ಉಸಿರು ತನಗೇ ಕೇಳಿಸದಂತೆ ನಿಶ್ಯಬ್ದವಾಗಿದ್ದರೆ
ಇವಳು ಕಾಲಜ್ಞಾನ ನುಡಿಯುತ್ತಿದ್ದಾಳೆ! ಕೇಳಿರಿ:

## ದೃಶ್ಯ ಒಂದು

ಹುಚ್ಚಿ : ಕೇಳಿರಯ್ಯಾ ಕೇಳಿರಿ:
ಪದ್ಧತಿಯ ಪಾದಕ್ಕೆ ಕತ್ತು ಕೊಟ್ಟವರೇ ನೀವು ಕೇಳಿರಿ:
ನೋವುಗಳ ದವಡೆಯಲ್ಲಿ ಆಗಿವ ಪಾಮರರೇ
ನೀವು ಕೇಳಿರಿ:

ಮನೆಯೊಳಗೆ ಹೆಗ್ಗಣ ಗುದ್ದು ತೋಡ್ಯಾವು
ಮಣ್ಣಿಗಿದ ತಗ್ಗಿನಲಿ ಪುರವೆಲ್ಲ ಹುದುಗೀತು,
ಕೇಳಿರಯ್ಯಾ ಕೇಳಿರಿ.

ಒಡಲಾಸೆಗೆ ನುಡಿದ ವಿಷವಾಕ್ಯ ಪಸರಿಸಿ
ಅತ್ಯರ ತಲೆ ಕತ್ತರಿಸಿ ಬಿದ್ದಾವು.
ವ್ಯರ್ಥರಿಗೀ ಮಾತು ಅರ್ಥವಾಗುವುದಿಲ್ಲ
ಭಕ್ತಿವಂತರು ಚಿತ್ತಗೊಟ್ಟು ಕೇಳಿರಯ್ಯಾ.

ಅಷ್ಟಗ್ರಹಗಳು ನಷ್ಟವಾಗಿ
ಅರಮನೆಯ ನೆತ್ತಿಯಲಿ ಧೂಮಕೇತುಗಳೆದ್ದು
ಪಟ್ಟಕ್ಕೆ ಬಮದವರು ಸುಟ್ಟು ಹೋದಾರಯ್ಯ

ಎತ್ತಿರೋ ನಂದೀಧ್ವಜವ,
ಹೆತ್ತಯ್ಯನಾಟ ಹುಸಿಯಲ್ಲ.
ಸಂಗನ ಬಸವನ ಸಿಂಗಾರದ ಕೊಂಬಿಗೆ

ಸರಿಗಂಟೆ ಹುರಿಗೆಜ್ಜೆ,
ಉರಿಚಮ್ಮಾಳಿಗೆಯ ಮೆಟ್ಟಿ,
ಸಾಲುಜಂಗಿನ ಕಾಲು ಕುಟ್ಟಿ,
ನಂದೀಧ್ವಜವ ಬಾನೊಳಾಡಿಸುತಿರಲು
ಇತಿಹಾಸಕ್ಕೆ ಬರೀಬೂದಿ ಉಳಿದಾವು
ಕೇಳಿರಯ್ಯಾ ಕೇಳಿರಿ.

*(ಹೊರಕೇರಿಯ ಒಂದು ಇಕ್ಕಟ್ಟಾದ ಬೀದಿ. ಕಲ್ಯಾಣದ ದಲಿತರು, ವೇಶ್ಯೆಯರು ಹಿಂದುಳಿದವರು, ಬಡವರು ಇರುವ ಕೇರಿ. ನಿನ್ನೆಯಷ್ಟೇ ಶೂಲಕ್ಕೇರಿದ ಹರಳಯ್ಯನ ಮನೆ ಇಲ್ಲಿಯೇ ಇದೆ. ಒಂದು ಚಿಕ್ಕ ಮನೆಯ ಮುಂದಿನ ಕಟ್ಟೆಯ ಮೇಲೆ ಕಾಶವ್ವ, ಮುದುಕಪ್ಪ ಗಂಡಹೆಂಡತಿ ಮತ್ತು ನೆರೆಮನೆಯ ತುಂಗವ್ವ ಅವಳ ಗಂಡ ಕಲ್ಲಪ್ಪ ಕೂತಿದ್ದಾರೆ.)*

ತುಂಗವ್ವ : ಈ ಹುಚ್ಚೀ ಕಾಲಜ್ಞಾನದಿಂದ ನಮಗ ಮುಕ್ತಿ ಇಲ್ಲ ಬಿಡು.
ಏನ ಮಾಡೋದು, ಆಕಿ ಇರೋ ಸ್ಥಿತಿ ನೋಡಿದರ
ಕರುಳು ಹರಿದು ಕೈಯಾಗ ಬಿದ್ಧಾಂಗ ಆಗತೈತಿ.
ಆದರ ನಾವೇನೂ ಮಾಡಾಕಾಗಾಣೆಲ್ಲ.

ಮುದುಕಪ್ಪ : ಆಕಿ ಮಾತಾಡೋದು ಎಲ್ಲಾ ಖರೆ ಅನಸತೈತಲ್ಲ?

ಕಾಶವ್ವ : ಅಯ್ಯ ಬಿಡs ಹಿರಿಯಾ, -
ಒಮ್ಮೊಮ್ಮಿ ನಾ ಬಿಜ್ಜಳನ ವೈರಿ ಆಗೇನಿ ಅಂತಾಳ!
ಇದೂ ಖರೇನs ಏನ?

ಮುದುಕಪ್ಪ : ಅದೇನಿದೆಯೋ ಶಿವನs ಬಲ್ಲ. ಮಹಾಮನೀಗೂ ಬರತಾಳ!

ಕಾಶವ್ವ : ಬರತಾಳ, ಆದರ ಅಲ್ಲಿ ಕಾಲಜ್ಞಾನ ಹೇಳೂದಿಲ್ಲ.

ತುಂಗವ್ವ : ಊರಾಗ ಒಂದು ದೀಪಿಲ್ಲ, ಸಣ್ಣ ಬೆಳಕಿಲ್ಲ.
ಶಿವರಾತ್ರಿ ಕತ್ತಲಿ ಗಂವಂತೈತಿ,
ಹಿಂತಾ ಕತ್ತಲ್ಯಾಗ ಯಾಕ ಅಡ್ಡಾಡತೈತಿ ಮುದಿಕಿ,
ಸುಮ್ಮನ ಎಲ್ಲಾದರೂ ಬಿದ್ದಕೋಬಾರದ?
ಆ ನನ್ನ ಹಾಟ್ಯಾ ರಾಜಾ ಇಂದ ಯಾರ್ಯಾರನ್ನ ಕೊಂದನೋ
ಏನ ಕತಿಯೋ!

ಮುದುಕಪ್ಪ : *(ಮೆಲ್ಲಗೆ)* ಮಾತಾಡಬ್ಯಾಡಬೇ ರಾಜನ ಮಂದಿ ಅಡ್ಡಾಡತಾರ,
ಕೇಳಿಸಿಕೊಂಡಾರು!

ಕಾಶವ್ವ : *(ವಿಷಯ ಬದಲಿಸಿ)* ಈ ಕಡೆ ನೋಡಃ
ಎವ್ವಾ ಆಕಾಶ್ ಎಷ್ಟ ಹಸನೈತಿ!
ಮುತ್ತ ಸುರಧಾಂಗ ಚಿಕ್ಕಿ ಮೂಡ್ಯಾವ,
ನೋಡಬಾರದ?

ಮುದುಕಪ್ಪ : ಎಂದೂ ಆಕಾಶ ಕಂಡೇ ಇಲ್ಲ ಅಂಬವರ ಹಾಂಗ
ಹಲಬತೀಯಲ್ಲೆ!

ಕಾಶವ್ವ : ನೋಡದೇನ ಮುದುಕಾ, ಆ ಕಡಿಂದ ಒಂದು ಚಿಕ್ಕಿ ಅರಮನಿ
ಮ್ಯಾಲ ಉರದ ಬಿತ್ತು; ನೀ ನೋಡಲಿಲ್ಲ ಬಿಡು.

ಮುದುಕಪ್ಪ : ರಾಜಾ ಗೊಟಕ್ಕಂತಾನೇನ ಮತ್ತ?
ಚಿಕ್ಕಿ ಉರದ ಬೀಲತೈತಂದರ ಅದಃ ಅರ್ತ ಅಲ್ಲಾ?

ತುಂಗವ್ವ : ಅಲ್ಲಃ ಕಾಕಾ,
*(ಕಳ್ಳದನಿಯಲ್ಲಿ)* ಹರಳಯ್ಯನ ಹೆಣಾ ಕೊಟ್ಟರೇನ ತಿರಿಗಿ?

ಮುದುಕಪ್ಪ : ಇಲ್ಲಃ. ಎರಡೂ ಹೆಣ ನಾಯಿ ನರಿ ಹದ್ದ ಕಾಗಿ ತಿನ್ನಲೆಂತ
ತುಂಡು ಮಾಡಿ ಚೆಲ್ಯಾರಂತ!

ಕಾಶವ್ವ : *(ಖೇದದಿಂದ)* ಅಯ್ ಶಿವನಃ! ಶರಣರಿಗಿ
ಏನ ಕಾಲ ಬಂತೋ ಶಿವನಃ!
ಆ ನನ ಹಾಟ್ಯಾ ಬಿಜ್ಜಳ ರಾಜಾ
ಹೂಳವರ ದಿಕ್ಕಿಲ್ಲಧಾಂಗ ಸಾಯಲಿ ನೋಡ!
*(ನೆಲ ಬಾರಿಸಿ ಶಾಪ ಹಾಕುವಳು)*

ಮುದುಕಪ್ಪ : ಬಾಯಿ ಮುಚ್ಚಬೇ ರಾಜನ ಮಂದಿ ಕೇಳಿಸಿಕೊಂಡಾರು.
ಎಲ್ಲೆಂದರಲ್ಲೀ ಗೋಡೆಗಳಿಗೆ ಕಿವಿ ಹಚ್ಚಿ ಕುಂತಾರಂತ!

ತುಂಗವ್ವ : ಅಲ್ಲಿ ನೋಡಃ ಎಕ್ಕಾ, ಹರಳಯ್ಯನ ಮನೀ ಮ್ಯಾಲ
ಎರಡ ಚಿಕ್ಕಿ ಕಾಣಸ್ತಾವಲ್ಲ,
ಅವೆರಡೂ ಸಣ್ಣ ದೀಪಧಾಂಗ ಕಾಣಸೂದಿಲ್ಲಾ?

ಕಾಶವ್ವ : ಅಯ್ಯಯ್ಯ ಸಣ್ಣ ಮನಿಶೇರಾಂಗ
ಕೈಕೈ ಹಿಡಕೊಂಡ ನಡಧಾಂಗ ಕಾಣತಾವ!

ಮುದುಕಪ್ಪ : *(ನೋಡುತ್ತ)* ಹೌಂದಲ್ಲ,
ಆಕಾಶದಾಗೇನೋ ಹರದಾಡಿಧಾಂಗ ಕಾಣತೈತಿ!

ಥೇಟ್ ಮನಿಶೇರ್ಹಾಂಗs ಕಾಣತಾವ,
ಹರಳಯ್ಯ ಮದುವರಸರ ಆತ್ಮ ಇರಬೇಕೇನ ಮತ್ತ?

ತುಂಗವ್ವ : ಹಿಂಗಂತೀಯೇನ? ಇವತ್ತ ಶಿವರಾತ್ರಿ ಅಮವಾಸಿ,
ಸತ್ತವರ ಆತ್ಮ ಮ್ಯಾಲ ಹೋಗೋವಾಗ
ಹೀಂಗ ಕುಣೀತಾವಂತ!

ಕಾಶವ್ವ : ಯಾಕ?

ಕಲ್ಲಪ್ಪ : ಸಂಸಾರದ ತಾಪತ್ರಯದಿಂದ ಪಾರಾಗಿ
ಜೀವ ಹಗರಾಗತೈತಲ್ಲ;
ಮನೀ, ಮಾರು, ಜಿಂದಗಾನಿ, ದುಃಖ, ಬ್ಯಾಸರ, -
ಎಲ್ಲಾದರಿಂದ ಅವಕ್ಕ ಮುಕ್ತಿ ಸಿಗತೈತಂತ!
ಅದಕ್ಕs ಇರಬೇಕು ಕುಣೀತಾವ!

ಕಲ್ಲಪ್ಪ : ನಮಗೂ ಒಂದೊಂದು ಆತ್ಮ ಇದ್ದಿದ್ದರ
ಎಷ್ಟ ಚಲೋ ಆಗತಿತ್ತು!
ಸತ್ತಮ್ಯಾಲ ನಮ್ಮ ಆತ್ಮ
ಹಿಂಗs ಕುಣಕೋತ ಹೋಗತಿದ್ದುವು!

ತುಂಗವ್ವ : ಆತ್ಮ ಪರಮಾತ್ಮ ಎಲ್ಲಾ ಊಚ ಜಾತಿಯವರಿಗೇ
ಇರತಾವ, ನಮ್ಮಂತವರಿಗಲ್ಲ.

ಕಲ್ಲಪ್ಪ : ಮಹಾಮನ್ಯಾಗ ಶರಣರು
ತಮ್ಮ ತಮ್ಮ ಆತ್ಮ ಅಂಗೈಯಾಗ ಇಟಗೊಂಡು
ಕುಣಿಸ್ಯಾಡತಾರಂತ!
ನಿನಗ್ಗೊತ್ತಿರಬೇಕಲ್ಲ ಮುದುಕಪ್ಪ?
ಅಣ್ಣಾವರು ಎಲ್ಲಾರಿಗು ಒಂದೊಂದು ಆತ್ಮ ಕೊಡತಾರಂತ?

ತುಂಗವ್ವ : ಹೆಂಗೊಂದು?

ಕಾಶವ್ವ : ಪುಕ್ಕಟ ಕೊಡ್ತಾರವಾ. ಅದಕ್ಕ ಲಿಂಗಪ್ಪ ಅಂತಾರ.

ಕಲ್ಲಪ್ಪ : ಪುಕ್ಕಟ ಅಂದರ ಒಂದೆರಡು ತರಬಾರದೇನವಾ ಅಕ್ಕಾ?
ನಾವೂ ಹಾಂಗs ಕುಣಿಸಿಕೋತ ಕುಂದರತಿದ್ದಿವಿ.

ಕಾಶವ್ವ : ನೀವೂ ಮಹಾಮನೀಗಿ ಬರ್ರಿಅಂದರ ಬರವೊಲ್ರಿ.
ನೀವೂ ಬಂದರ ಅಣ್ಣಾವರು ಹಿಗ್ಗತಾರ.

*(ಇವರು ಮೈಮರೆತು ಮಾತಾಡುತ್ತಿರುವಂತೆ ಇನ್ನೊಂದೆಡೆಯಿಂದ ಒಬ್ಬ ಜಂಗಮರ ಹುಡುಗ ಬಂದು ಇವರ ಮನೆಯಲ್ಲಿ ಅಡಗುವನು. ಇದನ್ನು ಇವರ್ಯಾರೂ ಗಮನಿಸಿಲ್ಲ)*

ಮುದುಕಪ್ಪ : ಅಣ್ಣಾವರೇನೋ ಹಿಗ್ಗತಾರಂತ ನಾವು ಕುಡಿದೂ ತಿಂದೂ
ಮಹಾಮನೀಗಿ ನುಗ್ಗಬಾರದು. ಮಹಾಮನೀಗಿ
ಹೋಗೋದಂದರ ಒಂದು ವ್ರತ ಇದ್ಧಾಂಗ.

*(ಅಷ್ಟರಲ್ಲಿ ಇಬ್ಬರು ರಾಜಭಟರು ಬಂದೊಡನೆ ಎಲ್ಲರೂ ಗಾಬರಿಯಾಗಿ ಎದ್ದು ನಿಲ್ಲುವರು.)*

ರಾಜಭಟ : ಒಬ್ಬಾವ ಜಂಗಮರ ಹುಡುಗ ಈ ಕಡೆ ಬಂದರೇನು?

ಮುದುಕಪ್ಪ : ಯಾರೂ ಬರಲಿಲ್ಲರಿ.

ರಾಜಭಟ : ಖರೇ ಹೇಳು. ಮನೀ ಒಳಗ ಅಡಿಗ್ಯಾನೇನು?

ಕಾಶವ್ವ : ಖರೆ ಖರೇನs ಯಾರೂ ಬರಲಿಲ್ಲರಿ.

*(ಅಷ್ಟರಲ್ಲಿ ಇನ್ನೊಬ್ಬ ರಾಜಭಟ ಮನೆಯ ಬಾಗಿಲಲ್ಲಿ ನಿಂತು ಒಳಕ್ಕೆ ಕಣ್ಣಾಡಿಸಿ ಬರುವನು.)*

ರಾಜಭಟ ೧ : ಇಲ್ಲಿ ಬಂದಿಲ್ಲ ಬಾ. *(ಇಬ್ಬರೂ ಹೋಗುವರು.)*

ಕಲ್ಲಪ್ಪ : ಇವರವ್ವನ ಈ ರಾಜಾನ ಮಂದೀನ ಕಂಡರ ನನಗ ಆಗಿ
ಬರಾಣಿಲ್ಲ ನೋಡು.

ತುಂಗವ್ವ : ಮೆಲ್ಲಗ ಮಾತಾಡು, ಕೇಳಿಸಿಕೊಂಡಾರು.....
ಅಯ್ಯಯ್ಯ! ಮತ್ತೊಬ್ಬಾವ ಬಂದ!

*(ಎಳೇ ವಯಸ್ಸಿನ ಕಾವೀಬಟ್ಟೆ ಧರಿಸಿದ ಹುಡುಗ ಇವರ ಮನೆಯ ಕಡೆಗೇ ಬರುವನು. ನಾಲ್ವರಿಗೂ ಆಶ್ಚರ್ಯ, ಆನಂದ, ಅನುಮಾನ ಗಳಾಗುತ್ತವೆ. ಹುಡುಗ ಬಂದು ಎಳೆತನದ ಸಹಜತೆಯಿಂದ ಅವರಿಗೆ ನಮಿಸುವನು. ಕಾಶವ್ವ ಅಕ್ಕರತೆಯಿಂದ ಅವನ ಬಳಿಗೆ ಹೋಗು ವಳು.)*

ಕಾಶವ್ವ : ಯಾರೋ ಮಗ ನೀನು?

ಹುಡುಗ : ನಾನು ಮುಗ್ಧಸಂಗಯ್ಯ.

ಕಾಶವ್ವ : ಸಂಗಯ್ಯ? *(ಹುಡುಗನ ಗದ್ದ ಹಿಡಿದು)* ಕೂಡಲ ಸಂಗಯ್ಯನ್ಹಾಂಗs
ಇದ್ದೀಯಲ್ಲೊ ಮಗಾ! ಯಾರು ಬೇಕಿತ್ತು?

ಹುಡುಗ : ಸಾವಂತ್ರಿಯ ಮನೆ ಎಲ್ಲಿದೆ ತಾಯಿ?

ಕಾಶವ್ವ : ಸಾವಂತ್ರಿ? ಯಾವ ಸಾವಂತ್ರಿ?

ಹುಡುಗ : ಸೂಳೆ ಸಾಂವತ್ರಿ.

ಕಾಶವ್ವ : ಅಯ್ ಶಿವನ! ಇಂಥಾ ಸಣ್ಣ ವಯಸ್ಸಿನಾಗ
ಅಲ್ಲಿಗ್ಯಾಕ ಹೊಂಟೀಯೊ ನನ್ನಪ್ಪ?

ಸಂಗಯ್ಯ : ಅವಳ ಮನೇಲಿ ನಾನು ಲಿಂಗಪೂಜೆ ಮಾಡಿಕೋಬೇಕು.

ತುಂಗವ್ವ : ಅಹಾಹಾ! ಲಿಂಗಪೂಜೆ ನೀನ್ಯಾಕ ಮಾಡಿಕೋಬೇಕು?
ಅವಳs ನಿನ್ನ ಲಿಂಗಪೂಜೆ ಚೆಲೋ ಹಾಂಗ ಮಾಡ್ತಾಳೇಳು.
ಶಿವರಾತ್ರೀ ಜಾಗರಣೆ ಚೆಲೋ ಮಾಡ್ತಿ ಬಿಡು.

ಕಾಶವ್ವ : ಅಲ್ಲೊ ಮಗಾ, ಮಹಾಮನ್ಯಾಗ ಲಿಂಗಪೂಜಿ
ಮಾಡಿಕೊಳ್ಳೋದ ಬಿಟ್ಟು ಸೂಳೀಮನಿಗೇ ಯಾಕ ಹೋಗ್ತಿ ನೀನು?
ಹೋಗ್ಹೋಗು ಮಹಾಮನೆಯಲ್ಲೇ ಮಾಡಿಕೋಹೋಗು.

ಸಂಗಯ್ಯ : ಸಾವಂತ್ರೀ ಮನೇಲಿ ಮಾಡಿಕೊಂಡರೇ ಒಳ್ಳೇ
ಲಿಂಗಪೂಜೆ ಅಂತ ಬಹಳಷ್ಟು ಶರಣರೇ ಹೇಳಿದರಬೆ.
ಅದಕ್ಕೇ ನಾನು ಅಲ್ಲಿಗೇ ಹೋಗೋದು.
ಸಾವಂತ್ರೀ ಮನೆ ಎಲ್ಲಿ ಅಂತ
ನೀ ಹೇಳ್ತಿಯೋ ಇಲ್ಲೊ?

ಕಾಶವ್ವ : ಕಡ್ಡೀಮುರದ ಹೇಳತೀನಿ, ನಿನಗ ಈ ಮನಿ ನಾ ತೋರಿಸಾಣಿಲ್ಲ.
ನಿನ್ನಂಥ ಅರೀದ ಕೂಸನ್ನ ಕೈಯಾರೆ ಅಡ್ಡದಾರಿ ಹಿಡಿಸಿ
ಯಾವ ನರಕಕ್ಕ ಹೋಗಲೊ ನನ್ನಪ್ಪಾ! ತಿರಿಗಿ ಹೋಗು.

ಸಂಗಯ್ಯ : ನೀ ತೋರಿಸೋದಿಲ್ಲ?

ಕಾಶವ್ವ : ತೋರಿಸೋದಿಲ್ಲ, ನಡಿಯಾಚೆ.
ಅಯ್ಯ ಈ ಕೂಸಿಗಿ ಯಾರೋ ಅಡ್ಡದಾರೀ ತೋರಿಸ್ಯಾರ.
ನೀ ಆದರೂ ಬುದ್ಧೀ ಹೇಳಬಾರದೇನೋ ಹಿರಿಯಾ?

*(ಅಷ್ಟರಲ್ಲಿ ಹುಚ್ಚಿ ಬಂದು ಗುರುತು ಹಿಡಿಯಲು ಹುಡುಗನನ್ನ ಅಡಿಯಿಂದ ಮುಡಿ ತನಕ ಪರೀಕ್ಷಿಸುತ್ತ ಅವನ ಸುತ್ತ ಒಮ್ಮೆ ತಿರುಗುವಳು.)*

ಸಂಗಯ್ಯ : ಈ ಮುದುಕಿ ಮಾತ್ರ ಮುಖ ಗಂಟ ಹಾಕ್ಕೊಂಡು
ನನ್ನನ್ನೇ ನೋಡ್ತಾ ಬರ್ತಿದಾಳೆ.
ಅಯ್ಯಾ ಶರಣಾ, ಈ ಹೆಣ್ಣ ಮಗಳು ಯಾರು? ಎತ್ತ?

ಮುದುಕಪ್ಪ : ಇವಳೊಬ್ಬ ಹುಚ್ಚು ಮುದುಕಿಯಪ್ಪ.
ಯಾರಂತ ನನಗೂ ಗೊತ್ತಿಲ್ಲ. ಚಾಲುಕ್ಯರ
ಕಾಲದಿಂದಲೂ ಹಿಂಗs
ಯಾರ್ಯಾರ್ನೊ ಅಂದಾಡಿಕೊಂಡು
ಎಲ್ಲೆಂದರಲ್ಲಿ ಪ್ರತ್ಯಕ್ಷ ಆಗತಾಳ.
ನೀನೂ ಅವಳ ಗೊಡವೆಗೆ
ಹೋಗದೇ ಇರೋದುತ್ತಮ.

ಸಂಗಯ್ಯ : ಆದರ ಆಕಿ ನನ್ನ ನೋಡಿ ನಗತಿದಾಳಲ್ಲ?

ಹುಚ್ಚಿ : ಯಾರ್ಲಾ ನೀನು? ಯಾರು ಬೇಕಿತ್ತು?

ಸಂಗಯ್ಯ : ಸೂಳೆ ಸಾವಂತ್ರಿ.

ಹುಚ್ಚಿ : ಸೂಳೆ ಸಾವಂತ್ರಿ ಬೇಕ? ಸಾವಂತ್ರೀನs ಬೇಕ?
*(ತುಂಗವ್ವ ಮತ್ತು ಕಲ್ಲಪ್ಪ ನಗುತ್ತ ಹೋಗುವರು)*

ಸಂಗಯ್ಯ : ನನಗೆ ಸೂಳೆ ಸಾವಂತ್ರೀನೇ ಬೇಕು.

ಹುಚ್ಚಿ : ಬಿಜ್ಜಳನೂ ಅವಳಲ್ಲೇ ಹೋಗ್ತಾನಂತ ಇಟ್ಟಕ.
ಆದರೂ ಹೇಳ್ತೀನೋ ಹುಡುಗ ಅವಳು
ಮುದಿಗೊಡ್ಡು ಕಾಣ್ಲಾ.
ಮುಖದಲ್ಲಿ ಬುರುಡೆ ಬಿಟ್ಟು
ಇನ್ನೇನೂ ಇಲ್ಲ.

ಸಂಗಯ್ಯ : ನನಗೆ ಬೇಕಾದವಳು ಅವಳಲ್ಲಬೇ.
ಅವಳ ಮನೇಲಿ ಕಾಮಾಕ್ಷಿ ಇದ್ದಾಳೆ, ಗೊತ್ತಾ?
ಅವಳು ಬೇಕು.

ಹುಚ್ಚಿ : ಭಲೇ ನನ್ನ ಸರದಾರ!
ಅವಳು ಕೇಳೋವಷ್ಟು ಹಣ ನಿನ್ನತ್ರ ಐತೇನ್ಲಾ?
ಕಣ್ಣ ತಗೆದ ನನ್ನ ಒಂದ ಸಲ ಸಮ ನೋಡಬಾರದ?

ಸಂಗಯ್ಯ : ಹಾ ನೀನು ಯಾರಂತ ಈಗ ನೆನಪಾಯಿತು ನೋಡು:
ನೀನು ಈ ನಗರದ ದೇವತೆ ಕಲ್ಯಾಣಿ ಅಲ್ಲವೆ ತಾಯಿ?

ಹುಚ್ಚಿ : ಹೌದು. ನೀನು ಬಸವಣ್ಣ ಕಲ್ಯಾಣಕ್ಕೆ ಬಂದ ಮೊದಲನೇ ದಿನ
ಅವನೊಂದಿಗೆ ಇದ್ದೆ. ಅಲ್ಲವೆ?
ಬಸವಣ್ಣ ಮುಂದೆ ಮುಂದೆ,
ನೀನವನ ಹಿಂದೆ ಹಿಂದೆ
ಯಾರಿಗೂ ಕಾಣದಂತೆ ನಿಂತಿದ್ದೆ, ಅಲ್ಲವೆ?

ಸಂಗಯ್ಯ : ಹೌದು ತಾಯಿ. ಆ ದಿನ ಆಕಾಶ ಸ್ವಚ್ಛವಾಗಿತ್ತು.
ನಿಚ್ಚಳವಾದ ಬಿಸಿಲಿತ್ತು. ನದಿ ಕಡೆಯ ತಂಗಾಳಿ ಬೀಸಿ
ವಾತಾವರಣ ಆಹ್ಲಾದಕರವಾಗಿತ್ತು.
ಆ ದಿನ ನಾನು ನಿನ್ನನ್ನು ನೋಡಿದ್ದೆ.

ಹುಚ್ಚಿ : ನೀನು ಆ ದಿನ ಯಾರೊಂದಿಗೂ ಮಾತಾಡಲೇ ಇಲ್ಲ.
ಕಣ್ಣಲ್ಲಿ ಕನಸುಗಳ ಕಾಂತಿಯಿತ್ತು.
ಇಂದಿನ ಹಾಗೇ ಅಂದು ನಿನ್ನ ಮುಖ
ಚಂದ್ರನ ಹಾಗೆ ಆನಂದದಾಯಕವಾಗಿತ್ತು ಕಂದಾ.
ಇಂದ್ಯಾಕೋ ಮೋಡ ಮುಸುಕಿದ ಹಾಗಿದೆ. ನಿನ್ನ ಹೆಸರು..

ಸಂಗಯ್ಯ : ಸಂಗಯ್ಯ

ಹುಚ್ಚಿ : ಬಸವಣ್ಣ ಒಂದು ವಚನದಲ್ಲಿ "ಗೆಳೆಯ ನೀನು ಹಳಬ ನಾನು"
ಅಂತ ನಿನ್ನ ನೆನೆದಿದ್ದಾನಲ್ಲವೆ?

ಸಂಗಯ್ಯ : ಹವದು ತಾಯಿ. ಆಗ ಕಲ್ಯಾನ ಹೀಗೆ ಬೆಳೆದಿರಲಿಲ್ಲ.

ಕಾಶವ್ವ : ಅಯ್ಯs ನಿಂತಕೊಂಡs ಮಾತಾಡ್ತೀರಲ್ಲ ಎವ್ವ,
ಕುಂತಕ ಮಗಾ, ನೀನೂ ಕುಂತಕ ಎವ್ವಾ.

*(ಮುದುಕಪ್ಪ ಮತ್ತು ಕಾಶವ್ವ ಸರಿದು ಅವರು ಕೂರಲು ಜಾಗ ಮಾಡುವರು.)*

ಹುಚ್ಚಿ : ಬಸವಣ್ಣ ಅರಮನೆಗೆ ಬಂದಾಗ
ಹುಬ್ಬುಗಂಟಿಕ್ಕಿದವರೇ ಹೆಚ್ಚು. ಆವಾಗ ಸಂತೋಷದಿಂದ
ಮತ್ತು ಕನಸು ಕಾಣುತ್ತ ನಿಂತವರೆಂದರೆ ನೀವಿಬ್ಬರೇ:
ನೀನು ಮತ್ತು ಬಿಜ್ಜಳ.

ರಾಜ ಬಸವಣ್ಣನಿಗೆ ಅವನು ಕೂರಬೇಕಾದ ಕೊಠಡಿ
ಮತ್ತು ಕಡತಗಳನ್ನು ತೋರಿಸಿದ.

ಸಂಗಯ್ಯ : ಆಮೇಲೆ ನೀನು ಅವನನ್ನ ಅರಮನೆಗೆ ಕರೆದೊಯ್ದು ಬಟ್ಟಲ ತುಂಬ
ಕಾಯ್ದಾರಿದ ಹಾಲು ಕೊಟ್ಟದ್ದು ನನಗಿನ್ನೂ ನೆನಪಿದೆ.

ಹುಚ್ಚಿ : ಹೌದಣ್ಣಾ. ಆಗ ಅರಮನೆ ಪ್ರಶಾಂತವಾಗಿತ್ತು.
ಆಮೇಲೆ ನೀನು ಮತ್ತು ಬಸವ ಕಣ್ಣಲ್ಲಿ ಕಣ್ಣಿಟ್ಟು
ನೋಡಿಕೊಂಡಿರಿ.
ಅವನೇನು ಕೇಳಿಕೊಂಡ, ನೀನೇನು
ಭರವಸೆ ಕೊಟ್ಟೆ,
ನನಗೆ ತಿಳಿಯದು. ಆದರೆ ಬಸವಣ್ಣ
ನಿನ್ನೆರಡೂ ಕೈ ಹಿಡಿದು
ಕಣ್ಣೊತ್ತಿಕೊಂಡು -

ಕಾಳಿಯ ಕಣ್ ಕಾಣದ ಮುನ್ನ
ತ್ರಿಪುರ ಸಂಹಾರದಿಂದ ಮುನ್ನ
ಹರಿವಿರಿಂಚಿಗಳಿಂದ ಮುನ್ನ
ಉಮೆಯ ಕಲ್ಯಾಣದಿಂದ ಮುನ್ನ ಮುನ್ನ ಮುನ್ನ
ಅಂದಿಂಗೆಳೆಯ ನೀನು ಹಳಬ ನಾನು
ಮಹಾದಾನಿ ಕೂಡಲ ಸಂಗಮದೇವಾ.

ಅಂತ ಹೇಳಿದ್ದು ನೆನಪಿದೆಯೆ? ಆ ದೃಶ್ಯ ಇಂದಿಗೂ ನನ್ನ ಕಣ್ಣು ಕಟ್ಟಿದೆ!

ಸಂಗಯ್ಯ : ನಿನ್ನ ನೆನಪಿನ ಶಕ್ತಿಯ ಬಗ್ಗೆ ಆಶ್ಚರ್ಯವಾಗುತ್ತದೆ ತಾಯಿ.
ಸಂಬಂಧಗಳ ತೊಡಕಿರುವುದು ಅಲ್ಲಿಯೇ.
ಅಂತರಾತ್ಮನೇ ಪ್ರಾಚೀನತಮ. ಅದೇ ಕೂಡಲ ಸಂಗಯ್ಯನನ್ನು,
ಬಸವನನ್ನು ಹುಟ್ಟಿಸಿದ್ದು, ಅದು ಹೇಗೆಂದು ತಿಳಿಯಲು
ಬಸವ ಪ್ರಯತ್ನಿಸಿದ. ಆದರೆ ಕೊನೆಗೂ (..ನಿಟ್ಟುಸಿರು ಬಿಡುವನು)

ಹುಚ್ಚಿ : ನಿನ್ನ ನಿಟ್ಟುಸಿರು ನಾನು ಅರ್ಥಮಾಡಿಕೊಳ್ಳಬಲ್ಲೆ ಸಂಗಯ್ಯ!
ಮರ್ತ್ಯದ ಹಲವಾರು ಸಂಬಂಧಗಳಲ್ಲಿ ನಿನ್ನೊಂದಿಗಿನ
ಮೂಲ ಸಂಬಂಧವನ್ನು ಬಸವಣ್ಣ ಮರೆಯಲೇ ಇಲ್ಲ.
ಅರಮನೆಯ ಪಕ್ಕದಲ್ಲಿ ಮಹಾಮನೆಯನ್ನೂ ಕಟ್ಟಿದ.
ಅರಮನೆ ಮಹಾಮನೆಗಳು ಅಕ್ಕಪಕ್ಕ ಅದ್ದರೂ ಅವರೆಡರ
ಮುಖಗಳು ಮಾತ್ರ ಬೇರೆ ಬೇರೆ ದಿಕ್ಕಿಗೆ ಚಾಚಿದ್ದವು.
ಅರಮನೆಯಲ್ಲಿದ್ದವರಿಗೆ ಮಹಾಮನೆ ಕಾಣಲಿಲ್ಲ.

ಮಹಾಮನೆಯಲ್ಲಿದ್ದವರಿಗೆ ಅರಮನೆ ಕಾಣಲಿಲ್ಲ.
ಮಹಾಮನೆಗೆ ಶರಣರು ಬೇಕು:
ಅವರಿಗೆ ಅರಮನೆಯ ಗುರುತಿಲ್ಲ.
ಅವರು ತಂತಮ್ಮ ಕಾಯಕಗಳಲ್ಲಿ ನಿರತರು.
ಅರಮನೆಗೆ ಕೊಂಡೆಯರು ಬೇಕು. ಕೊಂಡೆಯರು
ಚಾಡಿ ಹೇಳಿದರು.
ಚಾಡಿಯ ಸಮರ್ಥನೆಗೆ ಸುಳ್ಳು ಹೇಳಿದರು.
ಸುಳ್ಳನ್ನ ನಿಜ ಮಾಡಲು ಮೋಸ ಮಾಡಿದರು.
ಪರಿಣಾಮವೆಂದರೆ ಶರಣರು ಕಣ್ಣು
ಕಳೆದುಕೊಳ್ಳಬೇಕಾಯಿತು.
ಮೊನ್ನೆ ಅವರನ್ನು ಶೂಲಕ್ಕೇರಿಸುವಾಗ
ಅಡ್ಡನಿಂತ ನನ್ನನ್ನ
ಬಿಜ್ಜಳ ಅವಮಾನಿಸಿದ.
ಕಲ್ಯಾಣದ ಬದುಕು ಕಗ್ಗಂಟಾಗುತ್ತಿದ್ದಂತೆ
ಬಸವಣ್ಣ ನಿನ್ನನ್ನ ತುಂಬ ಜ್ಞಾಪಿಸಿಕೊಂಡ.
ನೀನು ಬರಲೇ ಇಲ್ಲ.
ನಾನು ಹುಚ್ಚಿಯಾಗಿ
ಬೀದಿ ಬೀದಿ ಅಲೆದರೂ ರಕ್ಷಣೆಗೆ ಯಾರೂ ಬರಲಿಲ್ಲ.
ಎಲ್ಲ ಮುಗಿದ ಮೇಲೆ ಈಗ ಬಂದಿದ್ದೀಯಲ್ಲಪ್ಪ,
ಪರದೆ ಎಳೆಯುವುದಕ್ಕೆ!

ಸಂಗಯ್ಯ : ನಾಟಕ ಮುಗಿಯಲೇಬೇಕಲ್ಲ, ತಾಯಿ.
ನಾಟಕದ ನಾಂದಿಗೆ ಆವಾಹಿತನಾಗಿ ನಾನು ಬಂದಿದ್ದೆ.
ಈಗ ವಿಸರ್ಜನೆ ಅಥವಾ ಭರತವಾಕ್ಯಕ್ಕೆ ಬಂದಿದ್ದೇನೆ.
ಆವಾಹಿತರಾದವರೇ ವಿಸರ್ಜನೆಗೊಳ್ಳಬೇಕಾದ್ದರಿಂದ
ನಾನೇ ಬರಬೇಕಾಯಿತು ತಾಯಿ.

ಹುಚ್ಚಿ : ಭರತವಾಕ್ಯ ಮುಗಿಸಿಕೊಂಡು ನೀನೇನೋ ಆಟ ಕಿತ್ತುಕೊಂಡು
ಹೋಗ್ತೀಯ. ಮುಂದೆ ನನ್ನ ಗತಿಯೇನು?

ಸಂಗಯ್ಯ : ಭರತವಾಕ್ಯವನ್ನ ನಿನ್ನ ಸನ್ನಿಧಿಯಲ್ಲೇ
ಸಾರುತ್ತೇನೆ.
ನೀನಾದರು ನನಗೆ ಸೂಳೆ ಸಾವಂತ್ರಿಯ
ಮನೆ ತೋರಿಸುವೆಯ?

ಹುಚ್ಚಿ : ನಿನಗೆಲ್ಲೋ ಹುಚ್ಚು! ಕಂಡೆಯಾ ಕಲ್ಯಾಣವ?
ಇಂದು ಶಿವರಾತ್ರಿ; ಬೆಳಕಿಲ್ಲ ದೇವಾಲಯಗಳಲ್ಲಿ.
ಕತ್ತಲೆಯಲ್ಲಿ ಅಡಗಿಕೊಂಡಿದ್ದಾವೆ ದೇವರುಗಳೆಲ್ಲ
ರಾಜನಿಗೆ ಹೆದರಿ! ನಗರದೇವತೆಯಾದ ನನಗೇ ಗೊತ್ತಾಗುತ್ತಿಲ್ಲ, -
ಯಾವುದು ನಗರ? ಯಾವುದು ಸ್ಮಶಾನ? ಅಂತ!
ಇನ್ನಿವನಿಗೆ ಸಾವಂತ್ರಿಯ ಮನೆ ತೋರಿಸಬೇಕಂತೆ!
ಆ ಕೆಲಸ ನನ್ನಿಂದಾಗದಪ್ಪ *(ಹೋಗುವಳು)*

ದಾಮೋದರ : *(ಮನೆಯೊಳಗಿನಿಂದ ಹೊರಬಂದು)*
ಯಾರ್ಯಾರ್ಕೆ ತೋರಿಸಬೇಕು? ನಾನಿದ್ದೇನೆ ಬಾ ಮಿತ್ರಾ.

ಕಾಶವ್ವ : *(ಆಶ್ಚರ್ಯದಿಂದ)* ಅಯ್ಯ! ಇವ ಎಲ್ಲಿಯವ, ಯಾವಾಗ ಬಂದು ಅಡಗಿದ್ದ?
ಯಾರಲಾ ನೀನು?

ದಾಮೋದರ : ಸುಮ್ಕಿರಮ್ಮ ನೀನು!
*(ಸಂಗಯ್ಯನಿಗೆ)* ನಿನಗೆ ಸೂಳೆ ಸಾವಂತ್ರಿಯ ಮನೆ ತೋರಿಸುತ್ತೇನೆ.
ಬಾ ಅಕೊ ಅಲ್ಲಿ ಬೆಳಕಿರೋ ಮಹಡಿಮನೆ ಇದೆಯಲ್ಲ?
ಅದೇ ಅವಳ ಮನೆ. ನೀನೊಬ್ಬನೇ ಹೋಗಬೇಕು.

*(ಅಷ್ಟರಲ್ಲಿ ರಾಜಭಟರು ಒಬ್ಬ ಕಳ್ಳನನ್ನು ಅಟ್ಟಿಸಿಕೊಂಡು ಬರುತ್ತಾರೆ. ಮುದುಕಪ್ಪ ಮತ್ತು ಕಾಶವ್ವ ಗಾಬರಿಯಾಗಿ ಮನೆಯೊಳಕ್ಕೆ ನುಗ್ಗಿ ಬಾಗಿಲಿಕ್ಕಿಕೊಳ್ಳುತ್ತಾರೆ. ತಕ್ಷಣ ದಾಮೋದರ ಬೇರೆ ಕಡೆಗೆ ಓಡಿಹೋಗುತ್ತಾನೆ. ಬೆರಗಿನಿಂದ ಎಲ್ಲವನ್ನು ಗಮನಿಸುತ್ತ ಸಂಗಯ್ಯ ಹಾಗೇ ನಿಂತಿದ್ದಾನೆ. ಅವನು ರಾಜಭಟರಿಗೆ ಕಾಣುವುದಿಲ್ಲ. ಸ್ವಲ್ಪ ಹೊತ್ತು ಹೀಗೇ ಇದ್ದು ಇನ್ನೇನು ರಾಜಭಟರು ಬರುವುದಿಲ್ಲವೆನಿಸಿದಾಗ ಕಾಶವ್ವ ಹೊರಬರುವಳು.)*

ಕಾಶವ್ವ : ಆ ಇನ್ನೊಬ್ಬಾವ ಎಲ್ಲಿ ಹೋದನಪಾ ಸಂಗಯ್ಯಾ?
ಮನೆಯಂತ ಮನೆಯೆಲ್ಲಾ ಹೊಲಸ ನಾರಾಕ ಹತ್ತೇತಿ!

ಮುದುಕ : *(ಹೊರಬಂದು)* ಆ ಇನ್ನೊಬ್ಬ ಹುಡುಗ ಎಲ್ಲಿ ಹೋದ?
ಸತ್ತ ಹೆಗ್ಗಣಧಾಂಗ ನಾರತೈತಲ್ಲ ಮನ್ಯಾಗ?

ಕಾಶವ್ವ : ಮನ್ಯಾಗ ಏನ ಮಾಡ್ಯಾನ ನೋಡು.

*(ಮುದುಕ ಒಳಗೆ ಹೋಗುವನು. ದಾಮೋದರ ಮತ್ತೆ ಬರುವನು. ಅಷ್ಟರಲ್ಲಿ ಮುದುಕ ಸರ ತಗೊಂಡು ಹೊರಬರುವನು.)*

ಮುದುಕ : ಇಕಾ ಇಲ್ಲಿದೆ ನೋಡೇ ಹೆಗ್ಗಣ!
ಇದ್ಯಾರದು ನಿಂದೇನೋ ತಮ್ಮ?

ದಾಮೋದರ : ಹೌದು.

ಮುದುಕ : *(ಅವನ ಮೇಲೆ ಸರ ಚೆಲ್ಲಿ)* ತಗೊ ಮಾರಾಯಾ! ಕೊತವಾಲನ ಮ್ಯಾಲ
ಬಿಸಾಕೋಣ ಅಂತಿದ್ದೆ. ಸಧ್ಯ ನೀನೇ ಬಂದೆ, ತಗೊಂಡ್ಹೋಗು.

ದಾಮೋದರ : ಇದರ ಕಿಮ್ಮತ್ತ ಎಷ್ಟ ಗೊತ್ತೈತೇನ?

ಕಾಶವ್ವ : ಎಷ್ಟಾದರು ಇರಲೊ ಎಪ್ಪಾ, ನಮಗ ಅದು ಬ್ಯಾಡ.
ನಾವದನ್ನೇನೂ ಕಾಯಕ ಮಾಡಿ ಗಳಿಸಿಲ್ಲ.
ನಮಗದರ ಗರ್ಜೂ ಇಲ್ಲ. ನೀನs ತಗೊಂಡ್ಹೋಗು. ಬಾ ಮುದುಕಾ.

ದಾಮೋದರ : ಸಂಗಯ್ಯಾ, ಸೂಳೆ ಸಾವಂತ್ರಿಯ ಮನೆ
ಯಾವುದಂತ ಗೊತ್ತಾಯ್ತಲ್ಲ?
ದ್ವಾರಪಾಲಕರಿಗೆ ಈ ಸರ ತೋರಿಸು.
ಅಂದರs ಒಳಗ ಬಿಡತಾರ.
ಸಾವಂತ್ರೀನೇ ಬಂದ ಕೇಳಿದಾಗ ಈ ಸರ ಕೊಡು.
ಅಂದರ ಒಳಗ ಕರೆದುಕೊಂಡು ಹೋಗತಾಳ.
ತಿಳಿಯಿತ? ಹೆದರಬ್ಯಾಡ, ತಗೊ, ಹೋಗು.

*(ಸಂಗಯ್ಯ ಸರ ತಗೊಂಡು ಹೋಗುವನು)*

ಕಾಶವ್ವ : ಶಿವ ಶಿವಾ ಏನೇನೆಲ್ಲಾ ನಡದೈತೆಲ್ಲೊ ಶಿವನೇ
ನಮ್ಮ ಕೇರೀ ಒಳಗ! ದೇವರು ದಿಂಡರು ಹುಚ್ಚರು
ರಾಜಬಟ್ರು ರಾಜರು ಮಂತ್ರಿಗಳು ಎಲ್ಲಾರೂ ಇಲ್ಲೇ
ಬರಾಕ ಹತ್ಯಾರಲ್ಲೋ ಶಿವನೇ!
ಇನ್ನೂ ಏನೇನು ಕಾದಿದೆಯೋ ಈ ರಾತ್ರಿ!

ದಾಮೋದರ : ನಿನ್ನ ಗುಡಿಸಲಲ್ಲಿ ಇನ್ನೂ ಒಬ್ಬಾವಿದ್ದಾನ! ಹುಷಾರಬೇ.
*(ಓಡಿಹೋಗುವನು).*

## ದೃಶ್ಯ ಎರಡು

*(ಸಾವಂತ್ರಿಯ ಮನೆ, ದೊಡ್ಡ ಪಡಸಾಲೆ, ಅದಕ್ಕಂಟಿಕೊಂಡು ಒಂದು ಕೋಣೆ ಮಾತ್ರ ಕಾಣುತ್ತದೆ. ಬಾಗಿಲಲ್ಲಿ ಕೋಲು ಹಿಡಿದು ನಿಂತ ದ್ವಾರಪಾಲಕ. ಪಡಸಾಲೆಯಲ್ಲಿ ಸಾವಂತ್ರಿ ಕೂತಿದ್ದಾಗ ಬಾಗಿಲಲ್ಲಿ ಮುಗ್ಧ ಸಂಗಯ್ಯ ಕಾಣಿಸಿಕೊಳ್ಳುವನು. ದ್ವಾರಪಾಲಕ ಕೋಲೊಡ್ಡಿ ತಡೆಯುವನು.)*

ಸಂಗಯ್ಯ : ಸೂಳೆ ಸಾವಂತ್ರಿಯ ಮನೆ ಇದೆಯೊ?

ದ್ವಾರಪಾಲಕ : ಹೌದು.

*(ಕೂತಿದ್ದ ಸಾವಂತ್ರಿ ಸಂಗಯ್ಯನನ್ನು ನೋಡಿ ಆಶ್ಚರ್ಯ ಮತ್ತು ಆತಂಕವಾಗಿ ತಕ್ಷಣ ನಿಂತುಕೊಂಡು)*

ಸಾವಂತ್ರಿ : ಅಯ್ಯೋ ಶಿವನೆ! ಮುಗ್ಧ ಬಾಲಕ!
ಮಿಕ್ಕ ಮಿಂಡಯ್ಯಗಳಂತೆ ಸಾಮಾನ್ಯ ಜಂಗಮವಿದಲ್ಲ!
ನೆತ್ತಿಯ ಮಾಂಸವಾರದ ಈ ಕೂಸನ್ನು
ಇಲ್ಲಿಗ್ಯಾರು ಕಳಿಸಿದರು ಪಾಪಿಗಳು?
ಯಾರು ನೀವು?

*(ಅಷ್ಟರಲ್ಲಿ ದ್ವಾರಪಾಲಕ ಸಂಗಯ್ಯನನ್ನು ಒಳಗೆ ಬಿಡುವನು)*

ಸಂಗಯ್ಯ : ನಾನು ಮುಗ್ಧಸಂಗಯ್ಯ
ನೀನು ಸೂಳೆ ಸಾವಂತ್ರಿ ಅಲ್ಲವೊ?

ಸಾವಂತ್ರಿ : ಹೌದು ಸ್ವಾಮಿ. ಬನ್ನಿ ಕೂತ್ಕೊಳ್ಳಿ.
ಬಾಯಾರಿಕೆಗೇನಾದರೂ ಕೊಡಲೆ?

ಸಂಗಯ್ಯ : ಬಾಯಾರಿಕೆ? ಬೇಡ ಬೇಡ.
ನೀನು ವೃದ್ಧೆಯಾಗಿರುವೆಯಲ್ಲ? ನನ್ನನ್ನ ಇಲ್ಲಿಗೆ ಕಳಿಸಿದವರು
ನೀನು ವೃದ್ಧೆ ಅಂತ ಹೇಳಲಿಲ್ಲ!
ಹಾ ಈಗ ನೆನಪಾಯಿತು - ನನಗೆ
ಬೇಕಾದ್ದು ಕಾಮಾಕ್ಷಿ ಎಂಬ ಹುಡುಗಿ,
ಇವಳಲ್ಲ! ಕಾಮಾಕ್ಷಿ ಇಲ್ಲೇ ಇರುವಳೊ?

ಸಾವಂತ್ರಿ : ಹೌದು, ಕಾಮಾಕ್ಷಿ ಇರೋದು ನಮ್ಮಲ್ಲೆ ಸ್ವಾಮಿ.

ಸಂಗಯ್ಯ : ನಿನ್ನ ಹೆಸರು ಸಾವಂತ್ರಿ ಎಂದೆಯಲ್ಲ?

ಸಾವಂತ್ರಿ : ಇದರೊಳಗೆ ಗೊಂದಲ ಮಾಡಿಕೊಳ್ಳುವುದೇನಿದೆ ಸ್ವಾಮಿ?
ನೀವು ಮುಗ್ಧಸಂಗಯ್ಯನವರು, ನಾನು ಸೂಳೆ ಸಾವಂತ್ರಿ
ನನ್ನ ಮನೆಯಲ್ಲಿ ನಾಲ್ಕು ಜನ ಚೆಲುವೆಯರಿದ್ದಾರೆ.

ಸಂಗಯ್ಯ : ನನಗೆ ಒಬ್ಬಳು ಮಾತ್ರ ಸಾಕು.

ಸಾವಂತ್ರಿ : ಆಯ್ತು. ಆ ನಾಲ್ಕೂ ಜನ ನಿಮ್ಮೆದುರು ಬರುತ್ತಾರೆ.
ಅವರಲ್ಲಿ ಯಾರು ಬೇಕೋ ಅವರನ್ನು ಆರಿಸಿಕೊಂಡು
ವಿಶ್ರಾಂತಿ ತಗೊಳ್ಳಿರಿ.

ಸಂಗಯ್ಯ : ನಾನು ವಿಶ್ರಾಂತಿಗಾಗಿ ಬರಲಿಲ್ಲ.

ಸಾವಂತ್ರಿ : *(ಮುಗುಳು ನಗುತ್ತ)* ಆಯ್ತು. ಮೊದಲು ಆಯ್ಕೆ ಆಗಲಿ.
ಏ ಲಲಿತಾ, ವನಜಾ, ಶಾರದಾ, ಕಾಮಾಕ್ಷಿ ಬನ್ನಿರೇ.
*(ನಾಲ್ಕೂ ಜನ ಹುಡುಗಿಯರು ಬಂದು ಸಾಲಾಗಿ ನಿಲ್ಲುವರು.)*
ಇವರೇ ನೋಡಿರಿ.
ಇವಳು ಲಲಿತ ಚೆನ್ನಾಗಿ ಉತ್ತರಾದಿ ಹಾಡುತ್ತಾಳೆ.
ಇವಳು ಶಾರದೆ ಕೇರಳದವಳು.
ಸೊಗಸಾಗಿ ವೀಣೆ ನುಡಿಸುತ್ತಾಳೆ.

ಸಂಗಯ್ಯ : ನನಗೆ ಸಂಗೀತ ಕಛೇರಿ ಬೇಡ.

ಸಾವಂತ್ರಿ :ಆಯ್ತು, ಇವಳು ವನಜ, ಭರತನಾಟ್ಯ ಪ್ರವೀಣೆ.

ಸಂಗಯ್ಯ : ನನಗೆ ಭರತನಾಟ್ಯ ಮಾತ್ರ ದಯಮಾಡಿ ಬೇಡ.

ಸಾವಂತ್ರಿ : ಆಗಲಿ, ಇವಳು ಕಾಮಾಕ್ಷಿ, ಬನವಾಸಿಯವಳು.
ನಿಮಗೆ ಯಾರು ಬೇಕೋ ಅವರನ್ನ ಆಯ್ದುಕೊಳ್ಳಿರಿ.

ಸಂಗಯ್ಯ : ಎಲ್ಲರೂ ಸುಂದರಿಯರೆ.
ಆದರೆ ಕಾಮಾಕ್ಷಿ ಅತಿ ಸುಂದರಿ!
ನನಗೆ ಕಾಮಾಕ್ಷಿಯೇ ಇರಲಿ.

ಸಾವಂತ್ರಿ : ಆಕೆ ಮಹಾರಾಜರಿಗಾಗಿ ಕಾಯುತ್ತಿದ್ದಾಳೆ.
ಅವಲ ಬೆಲೆಯೂ ದುಬಾರಿ.
ಇನ್ನುಳಿದ ಮೂವರಲ್ಲಿ ಯಾರಾದರೂ...

ಸಂಗಯ್ಯ : ಏನು ನೀನು ಹೇಳುವುದು?
ನಾನು ಬಂದಿದ್ದೇ ಕಾಮಾಕ್ಷಿಗಾಗಿ.
ಅವಲಿಗೆ ಮಹಾರಾಜ ಕೊಡೋ ಬೆಲೆಯನ್ನ
ನಾನೇ ಕೊಟ್ಟರೆ ಸಾಲದೊ?
ಇಕೊ ಈ ಸರ ತೆಗೆದುಕೊ -
ಮಹಾರಾಜ ಕೊಡುವ ಬೆಲೆಗಿಂತ ಇದು
ಹೆಚ್ಚಿಗಿದೆಯೋ ಇಲ್ಲವೋ ಹೇಳು.

*(ಸರವನ್ನು ಸಾವಂತ್ರಿಯ ಕೈಗೆ ಕೊಡುವನು. ತುಸು ಹೊತ್ತು ನೋಡಿ ಸಾವಂತ್ರಿ ಕಾಮಾಕ್ಷಿಯ ಕೈಗೆ ಕೊಡುವಳು. ಕಾಮಾಕ್ಷಿ ಸರವನ್ನು ನೋಡಿ ಆಮೇಲೆ - ತಿರುಗಿ ಸಾವಂತ್ರಿಗೇ ಕೊಡುವಳು.)*

ಕಾಮಾಕ್ಷಿ : ಅಮ್ಮಾ ಈ ಸರದ ಬೆಲೆ ನನ್ನ ಬೆಲೆಗಿಂತ ಹೆಚ್ಚು.
ನನಗಿದು ಬೇಡ. ಆತ್ಮಸಂತೋಷಕ್ಕಾಗಿ ನಾನಿವರ ಸೇವೆ
ಮಾಡುತ್ತೇನೆ. ದಯವಿಟ್ಟು ಅಪ್ಪಣೆ ಕೊಡು.
ಮುಂದಿನದು ನಿನ್ನ ಜವಾಬ್ದಾರಿ.

ಸಾವಂತ್ರಿ : ಧನ್ಯಳಾದೆ ಮಗಳೆ!
ಜೊತೆಗೆ ನನ್ನನ್ನೂ ಧನ್ಯಳನ್ನಾಗಿಸಿದೆ.
ಹೋಗು. ಮುಗ್ಧಸಂಗಯ್ಯನಿಗೆ ಅವನು ಬಯಸುವ ಸುಖಗಳ
ನೀಡಿ ಸಂತೋಷಪಡಿಸು.

*(ಕಾಮಾಕ್ಷಿ ಸಂಗಯ್ಯನ ಕೈಹಿಡಿದು ಒಳಗೆ ಕರೆದೊಯ್ಯುವಳು. ಉಳಿದ ಹುಡುಗಿಯರೂ ಒಬ್ಬೊಬ್ಬರೇ ಹೋಗುವರು. ಸಾವಂತ್ರಿ ಸರವನ್ನೇ ನೋಡುತ್ತ)*
ಇದರಲ್ಲೇನೋ ಮೋಸ ಅಡಗಿರುವಂತಿದೆಯಲ್ಲ!
ಬೆಲೆಯುಳ್ಳ ಈ ಸರ ಮುಗ್ಧಸಂಗಯ್ಯನವರ
ಕೈಗೆ ಹ್ಯಾಗೆ ಬಂತು? ಅಣ್ಣಾವರಿಗೆ ಈ ಸಮಾಚಾರ
ಗೊತ್ತಿದೆಯೆ?
ಅಥವಾ ಅಣ್ಣಾವರೇ ಈ ಸರ ಕೊಟ್ಟು
ಕಳಿಸಿರಬಹುದ?
ಮೊದಲೇ ಊರು ಹೊತ್ತಿ
ಉರಿಯುತ್ತಿದೆ.
ಅಂಥದರಲ್ಲಿ ಇದೇನಾಗುತ್ತಿದೆ ಶಿವನೆ!
*(ಕೋಣೆಯೊಳಗೆ ಹೊಕ್ಕ ಸಂಗಯ್ಯನಿಗೆ ದಿಗಿಲು, ಅಲ್ಲಿಯ ವಿಲಾಸ ಸಾಧನೆಗಳ ಬಗ್ಗೆ ಮಂತ್ರಮುಗ್ಧನಾಗಿದ್ದಾನೆ.)*

ಸಂಗಯ್ಯ : ಅದ್ಭುತ! ಆನಂದ!
ಅದ್ಭುತಾದ್ಭುತ. ಮೃದುತಲ್ಪ!
ಹಾಸು ಮಂಚದ ಉಯ್ಯಾಲೆ!
ಕುಂಬಕಾಳಂಜಿಕ ಬೀಸಣಿಗೆ! ಅಡಕೆಲೆ ತಟ್ಟೆ!
ನಿಲುವುಗನ್ನಡಿ! ಗಂಧ ಬಟ್ಟಲು ವಸ್ತ್ರಾಭರಣ!
ಮೃಗಮದ ಚಂದನ ಕರ್ಪೂರ ಜವ್ವಾಜಿ!
ಕುಂಕುಮಾಗರು ಮಿಶ್ರಿತ ಸುಗಂಧವಾರಿಯ ಸಾರಣೆ ಕಾರಣೆ!
ದಿವ್ಯ ಗಂಧಾಕ್ಷತೆ! ಕಂಪಿನಿಂದೆಸೆವ ಶಯ್ಯಾಗ್ರಹ! ಆನಂದ!
ಆಹಾ ಇದು ಇಂದ್ರನ ಅರಮನೆಯೊ!
ಆಹಾ ಇವಳು ಅಪ್ಸರೆಯೇ ಸೈ.
ಲೋಕೋತ್ತರ ಸುಂದರಿ ಕಾಮಾಕ್ಷೀ, -

ಕಾಮಾಕ್ಷಿ : ಸ್ವಾಮೀ,

ಸಂಗಯ್ಯ : ನಾನು ಈ ಹಾಸಿಗೆಯ ಮೇಲೆ ಕುಳಿತುಕೊಂಡು
ಲಿಂಗಪೂಜೆ ಮಾಡಬೇಕು. ಹನ್ನೊಂದು ಸಲ
ಮಾಡಬೇಕಾದ ಪೂಜೆ
ಅದು. ಸಾಮಾನ್ಯವಲ್ಲ! ಅದರಿಂದ
ಸಿಗುವಂಥಾ ಆನಂದ
ಬೇರೆ ಇಲ್ಲವೆಂದು ನಿನಗೇ ತಿಳಿಯುತ್ತದೆ.
ಆ ಪೂಜೆ ಮಾಡುವುದಕ್ಕೆ ನೀನು ನನಗೆ ಸಹಾಯ
ಮಾಡಬೇಕು, ಆದೀತೊ?

ಕಾಮಾಕ್ಷಿ : ಆಗಲಿ ಸ್ವಾಮಿ. ತಾವು ಹೇಳಿದಂತೇ ಮಾಡುತ್ತೇನೆ.

ಸಂಗಯ್ಯ : ನೀನು ಬೇಗನೆ ಸ್ನಾನ ಮಾಡಿ
ಬೆಳಗಿದ ಪಾತ್ರೆಯಲ್ಲಿ ಮಡಿನೀರಿನೊಮದಿಗೆ
ಒದ್ದೆ ಬಟ್ಟೆಯಲ್ಲೇ ಬರಬೇಕು.
ಹಾಗೆಯೇ ಪತ್ರೆ ಹೂವು ವಿಭೂತಿ
ಮುಂತಾದ ಪೂಜಾ ಸಾಮಗ್ರಿಗಳನ್ನು
ತಗೊಂಬಾ.

ಕಾಮಾಕ್ಷಿ : ಆಯ್ತು ಸ್ವಾಮಿ.
*(ಹೋಗುವಳು. ಇವನು ಆನಂದ! ಶ್ರೇಷ್ಠ! ಶ್ರೇಷ್ಠಾತಿಶ್ರೇಷ್ಠವೆನ್ನುತ್ತ ಕೋಣೆಯ ಒಂದೊಂದೇ ವಸ್ತುವನ್ನು ಮೆಚ್ಚುತ್ತ, ಕೈಯಿಂದ ಸವರುತ್ತ, ಮೂಸುತ್ತ, ಬಿದ್ದರೆ ಎಲ್ಲಿಡಬೇಕೆಂದು ಗೊಂದಲಿಸುತ್ತ ಕಾಮಾಕ್ಷಿ ಪೂಜಾ ಸಾಮಗ್ರಿಗಳ ತರುವತನಕ ಹೀಗೇ ಮಾಡುತ್ತ ಇರುತ್ತಾನೆ. ಆಕೆ ಬಂದ ನಂತರ ಲಿಂಗಪೂಜೆ ಸುರುಮಾಡುತ್ತಾನೆ.*
*"ಓಂ ನಮಃ ಶಿವಾಯ" ಎಂದು ಮಂತ್ರೋಚ್ಚಾರಣೆ ಮಾಡುತ್ತ ಪೂಜೆ ಮಾಡುತ್ತಿದ್ದಂತೆ ಅವಳು ಆಗಾಗ ಪತ್ರಿ, ಹೂವು ಕೊಡುತ್ತ ಸಹಕರಿಸುತ್ತಾಳೆ. ಇನ್ನು ಮೇಲೆ ಸಾವಂತ್ರಿಯ ಮನೆಯಲ್ಲಿ ದೃಶ್ಯಗಳು ನಡೆವಾಗೆಲ್ಲ ಬೇಕೆನಿಸಿದಾಗ ಮಂತ್ರೋಚ್ಚಾರಣೆ ಮೆಲ್ಲಗೆ ಕೇಳಿಸುತ್ತಿರಬಹುದು.)*

## ದೃಶ್ಯ ಮೂರು

*(ಜಂಗಮ ವೇಷದಲ್ಲಿರುವ ಇಬ್ಬರು ಹರಿಹರ, ದಾಮೋದರ - ತಂದೆ, ಮಗ ಹೆದರಿ ಹಿಂದೆ ಮುಂದೆ ನೋಡಿಕೊಂಡು ಓಡಿ ಬರುವರು. ಕಟ್ಟೆಯ ಮೇಲೆ ಕೂತು ಟಕಮಕ ನೋಡುತ್ತಾರೆ. ಆದರೆ ಅಲ್ಲೇ ಕೊಂಚ ದೂರದಲ್ಲಿ ಮರದ ಕಟ್ಟೆಯ ಮೇಲೆ ಕೂತ ಕಳ್ಳ ಚಿಕ್ಕಣ್ಣ ಇವರನ್ನು ನಿರ್ಲಕ್ಷಿಸಿ ತನ್ನ ಪಾಡಿಗೆ ತಾನು ಸಾವಂತ್ರಿಯ ಮನೆಯ ಕಡೆಗೇ ನೋಡುತ್ತ ಕೂತಿದ್ದಾನೆ. ಇಬ್ಬರೂ ಚಿಕ್ಕಣ್ಣನಿಗೆ ಕೇಳಿಸದಂತೆ ಮಾತಾಡಿಕೊಳ್ಳುತ್ತಾರೆ.)*

ಹರಿಹರ : ನಾವೇನಾರ ತಪ್ಪಿ ದಲಿತರ ಕೇರಿಗೆ ಬಂದೀವೇನು?

ದಾಮೋದರ : ಹೌದೊ ಏನೊ!

ಹರಿಹರ : ಮುಠ್ಠಾಳ ನಿನಗೊಂದು ಮಡಿ ಇಲ್ಲ, ಮೈಲಿಗೆ ಇಲ್ಲ.

ದಾಮೋದರ : ಮೊದಲು ರಾಜಭಟರಿಂದ ಪಾರಾಗೋದನ್ನ
ನೋಡಿಕೊಳ್ಳಪ್ಪ. ಆಮ್ಯಾಲ ಬೇಕಾದರ
ಸ್ನಾನ ಮಾಡಿದರಾಯ್ತು.

ಹರಿಹರ : ಏನ ಚಂಡಾಲ ಮಗ ಹುಟ್ಟಿದ್ದೀಯೋ ನನ್ನ ಮನೆತನದಾಗ!
ನಿನ್ನನ್ನು ಎಷ್ಟ ಬೈದರೂ ನನ್ನ ಕೋಪ ಹೋಗೋದಿಲ್ಲ.

ದಾಮೋದರ : ಹಾಂಗಿದ್ದರ ಬೈಬ್ಯಾಡ ಸುಮ್ಮನಿರು.

ಹರಿಹರ : ನೀ ಮಾಡಿದ ಕೆಲಸಕ್ಕ ಬೈಲಾರದಃ
ಹೆಂಗಿರಲೋ ಮುಠ್ಠಾಳ?

ದಾಮೋದರ :ಹಂಗಾದರ ಸುರು ಮಾಡು.

ಹರಿಹರ : ಅಯೋಗ್ಯ.

ದಾಮೋದರ : ನಿಜ.

ಹರಿಹರ :ನೀಚ.

ದಾಮೋದರ : ನಿಜ.

ಹರಿಹರ : ಧಗಾಕೋರ.

ದಾಮೋದರ : ಏನಾದರೂ ಹೊಸ ಬೈಗಳ ಬಯ್ಯಪ್ಪಾ.
ಹಳೇವು ಕೇಳಿ ಕೇಳಿ ಸಾಕಾಗಿ ಹೋಗಿದೆ.

ಹರಿಹರ : ಲೇ ನೀನು ಚಂಡಾಲ.

ದಾಮೋದರ : ಇದೂ ಹಳೇದೇ. ನಾನು ಚಂಡಾಲ, ನೀಚ,
ಧಗಾಕೋರ ಇಷ್ಟಕ್ಕೂ ನಿನ್ನ ಬೈಗಳೆಲ್ಲಾ ಮುಗಿದುವ?

ಹರಿಹರ : ನಿನಗ ನಾಚಿಕೆ ಬರೋ ಬೈಗಳು ಯಾವುದು? ಅದನ್ನ ಹೇಳು.

ದಾಮೋದರ : ನಿನ್ನ ಮಗನಾಗಿರೋದು.

ಹರಿಹರ : ನಾಚಿಕೆ ಬರೋವಂಥಾದ್ದು ನಾನೇನ ಮಾಡಿದ್ನೋ ಮಗನ?

ದಾಮೋದರ : ಅರಮನೆಯೊಳಗಿನ ಚಂದ್ರಸರ ಕದಿಯೋದಕ್ಕೆ
ಹೇಳಿದವನೂ ನೀನೇ. ಈಗ ಧಗಾಕೋರ ಅಂತ
ಬಯ್ಯೋನೂ ನೀನೇ!

ಹರಿಹರ : ಯಾರಾದರೂ ಕೇಳಿಸಿಕೊಂಡಾರು
ಮೆಲ್ಲಗ ಮಾತಾಡೋ ಮಗನೇ.

ದಾಮೋದರ : ಕೇಳಿಸಿಕೊಳ್ಳಬೇಕು. ಅರಮನೇಲಿ ಯಾರೋ
ನನ್ನ ಗುರುತ ಹಿಡಿದರು.
"ನೀನು ಹರಿಹರನ ಮಗ
ದಾಮ್ಯಾ ಅಲ್ಲ?
ನೀ ಯಾವಾಗ ಶಿವಶರಣನಾದೆಯಪ್ಪ?" ಅಂದರು!

ಹರಿಹರ : ಯಾರೋ ಹಾಗಂದವರು?

ದಾಮೋದರ : ನನಗೇನು ಗೊತ್ತು? ಹೆದರಿ ಅವರ ಕಡೆ ನೋಡದs
ಓಡಿ ಬಂದೆ. ಅರಮನೆಯ ತೊಲೆಬಾಗಲ
ಇನ್ನೂ ದಾಟಿರಲಿಲ್ಲ,
ಅಷ್ಟರಾಗ ಯಾರೋ ಕಳ್ಳ ಕಳ್ಳ
ಹಿಡೀರಿ ಅಂತ ಒದರಿದರು.
ಕೆಟ್ಟೆನೋ ಎಪ್ಪಾs
ಅಂತ ಓಡಿ ಓಡಿ ಬಂದೆ.

ಹರಿಹರ : ಸಧ್ಯ ಅಪ್ಪಾ ಅಂದೀದಿ, ನನ್ನ ಹೆಸರ ಹೇಳಿಲ್ಲವಲ್ಲ!
ದಾಮೋದರ : 'ಹರಿಹರನ ಮಗ ಅಲ್ಲ?' ಅಂತ ಕೇಳಿದರಲ್ಲ, ಅದಕ್ಕೇನರ್ಥ?

ಹರಿಹರ : ಅಯ್ಯೊ ಅಯ್ಯೊ ಅಯ್ಯೊ! ಚಂಡಾಲ ಮಗನೇ,
ನಿನ್ನ ಹಡೆಯೋದಕ್ಕೆ ಬದಲು ನಿನ್ನ ತಾಯಿ ಒಂದು
ಕಲ್ಲನ್ನಾದರು ಹೆತ್ತಿದ್ದರೆ ಚಲೊ ಇತ್ತಲ್ಲೊ!

ದಾಮೋದರ : ನಿನ್ನ ನೋಡಿದರೆ ನಾನು ಕಪಿಯಾಗೇ
ಹುಟ್ಟಬೇಕಾಗಿತ್ತು. ಅದರೇನು....

ಹರಿಹರ : ಅಲ್ಲಿ ಕೂತವ ಯಾರವನು?
ನಮ್ಮನ್ನs ನೋಡಾಕ ಹತ್ಯಾನ. ನಮ್ಮ ಗುರುತ ಸಿಕ್ಕಿರಬೇಕೇನು?

ದಾಮೋದರ : ನಮ್ಮ ವೇಷ ನೋಡಿಕೊಳ್ಳಪ್ಪ.
ಈ ವೇಷದೊಳಗ ಅದೂ ದಲಿತರ ಕೇರೀ ಒಳಗ
ನಮ್ಮ ಗುರುತ ಯಾರು ಹಿಡೀತಾರ?
ಅಪಾ, ರಾಜಭಟರು ಬಂದರು.

ಹರಿಹರ : ಓಡಿಹೋಗಬೇಡ. ಸುಮ್ಮನೆ ಇರು.
ಮೆಲ್ಲಗ ನಾವೂ ಅವನ ಹತ್ತಿರ ಹೋಗಿ ಕುಂತ್ಕೊಳ್ಳೋಣ, ಬಾ.
*(ಇಬ್ಬರೂ ಚಿಕ್ಕಯ್ಯನ ಬಳಿಗೆ ಹೊಗಿ ಕೂರುವರು.)*

ಚಿಕ್ಕಯ್ಯ : ಶರಣರೀ ಅಯ್ಯನವರs.

ಹರಿಹರ : ಶರಣಪಾ ಶರಣು. ಬಸವಾ ಬಸವಾ...
ಏನು ಶಕೆ, ಏನು ಶಕೆ!

ಚಿಕ್ಕಯ್ಯ : ನೀವು ಶರಣರಾಗಿ ಮೂರು ತಾಸು ಆಗಿರಬೇಕು, ಅಲ್ರಿ?

ಹರಿಹರ : *(ಬೆಚ್ಚಿ)* ನಾವು ಶರಣರಾದವರಲ್ಲಪಾ, ಹುಟ್ಟಾ ಶರಣರು.....
ಅಂಥಾಂಗ *(ಚಿಕ್ಕಯ್ಯನ ಹತ್ತಿರಕ್ಕೆ ಹೋಗಿ)* ನಾವು ಮೂರು ತಾಸಿನ
ಶರಣರಂತ ನಿನಗ್ಯಾಕ ಅನ್ನಿಸ್ತು?

ಚಿಕ್ಕಯ್ಯ : ಕಳ್ಳರಿಗೆ ಕಳ್ಳರ ಗುರುತು ಸಿಗಾಣಿಲ್ಲೇನ್ರಿ?

ದಾಮೋದರ : ಛೇ ಛೇ! ನಾವು ಕಳ್ಳರಲ್ಲರೀ.
ಇತ್ತೀಚೆಗೆ ದೀಕ್ಷಾ ತಗೊಂಡೀವಿ.

ಹರಿಹರ : ನೀವೂ ಕಳ್ಳರs ಅಂಥಾಂಗಾಯ್ತು.

ಚಿಕ್ಕಯ್ಯ : ನನ್ನ ಹೆಸರs ಕಳ್ಳ ಚಿಕ್ಕಯ್ಯ ಅಂತೀನಿ!

ದಾಮೋದರ : ನಾವು ಖರೇನs ಶರಣರು, ಅಂತೀನಿ.

ಚಿಕ್ಕಯ್ಯ : ನೋಡ್ರಿ ಅಯ್ಯನವರs, ಒಂದು ಸುಳ್ಳು
ಮುಚ್ಚೋದಕ್ಕ ಒಂದs ಸುಳ್ಳ ಹೇಳಬೇಕ್ರಿ.

ಅಂದರ ಬಚಾವಾಗ್ತೀರಿ.
ಒಂದು ಮುಚ್ಚೋದಕ್ಕ ಹತ್ತ ಸುಳ್ಳ ಹೇಳಿದರ
ಮುಚ್ಚೋದರ ಬದಲು ಅವು ತೆರಕೊಳ್ಳತಾವ್ರಿ.

ಅಷ್ಟs ಅಲ್ಲ ನೀವು ಭಾಳ ಬೇಗನೆ ದಿವಾಳಿ
ತೆಗೀತೀರಿ.

ಹರಿಹರ : ನನಗs ಸುಳ್ಳ ಅನ್ನೋನು ಯಾವನಯ್ಯ ನೀನು?

ಚಿಕ್ಕಯ್ಯ : ಹೇಳಿದೆನಲ್ಲ ಕಳ್ಳ ಚಿಕ್ಕಯ್ಯ ಅಂತ.
ಅಗಾ ಬೇಹುಗಾರರು ಬರೋ ಹೊತ್ತು! ನೋಡಿಕೊಂಡು ಮಾತಾಡ್ರಿ.
ಏನಾದರೂ ಎಡವಟ್ಟಾದರ ನೀವs ಸೈ, ನಿಮಗ ಅವರs ಸೈ.

ಹರಿಹರ : *(ಭಯದಿಂದ)* ಕ್ಷಮಿಸಬೇಕು, ವಯಸ್ಸಾಯ್ತು ನೋಡ್ರಿ,
ನಾಲಗೆ ಆಗಾಗ ನಿಯಂತ್ರಣ ತಪ್ಪತೈತಿ.
ದಯಮಾಡಿ ತಮ್ಮ ಪರಿಚಯ ಮಾಡಿಕೊಟ್ಟರ...

ಚಿಕ್ಕಯ್ಯ : ನಾನು ಶಿವಶರಣ ಕಳ್ಳ ಚಿಕ್ಕಯ್ಯ. ಕಳ್ಳನಿದ್ದವನು ಹೆಂಗ
ಶಿವಶರಣಾದೆಪ? ಅಂತ ಕೇಳ್ರೆಲ್ಲ.

ದಾಮೋದರ : ಕಳ್ಳನಾಗಿದ್ದವನು ನೀ ಹೆಂಗ ಶಿವಶರಣಾದಿ
ಶಿವಶರಣ ಕಳ್ಳ ಚಿಕ್ಕಯ್ಯ?

ಚಿಕ್ಕಯ್ಯ : ನಿಮ್ಮ ಮಗ ಬೆರಿಕಿ ಅದಾನ್ನೋಡ್ರಿ ಅಯ್ಯನವರ.
ತಮ್ಮಾ ನೀ ನನ್ನ ಕತಿ ಕೇಳಾಕsಬೇಕು.
ನಾನು ಕಳ್ಳ ಚಿಕ್ಕಯ್ಯ, ಕಾಶ್ಮೀರದವ.
ಬಸವಣ್ಣನವರನ್ನ ಕೊಲೆ ಮಾಡಬೇಕಂತ
ಅಷ್ಟ ದೂರದಿಂದ ಬಂದೆ.
ಅಣ್ಣನವರು ಎದುರು ಬಂದಾಗ, ಸಮಯ ಸಂದರ್ಭ ನೋಡಿ
ಕೊಲ್ಲಬೇಕಂತ ಕತ್ತಿಗೊಂದು ಕಲ್ಲ ಕಟಿಕೊಂಡು
ಮಹಾಮನೆಯಲ್ಲಿ ಊಟಕ್ಕ ಕುಂತೆ.
ಅವರ ಪದ್ಧತಿ ಪ್ರಕಾರ ಊಟಕ್ಕ ಮುಂಚೆ
ಎಲ್ಲಾರೂ ಲಿಂಗಪೂಜೆ ಮಾಡಿಕೊಬೇಕು.
ನಾನೂ ನನ್ನ ಕಲ್ಲ ತಗದು ಪೂಜೀ ಮಾಡಬೇಕು.
ಇಲ್ಲದಿದ್ದರ ಹೊರಗ ಹೋಗಬೇಕು.
ಪಂಕ್ತೀ ಬಿಟ್ಟು ಹೊರಗ ಹೋಗೋಹಂಗಿಲ್ಲ.
ನಾನೂ ಭಂಡತನದಿಂದ ಕತ್ತಿನಾಗಿನ ಕಲ್ಲ ತಗದು
ಅಂಗೈಯಾಗಿಟ್ಟಕೊಂಡೆ – ನೋಡು:
ಮಾಲು ಸಮೇತ ಕಳ್ಳ ಸಿಕ್ಕ ಬಿದ್ದೆ!
ಅಕ್ಕಪಕ್ಕ ಶರಣರು ಎದ್ದು ನಿಂತು ಗಲಾಟೆ ಎಬ್ಬಿಸಿದರು.
ಬಸವಣ್ಣನವರ ಕೊಲೆ ಮಾಡೋದಿರಲಿ ಪಾರಾಗಿ ಓಡಿ

ಹೋಗೋದಕ್ಕೂ ದಾರಿ ಸಿಗಧಂಗಾಯ್ತು.
ಅಷ್ಟರಾಗ ದೇವರು ಬಂಧಾಂಗ
ಅಣ್ಣಾವರು ಬಂದು
“ಸಾಕ್ಷಾತ್ ನಿಜವಾದ ಲಿಂಗ ಕಟ್ಟಿಕೊಂಡರೂ
ನಮಗದು ಕಲ್ಲು ಅನ್ನಸ್ತದೆ.
ನೀವು ಕಟ್ಟಿಕೊಂಡ ಕಲ್ಲಲ್ಲೇ ಲಿಂಗ ಕಾಣ್ತೇರಿ
ಅಂದರೆ - ಆಹಾ ಎಂಥಾ ಭಕ್ತರು!
ಏನು ಭಕ್ತಿ!”
ಅಂತ ಅಂದವರs ಉದ್ದಕ ನನ್ನ ಮುಂದ
ಉದ್ದಂಡ ಬೀಳೋದೆ?
ನಾ ಅವರನ್ನ ಕೊಲ್ಲೋದಿರಲಿ, ಅವರs
ನನ್ನೊಳಗಿನ ಕಳ್ಳನನ್ನ ಹಿಡಿದು ಕೊಂದ ಹಾಕಿದರು!
ಅಂದs ಶರಣಧರ್ಮ ದೀಕ್ಷಾ ತಗೊಂಡೆ.
ಪೂರ್ವಾಶ್ರಮದ ನೆನಪಿರಲಿ ಅಂತ
ಕಳ್ಳ ಚಿಕ್ಕಯ್ಯ ಅಂತ ಹೆಸರಿಟ್ಟುಕೊಂಡೇನಿ.
“ಇನ್ನು ಮ್ಯಾಲೆ ಕಳ್ಳತನ ಮಾಡೋದಿಲ್ಲ”
ಅಂತ ಆ ದಿನವೇ ಅಣ್ಣಾವರ ಪಾದದ
ಆಣೆ ಇಟ್ಟುಕೊಂಡೆ. ಈಗೇನೂ ಇಲ್ಲ!
ಕಾಯಕ ಮಾಡ್ತೀನಿ,
ಊಟ ಮಾಡ್ತೀನಿ, ಉಳಿದದ್ದನ್ನ ಮಹಾಮನೆಗೆ
ಕೊಡ್ತೀನಿ, ಹೆಚ್ಚ ಗಳಿಕಿ ಅದರ ತೆರಿಗೆ ಕಟ್ಟತೀನಿ.

ದಾಮೋದರ : ಕಾಯಕ ಅಂದರ ದುಡೀಬೇಕು, ತಿನ್ನಬೇಕು, ಹೌದಲ್ಲ?

ಚಿಕ್ಕಯ್ಯ : ಹೌದು ದುಡೀದೇ ತಿಂದರ ಪಾಪ.

ದಾಮೋದರ : ಹಂಗಾದರ ನಾನು ಭಾಳ ಪಾಪ ಮಾಡೀನಪ!

ಚಿಕ್ಕಯ್ಯ : ಯಾಕಂದಿ ತಮ್ಮಾ?

ದಾಮೋದರ : ನೀ ಕಾಯಕ ಮಾಡಿ ತಿಂತಿ.
ನಿನ್ನ ಪಾಪಗಳೆಲ್ಲಾ ಮಾಫ್.
ಈ ನಮ್ಮ ಗುರು *(ತಂದೆಯನ್ನು ತೋರಿಸಿ)* ಪಾಪ ಮಾಡತಾನ,
ಮಂತ್ರ ನುಡಿದು ಪಾಪ ಪರಿಹಾರ ಮಾಡಿಕೊಳ್ತಾನ.
ನಾನು? ದಿನಾಲು ಮೂರಂತೂ ಪಾಪ ಮಾಡ್ತೀನಿ.

ಚಿಕ್ಕಯ್ಯ : ದಿನಕ್ಕ ಮೂರು ಪಾಪ? ಅವ್ಯಾವ ಪಾಪಗಳೋ ತಮ್ಮಾ?

ದಾಮೋದರ : ಮೂರು ಹೊತ್ತು ಭರ್ತಿ ಊಟ ಮಾಡ್ತೀನಿ.
ಬಸವಣ್ಣನವರು ಅದನ್ನ ಪಾಪ ಅಂತ ಹೇಳತಾರ.

ಚಿಕ್ಕಯ್ಯ : ಊಟ ಮಾಡೋದು ಹೆಂಗ ಪಾಪ
ಆದೀತೋ ತಮ್ಮ?

ದಾಮೋದರ: ಹೆಂಗಂದರ ಕಾಯಕ ಮಾಡದs ಊಟ
ಮಾಡೋದು ಪಾಪ ಅಲ್ಲೇನು?

ಚಿಕ್ಕಯ್ಯ : ಭಲೆ? ಚೆಲೋ ತಿಳಕೊಂಡಿ ನೋಡ ತಮ್ಮಾ.
ನೀ ಯಾಕ ಮಹಾಮನೀಗಿ ಬರಬಾರದು?
ಅಲ್ಲಿ ನೋಡಪಾ ನಿನ್ನಂಥಾ ಹರಿತ ತಲೆ ಹುಡುಗರs
ತುಂಬ್ಯಾರ. ಏನ ವಾದ ಮಾಡತಾರ!
ಎಂತೆಂಥಾ ವಿಷಯ ಮಾತಾಡತಾರ!
ಭೆ ಭೇ ಅದನ್ನ ಕೇಳಿದರ ಇನ್ನೂ ಆನಂದ
ಆಗತೈತಿ ಮಾರಾಯಾ.

ದಾಮೋದರ : *(ಮೆಲ್ಲಗೆ)* ಅಪ್ಪ, ರಾಜಭಟರು, ಬಂದರು……

ಚಿಕ್ಕಯ್ಯ : *(ಮೆಲ್ಲಗೆ)* ಅವರು ಹೋಗೋತನಕ ನೀವಿಬ್ಬರೂ
ಆತ್ಮ ಪರಮಾತ್ಮ ಮಾತಾಡೋದು ಕ್ಷೇಮ.

ದಾಮೋದರ : *(ತಕ್ಷಣ ಗ್ರಹಿಸಿ, ತಂದೆ ಮಗ ಗುರುಶಿಷ್ಯರಂತೆ ಅಭಿನಯಿಸುವರು.)*
ಅಲ್ಲಪಾ ಗುರುವೇ, ನಿನ್ನ ಹತ್ತರ ಒಂದು ಆತ್ಮ ಇದೆ ಅಂತಲ್ಲ?
ಇಷ್ಟು ದಿನ ಆದರೂ ನೀ ನನಗ ಹೇಳಲೇ ಇಲ್ಲ!

ಹರಿಹರ : ಯಾರೋ ಒಬ್ಬ ಮಹಾತ್ಮ ಗುರುವಾಗಿ ಬಂದು
ನನ್ನಲ್ಲಿ ಆತ್ಮ ಇದ್ದದ್ದನ್ನು ಹೇಳಿದ, ಸಾಕ್ಷಾತ್ಕಾರ
ಮಾಡಿಸಿಯೂ ಬಿಟ್ಟ!

ದಾಮೋದರ : ನಿನಗ ಸಾಕ್ಷಾತ್ಕಾರ ಆಗೇತಿ ಅಂದಮ್ಯಾಲ
ನನಗೂ ಅsಟು ಸಾಕ್ಷಾತ್ಕಾರ ಮಾಡಿಸಬೌದಲ್ಲ?

ಹರಿಹರ : ಆತ್ಮಸಾಕ್ಷಾತ್ಕಾರ ಬಹಳ ಸುಲಭ ಶಿಷ್ಯನೇ.
ಒಳಗೆ ಆತ್ಮ ಇದೆ ಅಂತ ನಂಬಿ
ಕಣ್ಣು ಮುಚ್ಚಿ ಕೂತರಾಯ್ತು,
ಅದೇ ಹೊರಗಡೆ ಬಂದು ಮಾತಾಡತದೆ.

ಚಿಕ್ಕಯ್ಯ : ಹೌದ! ಅದು ಕನ್ನಡದಲ್ಲಿ ಮಾತಾಡತೈತೋ? ಸಂಸ್ಕೃತದಲ್ಲೊ?

ಹರಿಹರ : ಸಂಸ್ಕೃತದಲ್ಲಿ! ಆತ್ಮ ಎಂದಾದರೂ ಕನ್ನಡದಲ್ಲಿ
ಮಾತಾಡತಾವೇನ್ರಿ?

ಚಿಕ್ಕಯ್ಯ : ಮತ್ತ ನೀವೀಗ ಮಾತಾಡಿದ್ದು ಕನ್ನಡ ಅಲ್ಲರಿ?

ಹರಿಹರ : ನಮ್ಮ ಭೌತಿಕ ದೇಹ ಕನ್ನಡದಲ್ಲಿ ಮಾತಾಡಿದರೂ
ಆತ್ಮ ಮಾತಾಡೋದು ದೇವಭಾಷೆ ಸಂಸ್ಕೃತದಲ್ಲಿ!

ಚಿಕ್ಕಯ್ಯ : ಕನ್ನಡ ಮಾತಾಡೋ ದೇಹದೊಳಗಿರೋದರಿಂದ
ಆತ್ಮಕ್ಕೆ ಮೈಲಿಗೆ ಆಗೋದಿಲ್ಲೇನ್ರಿ?

ಹರಿಹರ : ಅದು ಮಡಿ ಮೈಲಿಗೆ ಎಲ್ಲಾ ಮೀರಿದ್ದು! ಆ ಬಗ್ಗೆ
ಲಘುವಾಗಿ ಮಾತಾಡಬಾರದಪ್ಪ!

*(ಯಾವಾಗಲೋ ಬಂದು ಇವರ ಮಾತು ಕೇಳಿಸಿಕೊಳ್ಳುತ್ತಿದ್ದ ರಾಜಭಟರು ಹತ್ತಿರ ಬರುತ್ತಾರೆ)*

ಚಿಕ್ಕಯ್ಯ : ಅಣ್ಣನವರೂ ಆತ್ಮ ಇರಬೇಕು ತಮ್ಮಾ ಅಂದರು.
ಆತ್ಮ ಅಂದರ ಏನರಿ ಅಣ್ಣಾವರ? ಅಂದೆ.
ಆತ್ಮ ಅಂದರ ತಮ್ಮಾ:
ಅಂತಃಕರಣ, ಅನುಕಂಪ, ಹೃದಯವಂತಿಗೆ, ಇನ್ನೊಬ್ಬರ ಬಗ್ಗೆ
ಗೌರವ, ದಯೆ - ಅದು ಆತ್ಮ ಅಂತಂದವರು
ನೀವು ಹೇಳೊದು ಹಾಂಗಿಲ್ಲಲ್ರಿ?

ಹರಿಹರ : ಯಾಕಂದರ ನಿಮ್ಮಣ್ಣ ತಪ್ಪ ಹೇಳ್ಯಾನ, ಅದಕ್ಕ.
ತಿಳೀತೇನು?

ಚಿಕ್ಕಯ್ಯ : ತಿಳೀಲಿಲ್ಲರಿ.

ಹರಿಹರ : ಅದೇ ಆತ್ಮ.

ರಾಜಭಟ ೧ : ಏನ್ರೆಪಾ ಶರಣರ, ಈ ಕಡೆ ಒಬ್ಬಾಂವ ಜಂಗಮ
ಓಡಿ ಬಂದನೇನ್ರಿ?

ದಾಮೋದರ : ಜಂಗಮನ? ಇಲ್ಲ ತಗೀರಿ, ಈ ಕಡೆ ಯಾರೂ ಬರಲಿಲ್ಲ.

ರಾಜಭಟ ೨ : ಇವರ್ಯಾರು?

ಚಿಕ್ಕಯ್ಯ : ಎಪಾ ನಾನು ಕಳ್ಳ ಚಿಕ್ಕಣ್ಣ, ಗುರುತು ಸಿಗಲಿಲ್ಲರೆ?

ರಾಜಭಟ ೨ : ನಿನ್ನ ಗುರುತಾಯ್ತು. ಈ ಶರಣರ್ಯಾರು?

ಚಿಕ್ಕಯ್ಯ : ಇವನು ಅವರ ಶಿಷ್ಯ. ಅವರು ಇವನ ಗುರು.

ರಾಜಭಟ ೧ : ಕುಂತಗೊಂಡ ಏನ ಮಾತಾಡತಿದ್ದಿರಿ?

ದಾಮೋದರ : ಆತ್ಮ ಪರಮಾತ್ಮ ಮಾತಾಡತಿದ್ದಿವಿ.

ರಾಜಭಟ ೨ : ಮಹಾಮನೆ ಬಿಟ್ಟು ಇಲ್ಲಿ, ಹೊರಕೇರ್ಯಾಗ
ಆತ್ಮ ಪರಮಾತ್ಮ ನಡೆಸೀರಿ?

ಹರಿಹರ : ಶರಣರು ಎಲ್ಲಿದ್ದರ ಅಲ್ಲೇ, ಅದೇ ಮಹಾಮನೆ
ಅಂತ ಅಪ್ಪಣೆ ಕೊಟ್ಟಬಿಟ್ಟಾರಲ್ಲರಿ ಅಣ್ಣಾವರು!

ರಾಜಭಟ ೨ : ಅಲಲಲ! ಏನ ಅಣ್ಣಾವರ ಪವಾಡ ಮಾರಾಯಾ!
ಹೊರಕೇರ್ಯಾಗೂ ಆತ್ಮ ಪರಮಾತ್ಮದ ಚರ್ಚೆ ಅಂದರ

ಇದು ಭಾರೀ ದೊಡ್ಡ ಪವಾಡ!

ರಾಜಭಟ ೧ : ಅರಮನ್ಯಾಗ ರತ್ನದ ಸರ ಕಳುವಾಗಿತ್ತರೀ,
ಕಳ್ಳನನ್ನ ಹುಡಿಕ್ಕೊಂಡು ಬಂದಿದ್ದೀವಿ.

ನಮಗ ಈ ಸಣ್ಣ ಶರಣರ ಬಗ್ಗೆ ಅನುಮಾನ
ಬಂದೈತ್ರಿ. ಅದಕ್ಕ ನಮ್ಮ
ಕೊತವಾಲರ ತನಕ ಇವರನ್ನ ಕರಕೊಂಡ ಹೋಗಿರ್ತೀವಿ.
ಆಮ್ಯಾಲ ಕಳಿಸ್ತೀವಿ, ಆದೀತ ಚಿಕ್ಕಯ್ಯನವರ?

ಚಿಕ್ಕಯ್ಯ : ಛೇ ಛೇ, ಈ ಸಣ್ಣ ಶರಣ ನಮ್ಮ ಪೈಕೀ ರೀ,
ಹೊಸದಾಗಿ ಶರಣರಾಗ್ಯಾರ.
ಹರೇದ ವಯಸ್ಸು, ಆಗಾಗ ಏನರೆ ಯಡವಟ್ಟ
ಮಾಡಿಕೊಳ್ತಾರ, ಆದರ ಕಳ್ಳತನದಂಥಾ ದಂಧೇದವರಲ್ಲ ತಗೀರಿ.

ರಾಜಭಟ ೨ : ಹಿಂಗಂತೀರಾ? ಆಯ್ತ ಬಿಡ್ರಿ. ಅರಮನ್ಯಾಗಿಂದ
ಓಡಿ ಬಂದಾವ ಹಿಂಗs ಇದ್ದ. ಇವನs
ಅವನೇನೋ ಅಂತ ಬೆನ್ನಹತ್ತಿದ್ದಿವಿ.

ನೀವು ಇವನಲ್ಲ ಅಂದಮ್ಯಾಲ ಮುಗೀತು. ಬರೂಣ್ರಿ? ಶರಣು.
*(ರಾಜಭಟರು ಹೋಗುವರು. ತಂದೆ ಮಗ ಇಬ್ಬರೂ ನೆಮ್ಮದಿಯ ನಿಟ್ಟುಸಿರು ಬಿಡುವರು.)*

ದಾಮೋದರ : ಬಚಾವ್ ಮಾಡಿದಿರಿ ಚಿಕ್ಕಯ್ಯನವರs,
ನಿಮ್ಮ ಉಪಕಾರ ಭಾಳ ಆಯ್ತು. ಈಗ ನಾನು
ಒಬ್ಬ ಪುಣ್ಯವಂತನ ಮುಂದ ಸತ್ಯ ಹೇಳಲೇಬೇಕು.
ಚಿಕ್ಕಯ್ಯನವರ, ಕೇಳ್ರಿ:

ಹರಿಹರ : ಏ ಭಂಡ ನನಮಗನೇ ಮೈಮ್ಯಾಗ ಎಚ್ಚರ
ಐತೋ ಇಲ್ಲೋ? ಆಮ್ಯಾಲ ಕುಡುಗೋಲ ನುಂಗಿಧಾಂಗಾದೀತು
ನಿನ್ನ ಬಾಳ್ವೆ, ಹುಷಾರ್.

ದಾಮೋದರ : ನೀನು ಸುಮ್ಮನಿದ್ದರs ಬರೋಬ್ಬರಿ. ಇಲ್ಲದಿದ್ದರ....
*(ಅಲ್ಲೇ ಬಿದ್ದ ಒಂದು ಕಲ್ಲು ತಗೊಂಡು ತಂದೆಯ ಮೇಲೆ ಹೇರಲು ಸಿದ್ಧನಾಗಿ ನಿಲ್ಲುವನು.)* ಇಲ್ಲದಿದ್ದರ ಈ ಕಲ್ಲ ನಿನ್ನ ಮ್ಯಾಲ ಹೇರ್ತೀನಿ ನೋಡು.

ಚಿಕ್ಕಯ್ಯ : ಏ ತಮ್ಮಾ ಕೇಳಿಲ್ಲಿ...

ದಾಮೋದರ : ಮೊದಲು ನನ್ನ ಮಾತ ಕೇಳು:
ನೋಡು ಚಿಕ್ಕಣ್ಣಾ, ಅರಮನೆಯಿಂದ ರತ್ನದ ಸರ
ಕದ್ದಕೊಂಬಂದವನು ನಾನೇ.
ಕೊತವಾಲ ಬೆನ್ನ ಹತ್ತಿದ. ಅವನಿಗೆ ಹೆದರಿ
ಮುಗ್ಧ ಸಂಗಯ್ಯನಿಗೆ ಆ ಸರ ಕೊಟ್ಟು, ನಾನs ಅವನನ್ನ
ಸೂಳೆ ಸಾವಂತ್ರಿಯ ಮನೆಗೆ ಕಳಿಸಿಕೊಟ್ಟೇನಿ.
*(ತಂದೆಗೆ)* ಈಗೇನ ಮಾಡ್ತಿಯೋ ಮಾಡಿಕೋ ಹೋಗು.

ಹರಿಹರ : ಥೂ ಹೇಡಿ. ಕೈಯಾಗಿನ ಲಕ್ಷ್ಮೀನ ಕಳಕೊಂಡ ಚಂಡಾಲ.....

*(ಎಂದು ಶಪಿಸುತ್ತ ಹೋಗುವನು)*

ದಾಮೋದರ : ಚಿಕ್ಕಣ್ಣ ಖರೇ ಹೇಳ್ತೀನಿ ಈಗ ನನ್ನ ಮನಸ್ಸು
ಹಗುರಾಯ್ತು, ನೋಡಪಾ! ಈಗ ಅಂತರಂಗ
ಮಾತಾಡೋಣು, ನೀ ಏನ ಕಾಯಕ ಮಾಡ್ತಿ?

ಚಿಕ್ಕಯ್ಯ : ಕೂಲಿ.

ದಾಮೋದರ : ಕಳ್ಳತನ ಮಾಡೋವಾಗ ಏನ ಮಾಡತಿದ್ದಿ?
ಅದನೆಲ್ಲಾ ಕತಿ ಹೇಳಲ್ಲ. ಕಳ್ಳತನ ಬಿಟ್ಟದ್ದಕ್ಕ ನಿನಗೇನೂ
ಕೆಡುಕನಿಸಲಿಲ್ಲೇನು?

ಚಿಕ್ಕಯ್ಯ : ಆ ಕತಿ ಬ್ಯಾರೆ. ಕಳ್ಳನಾಗಿದ್ದಾಗ ಮೂವತ್ತೈದು
ಜನ ಕಳ್ಳರು ನನ್ನ ಕೈಕೆಳಗಿದ್ದರಪ್ಪ; ನಾನಃ ಅವರ ಉಸ್ತಾದ!
ಕಾಡಿನಾಗ ನನ್ನದೊಂದು ಗವಿಯ ಅರಮನೆ ಅನ್ನು - ಇತ್ತು.
ಒಂದು ದಿನ ಅಥೆಂಗೋ ದೊಡ್ಡ ಸೈನ್ಯ ತಂದು
ಆ ಸೀಮೆಯ ರಾಜ ನನ್ನನ್ನ ಬಂಧಿಸಿದ.
ಹೇಳಿದ: "ಚಾಲುಕ್ಯರ ಕಲ್ಯಾಣದೊಳಗ ಬಸವಣ್ಣ ಅಂತ
ಒಬ್ಬ ಮಂತ್ರಿ ಅದಾನ. ನೀ ಅವನನ್ನ
ಕೊಂದ ಬಂದರ ನಿನಗ ಅರ್ಧ ರಾಜ್ಯ ಕೊಡತೀನಿ
ಅಂತ ಕೈ ಮ್ಯಾಲ ಕೈ ಇಟ್ಟ ಮಾತ ಕೊಟ್ಟ.
ಬಸವಣ್ಣನವರನ್ನ ಕೊಂದ ಹೋಗಿದ್ದರ
ನಾನೂ ಒಬ್ಬ ರಾಜಾ ಆಗಿರ್ತಿದ್ದೆ. ಆದರ, ಖರೇ ಹೇಳ್ತೀನಿ
ತಮ್ಮಾ ಈಗಿರುವಂಥಾ ತೃಪ್ತಿ ನನಗ ಸಿಗತಿರಲಿಲ್ಲ.
ಈಗ ಆನಂದವಾಗಿದ್ದೀನಿ ನೋಡಪಾ, ಆದರ ನೀ
ತಿಳಕೊಂಢಾಂಗ ನಾನೂ ಪುಣ್ಯವಂತನಲ್ಲ.

ದಾಮೋದರ : ರಾಜಭಟರ ಮುಂದ ನಾನು ಸಾಚಾ ಅಂತ ಹೇಳಿ
ಬಚಾವ ಮಾಡಿದೆಲ್ಲ, ಯಾಕ?

ಚಿಕ್ಕಯ್ಯ : ಯಾಕಂದರ ಗೊತ್ತಾಯ್ತು: ನೀ ಕಳ್ಳ ಅಲ್ಲ -
ಅಂತ. ನಿನ್ನ ಜೊತೆಗಿದ್ದನಲ್ಲಾ ಆ ಮುದುಕ,
ಅವ ಬರೋಬ್ಬರಿ ಕಳ್ಳ. ಅವನ ಒಳಗ
ಯಾವತ್ತೂ ಒಬ್ಬ ಕಳ್ಳ ಕೆಲಸ ಮಾಡತಾನ.
ಆದರ ನೀ ಕಳ್ಳ ಅಲ್ಲ ತಗಿ. ನಿನ್ನ ಒಳಗ
ಒಬ್ಬಾವ ಮುಗ್ಧ ಸಂಗಯ್ಯನಂಥಾವ ಇದ್ದಾನನ್ನಿಸಿ
ಹೇಳಿದೆ. ನಿನ್ನ ದೈವ, ಅವರೂ ನಂಬಿ ಬಿಟ್ಟು ಹೋದರು!
ಹಾಂಗಃ ಇನ್ನೊಂದ ಕೆಲಸ ಮಾಡು: ಅಣ್ಣಾವರ
ಮುಂದ ಹೋಗಿ ನಿನ್ನ ತಪ್ಪ ಒಪ್ಪಕೊ.
ಅದೂ ಬ್ಯಾಡಂದರ ಕೊತವಾಲನ ಮುಂದಃ
ಹೇಳಿಬಿಡು. ಆವಾಗ ನೀನೂ ಪಾರಾಗ್ತಿ,
ನ್ಯಾಯ ನಿರ್ಣಯಕ್ಕೂ ಅನುಕೂಲ. ಏನಂತಿ?

ದಾಮೋದರ : ಹಾಂಗ ಮಾಡ್ತೀನಿ. *(ಎಂದು ಹೊರಡುವನು.)*

ಚಿಕ್ಕಯ್ಯ : ಇರು ಇರು. ಸೂಳೆ ಸಾವಂತ್ರೀ ಮನೆಗೆ ಯಾರು
ಹೋಗತಿದ್ದಾರ ನೋಡಲ್ಲಿ!

## ದೃಶ್ಯ ನಾಲ್ಕು

*(ಸಾವಂತ್ರಿಯ ಮನೆ. ಒಂದು ವಿಲಾಸದ ಆಸನದಲ್ಲಿ ಸಾವಂತ್ರಿ ಕೂತಿದ್ದಾಗ - ಒಳಗ ಸಂಗಯ್ಯ ಪ್ರೇಕ್ಷಕರ ಕಡೆಗೆ ಬೆನ್ನು ಮಾಡಿ ಮೌನ ಧ್ಯಾನ ಮಾಡುತ್ತಿದ್ದಾನೆ. ಬೇರೆ ಪೂಜಾ ಸಾಮಗ್ರಿಗಾಗಿ ಕಾಮಾಕ್ಷಿ ಹೊರಗಡೆ ಹೋಗಿದ್ದಾಳೆ. ಆಕೆ ಆಮೇಲೆ ಬಂದು ಪೂಜೆಗೆ ಸೇರಿಕೊಳ್ಳುತ್ತಾಳೆ. ಅಷ್ಟರಲ್ಲಿ ಮಾರು ವೇಷದಲ್ಲಿ ಬಿಜ್ಜಳ ಬರುತ್ತಾನೆ. ಆದರೆ ದ್ವಾರಪಾಲಕನಿಗೆ ಗುರುತಾದರೂ ಗುರುತೇ ಸಿಗಲಿಲ್ಲವೆಂಬಂತೆ ಕೋಲು ಚಾಚಿ ತಡೆಯುತ್ತಾನೆ. ಗುರುತು ಸಿಗಲಿಲ್ಲವೆಂದು ಬಿಜ್ಜಳನಿಗೆ ಸಂತೋಷವಾಗುತ್ತದೆ. ಆದರೆ ಸಾವಂತ್ರಿಗೆ ಗುರುತಾಗಿ "ಮಹಾರಾಜರು ದಾರಿ ಬಿಡಯ್ಯಾ" ಎನ್ನುತ್ತಾಳೆ. ಸ್ವಾಗತಿಸಲು ಹೋದ ಸಾವಂತ್ರಿ ಬಾಗಿಲ ಬಳಿಯ ಮಾಡದಲ್ಲಿ ಸರವನ್ನು ಚೆಲ್ಲಿ, ಸೆರಗು ಸರಿಪಡಿಸಿಕೊಂಡು ಸ್ವಾಗತಿಸಲು ಹೋಗುತ್ತಾಳೆ. ಬಿಜ್ಜಳನ ಪ್ರವೇಶ.)*

ಸಾವಂತ್ರಿ : ಬರ್ರಿ ಪ್ರಭು, ತಮ್ಮ ದಾರಿಯನ್ನೇ ಕಾಯುತ್ತಿದ್ದೆ.

ಬಿಜ್ಜಳ : ಈ ದಿನದ ಬೇರೆ ವೇಷದಲ್ಲೂ ಇಷ್ಟು ಬೇಗ
ನನ್ನ ಗುರುತು ಹಿಡಿದೆಯಾ?

ಸಾವಂತ್ರಿ : ವೇಷಾಂತರದಲ್ಲಿ ಸಿಂಹ ಬಂದರೂ
ಅದು ಸಿಂಹವಲ್ಲದೆ ಬೇರೇನು ಆಗೋದು ಸಾಧ್ಯ?

ಬಿಜ್ಜಳ : ಹಾಗಾದರೆ ನಾನು ಬರುವಾಗ ಅನೇಕರು ನೋಡಿದರು.
ಅವರಿಗೆಲ್ಲ ಗುರುತು ಸಿಕ್ಕಿತೆಂದೇ ಅಲ್ಲವೇ ನೀನು ಹೇಳೋದು?
ಹಾಗಿದ್ದರೀ ವೇಷಾಂತರದ ಗುಟ್ಟು ಬಯಲಾದಂತೇ ಅಲ್ಲವೆ?

ಸಾವಂತ್ರಿ : ಆದರೆ ಅವರ್ಯಾರೂ ತಮಗೆ ನಮಸ್ಕರಿಸಲಿಲ್ಲ, ಅಲ್ಲವೆ?

ಬಿಜ್ಜಳ : ಅದೊಂದು ಬಾಕಿ, ಆದರೆ ಅವರ್ಯಾರೂ ಅಪರಿಚಿತನ ಬಗೆಗಿನ
ನಿರ್ಲಕ್ಷವನ್ನೂ ತೋರಲಿಲ್ಲ.
ನನ್ನ ವೇಷಾಂತರದ ಭ್ರಮೆಯನ್ನು ನೀನೇ ಸಲೀಸಾಗಿ
ಸುಲಿದು ಬಿಟ್ಟೆಯಲ್ಲ!
ಇರಲಿ, ನಾನು ವೇಷಾಂತರದಲ್ಲಿ ಬರುವುದನ್ನು ನೀನು
ವಾರಗಿತ್ತಿಯರೆದುರು ಕೊಚ್ಚಿಕೊಳ್ಳುತ್ತೀಯೊ?

ಸಾವಂತ್ರಿ : ಮನೆಗೆ ಬರುವ ಗಿರಾಕಿಯ ವಿವರಗಳನ್ನ ಬೇರೆಯವರಿಗೆ
ಕೊಡಲುಂಟೆ ಪ್ರಭು? ಅದು ಸೂಳೆಯರ ಧರ್ಮವಲ್ಲ.
ಬೊಗಳುತ್ತವಾದ್ದರಿಂದ ಗಿರಾಕಿಗೆ ಅನಾನುಕೂಲವಾದೀತೆಂದು ನಾವು
ನಾಯಿಯನ್ನೂ ಸಾಕಿಲ್ಲ.

ಬಿಜ್ಜಳ : ಇರಬಹುದೋ ಏನೋ! ಕಾಮಾಕ್ಷಿಗಿನ್ನೂ ಗುಟ್ಟು
ಗೊತ್ತಾಗಿಲ್ಲ ನೋಡು. ಯಾಕಂದರೆ ನನ್ನನ್ನ ಸ್ವಾಗತಿಸಲಿಕ್ಕೆ
ಅವಳಿನ್ನೂ ಬರಲೇ ಇಲ್ಲ!

ಸಾವಂತ್ರಿ : ಅವಳಿಂದು ಬರಲಾರಳು ಪ್ರಭು.

ಬಿಜ್ಜಳ : ಯಾಕೆ?

ಸಾವಂತ್ರಿ : ಅವಳು ಬೇರೊಬ್ಬರ ಸೇವೆಯಲ್ಲಿದ್ದಾಳೆ.
ಬಿಜ್ಜಳ : *(ಕೋಪದಿಂದ)* ಏನಂದೆಯೇ ದುಷ್ಟರಂಡೇ, ಬಿಜ್ಜಳನ ವಾರಾಂಗನೆ
ಇನ್ನೊಬ್ಬ ವಿಟನ ಸೇವೆಯಲ್ಲಿರುವಳೋ?

ಸಾವಂತ್ರಿ : ಕೋಪ ಮಾಡಕೋಬ್ಯಾಡ್ರಿ ಪ್ರಭು. ವಿಚಾರನಾರಿಯರಾದ ನಾವು
ಸೇವೆ ಬಯಸಿ ಬಂದ ಎಲ್ಲರನ್ನೂ ಸಮಾನವಾಗಿ ಕಾಣುವುದು
ನಮ್ಮ ವೃತ್ತಿಧರ್ಮ. ತಾವು ಕೊಡುವ ಬೆಲೆಯನ್ನೇ
ಕೊಟ್ಟುದರಿಂದ ಇಲ್ಲವೆನ್ನುವ ಮನಸ್ಸು ನಮಗಾಗಲಿಲ್ಲ.

ಬಿಜ್ಜಳ : *(ವ್ಯಂಗ್ಯವಾಗಿ)* ಓಹೋ ಧರ್ಮಜಿಜ್ಞಾಸೆ ವೇಶ್ಯಾವಾಟಿಕೆಯವರೆಗೂ
ಬಂದಿತೋ? ಧನ್ಯ ಬಸವಾ ಧನ್ಯ!
*(ಸಾವಂತ್ರಿ ಮುಗುಳು ನಗುವಳು.)*
ವಾರಾಂಗನೆಯರಿಗೆ ಮಹಾರಾಜರನ್ನು ಕಂಡು
ನಗುವಷ್ಟು ಕೊಬ್ಬು ಬಂತೊ?

ಸಾವಂತ್ರಿ : ತಮ್ಮ ಕೋಪ ಕಂಡು ನಗೆ ಬಂತು ನಿಜ ಪ್ರಭು.
ನಾನು ಮಂಗಳವೇಡೆಯಲ್ಲಿ, ತಾರುಣ್ಯದ ದಿನಗಳಲ್ಲಿ
ನಿಮ್ಮ ಸಖಿಯಾಗಿದ್ದವಳು. ಅಂದಿನ ನಿಮ್ಮ ರಸಿಕತನದ
ಕಥೆಗಳಿಗೆ ನಾಯಕಿಯಾದವರಲ್ಲಿ ನಾನೂ ಒಬ್ಬಳು.
ಕೋಪಗೊಂಡಾಗ ನಿಮ್ಮ ಮಾಂಸದಲ್ಲಿ ಮೂಡುವ ಬಲಾಢ್ಯ
ಚಿರತೆಯ ಪರಿಚಯ ನನಗುಂಟು. ಚಿರತೆಯ
ದಾಳಿಗೊಳಗಾಗಿ ಮೈಮುರಿಸಿಕೊಂಡ ಸುಖದ ನೋವಿನ
ನೆನಪಾಗಿ ನಗು ಬಂತು. ಜೊತೆಯ ಹುಡುಗಿಯರೆಲ್ಲ
ನಾವು ಮುದುಕಿಯರಾದೆವು. ತಮಗೆ ಮಾತ್ರ
ಇನ್ನೂ ಈಗಲೂ ಅದೇ ಪ್ರಾಯ, ಅದೇ ಚಿರತೆಯ ಒರಟು,
ಅದೇ ಕೋಪ. ಅದನ್ನು ನೆನೆದು ನಗು ಬಂತು, ಕ್ಷಮಿಸಿರಿ ಪ್ರಭು.

ಬಿಜ್ಜಳ : ಆಯ್ತು ಮಾರಾಯಳೆ, ನಿನ್ನ ಮುಖಸ್ತುತಿಯ
ಮೆಚ್ಚಿ ಸಿಟ್ಟು ಬಿಟ್ಟೆ.

ಈಗ ಹೇಳು, ಕಾಮಾಕ್ಷಿಯ ಜೊತೆಗಿದ್ದವನು,
ಶ್ರೀಮಂತಿಕೆಯಲ್ಲಿ
ನನ್ನ ಜೊತೆ ಸ್ಪರ್ಧಿಸಿದವನು - ಯಾರವನು?

ಸಾವಂತ್ರಿ : ಇಗೊ ಬಾಗಿಲು ತೆರೆದೇ ಇದೆ. ಇಲ್ಲೇ ಕೂತಿದ್ದಾರೆ.
ತಾವೇ ಖುದ್ದಾಗಿ ನೋಡಬಹುದಲ್ಲ?
*(ಬಿಜ್ಜಳ ಅಸಮಾಧಾನದಿಂದಲೇ ಮ್ಯಾಲೆದ್ದು ಒಳಗೆ ನೋಡುವನು. ಅಸಮಾಧಾನ ಹೋಗಿ ಈಗ ಮುಗುಳುನಗೆ ಮೂಡುವದು)*

ಬಿಜ್ಜಳ : ಪಾಪದ ಹಾಸಿಗೆಯ ಮೇಲೆ ಲಿಂಗಪೂಜೆ!

ಸಾವಂತ್ರಿ : *(ತುಂಟತನದಿಂದ)* ದಿನಾಲು ತಾವು ಅದೇ ಪಾಪದ ಹಾಸಿಗೆಯ ಮೇಲೆ....

ಬಿಜ್ಜಳ : ಯಾರು ಈ ಜಂಗಮ?

ಸಾವಂತ್ರಿ : ಮುಗ್ಧಸಂಗಯ್ಯನವರು.

ಬಿಜ್ಜಳ : ಮುಗ್ಧಸಂಗಯ್ಯ! ಇವನನ್ನ ನಾನೆಲ್ಲೋ ನೋಡಿದಂತಿದೆಯಲ್ಲ!.....
ಎಲ್ಲಿ? ಬಸವಣ್ಣ ಇವನ ಪರಿಚಯ ಮಾಡಿಕೊಟ್ಟಿದ್ದ!
ಬಸವಣ್ಣನ ಮನೆಯಲ್ಲಿ ಇವನ ವಾಸ.
ಇವನಿಗಾಗಿ ನಿನ್ನಲ್ಲಿ ಬೇರೆ ಹುಡುಗಿಯರಿರಲಿಲ್ಲವೆ?

ಸಾವಂತ್ರಿ : ಇದ್ದಾರೆ. ಆದರೆ ತನಗೆ ಕಾಮಾಕ್ಷಿಯೇ ಬೇಕೆಂದು
ಈ ಹುಡುಗ ಹಟ ಹಿಡಿದ ಪ್ರಭು.

ಬಿಜ್ಜಳ : *(ತಂತಾನೇ ಯೋಚಿಸುತ್ತ)* ಓಹೊ ಈ ಮುಗ್ಧಸಂಗಯ್ಯನಿಗೆ
ಬಿಜ್ಜಳನ ಪರೀಕ್ಷೆ ಮಾಡುವ ಛಲವೋ?

ಸಾವಂತ್ರಿ : ತಾವೇ ಯೋಚನೆ ಮಾಡಿ ಪ್ರಭು:
ಇಲ್ಲಿಗೆ ಬರುವ ವಿಟರು ಉಪ್ಪು ಹುಳಿ ಖಾರ ತಿಂದವರು.
ಮೈತುಂಬ ಮಾಂಸವುಳ್ಳವರು, ಮಾಂಸದಲ್ಲೊಂದು
ಮೃಗವನ್ನಿಟ್ಟುಕೊಂಡವರು. ಮೃಗ ಹಸಿದೊಡನೆ ನಮ್ಮ
ಮಾಂಸಗುರಿಯಾಗಿ ಬಂದು ತೃಪ್ತರಾಗಿ
ಹೋಗುತ್ತಾರೆ. ಆದರೆ ಇವರನ್ನು ನೋಡಿರಿ: ಇವರ
ಮೈಯಲ್ಲಿ ಕೊಂಚವಾದರು ಮಾಂಸವಿದೆಯೆ ಪ್ರಭು?

ಬಿಜ್ಜಳ : ನಿಜ ಸಾವಂತ್ರಿ, ಇವನಲ್ಲಿ ಮಾಂಸವಿಲ್ಲ, ಇವನು
ಬೇರೆ ವಿಟರಂತಿಲ್ಲ. ಆದರೂ ನನ್ನ ಒಳಗನ್ನ ಕೆಣಕುತ್ತಿದ್ದಾನೆ.
ಇವನನ್ನು ಕಳಿಸಿದವನು ಯಾರೆಂದು ಬಲ್ಲೆ ನಾನು.

ಸಾವಂತ್ರಿ : ಯಾರು ಪ್ರಭು?

ಬಿಜ್ಜಳ : ಬಸವಣ್ಣ! ಓಹೊ ಬಸವನ ಅವತಾರ ಮಹಾರಾಜರ
ವೈಯಕ್ತಿಕ ಬದುಕನ್ನು ಕೆಣಕುವಷ್ಟು ಮುಂದುವರಿಯಿತೊ!

ಸಾವಂತ್ರಿ : ಇದರಲ್ಲಿ ಬಸವಣ್ಣನವರ ಅವತಾರವೇನಿದೆ ಪ್ರಭು?

ಬಿಜ್ಜಳ : ಕಲ್ಯಾಣದಲ್ಲಿ ಇಬ್ಬರು ರಾಜರಿದ್ದಾರೆ ಸಾವಂತ್ರಿ.
ಒಬ್ಬ  ಮಹಾರಾಜ, ಇನ್ನೊಬ್ಬ ಬಿಜ್ಜಳ ರಾಜ.
ಬಿಜ್ಜಳ ರಾಜ ಅರಮನೆಯಲ್ಲಿ ಬಿದ್ದುಕೊಂಡಿರುವಾಗ, ನನ್ನ
ಅರಮನೆಯ ಗೊತ್ತು ಗುರಿಗಳು ಮೋಸವೆಂದು
ಸಾರಿ ಮಹಾಮನೆ ಕಟ್ಟಿಕೊಂಡ ಬಸವಣ್ಣ. ಅದೇನು ಇನ್ನೊಂದು
ಅರಮನೆಯೆ? ಅದರ ಮೇಲೊಂದು ಧ್ವಜ ಬೇರೆ!
ದರಿದ್ರರು, ಭಿಕ್ಷುಕರು, ಸುಡುಗಾಡ ಸಿದ್ಧರು, ಅಯಗಾರರು
ದಲಿತರು ಹೊಲೆ ಮಾದಿಗರು - ಇವರನ್ನ ಕಟ್ಟಿಕೊಂಡು
ಇವರದೇ ಒಂದು ಸಾಮ್ರಾಜ್ಯ ಕಟ್ಟಿ ಭಿಕಾರಿಗಳ
ಸಾಮ್ರಾಟನಾಗಿದ್ದಾನೆ ಈ ಬಸವ!
ಈ ಹಿಂದೆ ಎಷ್ಟೋ ಜನ ಮಹಾತ್ಮರಿದ್ದರು. ತಂತಮ್ಮ
ಸಿದ್ಧಾಂತಗಳನ್ನು ಬೋಧಿಸಿ ಇಷ್ಟ ಇದ್ದವರು ಅನುಸರಿಸಲಿ,
ಇಲ್ಲದಿದ್ದವನು ಬಿಡಲಿ ಎಂದು ಸತ್ತುಹೋದರು. ಆದರೆ
ಈ ಬಸವರಾಜ ಹಾಗಲ್ಲ. ಸಿದ್ಧಾಂತಗಳನ್ನು ನುಡಿದು
ನುಡಿದದ್ದನ್ನು ನಡೆದು ತೋರಿಸಿ, ಆಮೇಲೆ ತನ್ನದು ಸರಿ ಕಂಡರೆ
ಬನ್ನಿರೆಂದು ಸಾರಿದ ಹುಚ್ಚ! ಭಿಕ್ಷುಕರು ದಲಿತರು
ದರಿದ್ರರು ಇಂಥವರಿಂದ ಅರಮನೆ ಕಟ್ಟಲಾದೀತೆ?
ಕಟ್ಟಿದರೆ ಅದು ಅರಮನೆ ಆದೀತೆ? ಸಾಮ್ರಾಜ್ಯವೆಂದರೆ
ಹೊಲಗೇರಿ, ಹೊರಕೇರಿ, ಭಿಕಾರಿಗಳ ಕೇರಿ - ಇವಿಷ್ಟೇ
ಕೇರಿಗಳೆ? ಇವಿಲ್ಲದೆಯೇ ಬದುಕುವ ಕೇರಿಗಳು,
ಅಗ್ರಹಾರಗಳು ಊರುಗಳು, ರಾಜಧಾನಿಗಳು ಇದ್ದಾವೆಂದು
ಗೊತ್ತಿಲ್ಲವೇ ಈ ಮುಗ್ಧ ಬಸವನಿಗೆ?

ಸಾವಂತ್ರಿ : ಮಹಾಮನೆಯ ಬಗ್ಗೆ ತಮಗೆ ಯಾರೋ
ತಪ್ಪು ಅಭಿಪ್ರಾಯ ಕೊಟ್ಟಿದ್ದಾರೆ
ಪ್ರಭು. ನಾನು ತಿಳಿದುಕೊಂಡಂತೆ
ಅಣ್ಣನವರ ಪ್ರತಿಯೊಂದು ನಡೆ ನುಡಿಯಲ್ಲಿ
ಒಂದು ನಿಷ್ಠೆ, ಒಂದು ಪ್ರಾಮಾಣಿಕತೆ,
ಒಂದು ಅಂತಃಕರಣ ಇದೆ.

ಭಿಕ್ಷುಕರು, ಭಿಕಾರಿಗಳು ಅಂತ ನೀವು ತಿಳಿದವರು
ಈಗ ಕೆಲಸ ಮಾಡಿ ದುಡಿದು ಊಟ ಮಾಡುತ್ತಿದ್ದಾರೆ!

ಬಿಜ್ಜಳ : ಅದನ್ನವರು ಕಾಯಕ ಅಂತಾರೆ.

ಸಾವಂತ್ರಿ : ಹೌದು ಪ್ರಭು.
ಈಗ ದಲಿತರು, ಆಯಗಾರರು ಸೋಮಾರಿಗಳಲ್ಲ!
ಕಾಯಕ ಜೀವಿಗಳಾದ್ದರಿಂದಲೇ ರಾಜ್ಯದ ವಾರ್ಷಿಕ
ಆದಾಯ ಹೆಚ್ಚಿದೆ ಎಂದು ಭಂಡಾರಿಗಳೇ ಹೇಳಿದ್ದಾರೆ.
ಈ ಜನ ಈಗ ತೃಪ್ತಿಯಿಂದ, ಕಳೆದುಕೊಂಡಿದ್ದ
ದೇವರನ್ನ ಪಡೆದವರ ಹಾಗೆ ಸುಖದಿಂದ,
ನೆಮ್ಮದಿಯಿಂದ ಇದ್ದಾರೆ. ಇದು ಮಹತ್ವದ್ದಲ್ಲವೇ ಪ್ರಭು?

ಬಿಜ್ಜಳ : ಮಂತ್ರಿಯಾದವನು ಇದನ್ನ ಅರಮನೆಯಿಂದಲೇ
ಮಾಡಬಹುದಿತ್ತಲ್ಲ?

ಸಾವಂತ್ರಿ : ಅರಮನೆಯೆಂದರೆ ಕಾನೂನುಗಳು. ಸಾವಿರಾರು ವರ್ಷಗಳಿಂದ
ಅರಮನೆಗಳಿದ್ದರೂ ಅವುಗಳ ಕಾನೂನುಗಳಿಂದ ಅವರಿಗೆ
ನೆಮ್ಮದಿಯಾಗಲಿ ದೇವರಾಗಲಿ ಸಿಕ್ಕಲಿಲ್ಲ.
ಮನುಷ್ಯತ್ವಕ್ಕೂ ಎರವಾದ ಜನ ಅವರು.
ಮನುಷ್ಯನಲ್ಲಿ ದಯೆ ಇರುವುದೇ ಸಾಧ್ಯವಿಲ್ಲವೆಂದು
ನಂಬಿದವರು, ನೀವೇ ಮುಂದಾಗಿ ದಯೆ ತೋರಿದರೂ
ಅದನ್ನು ಅನುಮಾನಿಸುವವರು! ಅಂಥವರನ್ನು
ಪರಿವರ್ತಿಸಿ ಅವರಲ್ಲಿರುವ ದೇವರನ್ನು ತೆರೆದು
ತೋರಿಸುವುದು ಅವರಿವರಿಂದ ಸಾಧ್ಯವೇ ಪ್ರಭು?

ಬಿಜ್ಜಳ : *(ವ್ಯಂಗ್ಯವಾಗಿ)* ಅಲ್ಲವೆ? ಅದು ಬಸವನಿಂದ ಮಾತ್ರ ಸಾಧ್ಯ!

ಸಾವಂತ್ರಿ : ಸರಿಯಾಗಿ ಹೇಳಿದಿರಿ ಪ್ರಭು.
ಉದಾಹರಣೆಗೆ ಹೇಳುತ್ತೇನೆ:
ಕಾಶ್ಮೀರದಿಂದ ಅಣ್ಣನವರನ್ನು ಕೊಲೆ ಮಾಡಲು ಬಂದ
ಚೋರನೊಬ್ಬ ಅಣ್ಣನವರಿಂದ ಪ್ರಭಾವಿತನಾಗಿ ಕಳ್ಳತನ
ಬಿಟ್ಟು ಶರಣನಾಗಿರುವುದನ್ನು ನಾನು ಪ್ರತ್ಯಕ್ಷ ಭೇಟಿ
ಮಾಡಿದೆ ಪ್ರಭು!

ಬಿಜ್ಜಳ : ಈ ಬೂದಿಪವಾಡದ ಅಗತ್ಯ ನನಗಿಲ್ಲವೆ.
ಧರ್ಮವನ್ನು ಹೇಳುವುದಕ್ಕಾಗಿ ಶಾಸ್ತ್ರಗಳಿವೆ, ವಿವರಿಸಲಿಕ್ಕೆ

ಶಾಸ್ತ್ರಿಗಳಿದ್ದಾರೆ.
ಈಗ ಹೇಳು:
ನಮ್ಮ ರಾಜ್ಯದ ಕಾನೂನು ಹೇಳುತ್ತದೆ:
ರಾಜ್ಯದಲ್ಲಿರುವ ಎಲ್ಲ ಎಲ್ಲದರ ಮೇಲೆ ರಾಜನಿಗೆ
ಹಕ್ಕಿದೆ. ಮಹಾರಾಜರಾದ ಬಿಜ್ಜಳ ದೊರೆಗಳು -
ನಾವು ಕೇಳುತ್ತಿದ್ದೇವೆ: ನಮಗೆ ಕಾಮಾಕ್ಷಿ ಬೇಕು.
ಅವಳು ಎಲ್ಲಿದ್ದರಲ್ಲಿಂದ, ಹ್ಯಾಗಿದ್ದರೆ ಹಾಗೇ ಬೇಕು.
ಕರೆದುಕೊಂಡು ಬಾ.

ಸಾವಂತ್ರಿ : ಸ್ವಚ್ಛಂದವಾಗಿ ದೇಹ ಮಾರುವುದಕ್ಕೆ ಬಂದವರಲ್ಲ ನಾವು.
ನಮಗೂ ನಿಯಮಗಳಿವೆ ಸ್ವಾಮಿ. ಸಂದರ್ಭಾನುಸಾರ
ಮುಖ ನೋಡಿ ಮಣೆ ಹಾಕುವ ನಿಯಮಗಳಲ್ಲ ಇವು.
ಎಲ್ಲರಿಗೂ ಸಮಾನವಾದ ನಿಯಮಗಳು.
ಸಂಗೀತದಲ್ಲಿ ಅಂತರ್ಗತ ನಿಯಮಗಳಿರುವಂತೆ
ಸ್ತ್ರೀಯ ದೇಹದೊಳಗೂ ಇವೆ.
ಇಲ್ಲದಿದ್ದರೆ ಸ್ತ್ರೀ ಜಗತ್ತನ್ನು ವಿವರಿಸಲಾದೀತೆ?
ಕೈಕೈ ಹಿಡಿದು ಏಳು ಹೆಜ್ಜೆ ಹಾಕಿದಾಗ ಉಂಟಾದ
ಸ್ಪರ್ಶದ ಅನುಭವವನ್ನು ಆಜನ್ಮ ಪರ್ಯಂತ
ನೆನಪಿಟ್ಟುಕೊಂಬುವಳು ಮಡದಿ. ಸ್ಪರ್ಶದ ಅನುಭವವನ್ನು
ಅದು ಮರೆಯಾದೊಡನೆ ಮರೆಯುವವಳು ಸೂಳೆ.
ತಮ್ಮ ಸ್ಪರ್ಶ ಆಗಲೇ ಕಾಮಾಕ್ಷಿಗೆ ಮರೆವಾಗಿದೆ ಪ್ರಭು.
ಗಿರಾಕಿಯ ಕಣ್ಣಿನಿಂದ ನೋಡಿ ತನ್ನ ಬೆಲೆ
ಕಟ್ಟಿಕೊಳ್ಳುವುದಿಲ್ಲ ಇಲ್ಲಿಯ ಹೆಣ್ಣು. ತನ್ನನ್ನು ತಾನೇ
ಕನ್ನಡಿಯಲ್ಲಿ ನೋಡಿಕೊಂಡು ಬೆಲೆಕಟ್ಟಿಕೊಳ್ಳುತ್ತಾಳೆ.
ಅವಳ ಬೆಲೆಯನ್ನು ಒಪ್ಪುವ ಗಿರಾಕಿಗೆ ತನ್ನನ್ನು
ಒಪ್ಪಿಕೊಳ್ಳುತ್ತಾಳೆ. ಪ್ರೀತಿಯಲ್ಲಾದರೆ ಹೆಣ್ಣುಗಂಡು
ಇಬ್ಬರೂ ಒಂದಾಗಿ ಒಬ್ಬರು ಇನ್ನೊಬ್ಬರ ಕಣ್ಣಲ್ಲಿ ನೋಡಿಕೊಳ್ಳುತ್ತ
ತಮಗೆ ಬೇಕಾದ ಜಗತ್ತನ್ನು ಕಟ್ಟಿಕೊಳ್ಳುತ್ತಾರೆ.
ಬಲಾತ್ಕಾರದಲ್ಲಾದರೆ ಹೆಂಗಸನ್ನ ಬಲಿಹಾಕಿ
ಉಸಿರುಗಟ್ಟುವಂತೆ ಮಾಡಿ, ಆ ಈ ಕಡೆ ನೋಡಲು
ಬೆಳಕಿಲ್ಲದಂತೆ ಮಾಡಲಾಗುತ್ತದೆ. ನಿಮ್ಮ ರಾಜ್ಯದಲ್ಲಿ ಮಾತ್ರ
ಎಲ್ಲದಕ್ಕೂ ರಾಜರೇ ಬೆಲೆಗಟ್ಟುತ್ತಾರೆ.
ಈ ರಾಜ್ಯದಲ್ಲಿ ನಾಗರಿಕ ಆಡಳಿತ ಇರುವುದೇ
ನಿಜವಾದರೆ ತಾವು ಬಲಾತ್ಕಾರದಿಂದ ಅಧಿಕಾರ
ಚಲಾಯಿಸಬಾರದು ಪ್ರಭು.

ಬಿಜ್ಜಳ : ಎದುರಾಳಿಯ ಬಾಯಿ ಮುಚ್ಚುವಂತೆ ವಾದ ಮಾಡುವುದಕ್ಕೆ
ಎಷ್ಟು ಚೆನ್ನಾಗಿ ಕಲಿತಿದ್ದೀಯೆ?
ಮೇಲಿಂದ ಮೇಲೆ ತೆರಿಗೆ ಅಂತಿರುವೆಯಲ್ಲ, - ಈಗ
ಸಂಗಯ್ಯ ಕಾಮಾಕ್ಷಿಗೆ ಕೊಟ್ಟ ಬೆಲೆ ಎಷ್ಟೆಂದು ಹೇಳು.
ಅದಕ್ಕೆ ತೆರಿಗೆ ನಿರ್ಧರಿಸಬೇಕು.

ಸಾವಂತ್ರಿ : ಹೌದೆ? ಇಗೋ ಕೊಟ್ಟೆ. ಅಯ್ಯಾ,
*(ದ್ವಾರಪಾಲಕನಿಗೆ)* ಪಾದರಕ್ಷೆ ಇಡುವ ಕೆಳಗಿನ ಮಾಡದಲ್ಲಿ
ಇಟ್ಟೆನಲ್ಲ, ಆ ಸರ ತಗೊಂಬಾ.
*(ದ್ವಾರಪಾಲಕ ಮಾಡದಲ್ಲಿನ ಸರ ತಗಂಬಂದು ಕೊಡುವನು. ಅವನು ಮಾಡದಲ್ಲಿ ಕೈ ಹಾಕಿದ್ದರಿಂದ ಹಿಡಿದು ಅದನ್ನಾತ ತಂದು ಬಿಜ್ಜಳನ ಕೈಗೆ ಕೊಡುವುದರವರೆಗೂ ರಾಜ ಆಶ್ಚರ್ಯ, ಆಸಕ್ತಿಗಳಿಂದ ಗಮನಿಸುತ್ತಾನೆ. ಸರ ನೋಡಿದೊಡನೆ ಅವನ ಕಣ್ಣು ಅರಳುವದು.)*

ಬಿಜ್ಜಳ : ಈ ಸರದ ಬೆಲೆ ಎಷ್ಟೆಂದು ಗೊತ್ತೊ?

ಸಾವಂತ್ರಿ : ಗೊತ್ತಿಲ್ಲ ಪ್ರಭು! ತನ್ನ ಬೆಲೆಗಿಂತ
ಇದು ಹೆಚ್ಚಿದೆಂದು, ಆದ್ದರಿಂದ ತನಗೆ ಬೇಡವೆಂದು
ಕಾಮಾಕ್ಷಿಯೇ ಹಿಂದಿರುಗಿ ಕೊಟ್ಟಳು. ನಾನು ಅದನ್ನ
ಕೊತವಾಲನಿಗೆ ಕೊಡೋಣವೆಂದು ಅಲ್ಲಿ ಇಟ್ಟಿದ್ದೆ.
ಈಗ ತಮ್ಮ ಕೈಗೇ ಸಿಕ್ಕಂತಾಯಿತು.

ಬಿಜ್ಜಳ : ಎಲಗೇ, ಹಲವಾರು ಲಕ್ಷ ಹಣ ಇದರ ಬೆಲೆ!
ಈಗಲಾದರೂ ವಾಪಸ್ ತಗೊಳ್ತೀಯಾ?

ಸಾವಂತ್ರಿ : ನಮಗೆ ಬೇಡವಾದದ್ದು ಎಷ್ಟು ಲಕ್ಷ ಹಣವಾದರೇನು ಪ್ರಭು?
ನಮ್ಮನ್ನು ಮೀರಿದ್ದು ನಮಗದು ಕಲ್ಲು!
ಆತ್ಮಸಂತೋಷಕ್ಕಾಗಿ ಸಂಗಯ್ಯನ ಸೇವೆ
ಮಾಡುವೆನೆಂದು ಕಾಮಾಕ್ಷಿಯೇ ಹೇಳಿದಳು,
ಹಾಗೇ ಮಾಡುತ್ತಿದ್ದಾಳೆ.

ಬಿಜ್ಜಳ : ನಿನಗೂ ಇದು ಬೇಡವೆ?

ಸಾವಂತ್ರಿ : ಮಾಡಿದ ಕೆಲಸ, ಕೊಂಬ ಪ್ರತಿಫಲ - ಎರಡಕ್ಕೂ
ತಾಳೆ ಇರಬೇಕು ಪ್ರಭು.
ಅದಿಲ್ಲವಾದರೆ ಅದು ಭ್ರಷ್ಟಾಚಾರ.

ಬಿಜ್ಜಳ : ಸೂಳೆತನವನ್ನು ಸಮರ್ಥಿಸಿಕೊಳ್ಳುತ್ತೀಯಲ್ಲೆ!
ನಾಚಿಕೆಯಾಗೋದಿಲ್ಲ ನಿನಗೆ?

ಸಾವಂತ್ರಿ : ಶ್ರೀಮಂತನೊಬ್ಬ ಕದ್ದ ಹಣದಿಂದ ಶ್ರೀಮಂತನಾದ ಬಗ್ಗೆ
ಕೊಚ್ಚಿಕೊಂಬಾಗ,
ಜನರನ್ನ ಕೊಂದು ರಾಜನಾದವನು, ತನ್ನ
ವಿಜಯಗಳ ಬಗ್ಗೆ ಕೊಚ್ಚಿಕೊಂಬಾಗ,
ಭ್ರಷ್ಟಾಚಾರದಿಂದ ಮೇಲೇರಿದ ಅಧಿಕಾರಿ
ತನ್ನ ಅಧಿಕಾರದ ಬಗ್ಗೆ ಕೊಚ್ಚಿಕೊಂಬಾಗ -
- ನಾಚಿಕೊಳ್ಳುವರೇ ಸ್ವಾಮಿ?
ಇವರೇ ನಾಚಿಕೊಳ್ಳದೆ ಇರುವಾಗ, ಕಾಯಕ
ಅಂತ ಮೈಮಾರಿ ಪ್ರಾಮಾಣಿಕವಾಗಿ ಗಳಿಸಿದ ಹಣದಲ್ಲಿ
ತೆರಿಗೆ ಕಟ್ಟುವ ನಾವು ಯಾಕೆ ನಾಚಿಕೊಳ್ಳಬೇಕು?
ಅವರ ಜೀವನ ಶೈಲಿಯಲ್ಲಿ ಕಾಣದ ವಿಕೃತಿ
ನಮ್ಮ ಜೀವನ ಶೈಲಿಯಲ್ಲೇ ಕಾಣುವುದಲ್ಲ, ಯಾಕೆ?
ತಾವು ರಾಜರು ಎಲ್ಲರೂ ಗೌರವಾನ್ವಿತರಾಗಿ ಬದುಕುವ
ವ್ಯವಸ್ಥೆ ಮಾಡಬೇಕಿತ್ತು. ತಾವೇ ರಾತ್ರಿ ಇಲ್ಲಿಗೆ
ವೇಷಾಂತರದಲ್ಲಿ ಬರುವಾಗ ನಮಗೆ ಬೋಧನೆ
ಮಾಡುವುದು ಅಸಹಜವಲ್ಲವೆ ಪ್ರಭು?

ಬಿಜ್ಜಳ : *(ಆಘಾತದಿಂದ ತತ್ತರಿಸುವನು)*
ಸಾಕು ಈಗ ಹೇಳು ಇದು ಮುಗ್ಧಸಂಗಯ್ಯನ
ಕೈಗೆ ಹ್ಯಾಗೆ ಬಂತು?

ಸಾವಂತ್ರಿ : ಗೊತ್ತಿಲ್ಲ ಪ್ರಭು.

ಬಿಜ್ಜಳ : ಇದು ಅರಮನೆಯಲ್ಲಿ ಇವತ್ತೇ ಕಳುವಾದ ಸರ, ಗೊತ್ತ?
ಇದನ್ನು ಜಂಗಮನೊಬ್ಬ ಕದ್ದ ಅಂತ,
ಕೊತವಾಲ ಮತ್ತವನ ರಾಜಭಟರು ಜಂಗಮನ
ಬೆನ್ನು ಹತ್ತಿ ಊರ ತುಂಬ ಓಡಾಡುತ್ತಿದ್ದಾರೆ,
ಇದೂ ಗೊತ್ತ?

ಸಾವಂತ್ರಿ : ಇದ್ಯಾವುದೂ ನಮಗೆ ಗೊತ್ತಿಲ್ಲ ಪ್ರಭು. ಈ ಸರ
ಮುಗ್ಧಸಂಗಯ್ಯನವರ ಕೈಯಲ್ಲಿತ್ತು, ಅಂದ ಮೇಲೆ
ಅದು ಹ್ಯಾಗೆ ಬಂತೆಂದು ಅವರೇ ವಿವರಿಸುತ್ತಾರೆ.
ಎದ್ದು ಬಂದ ಮೇಲೆ ಅವರನ್ನು ಬೇಕಾದರೆ
ತಮ್ಮಲ್ಲಿಗೆ ಕಳಿಸುತ್ತೇನೆ. ಅಥವಾ ಕೊತವಾಲರು ಬಂದರೆ....
*(ದ್ವಾರಪಾಲಕ ಅವಸರದಲ್ಲಿ ಬರುವನು.)*

ದ್ವಾರಪಾಲಕ : ಅಮ್ಮಾ ಬಸವದಂಡನಾಯಕರು ಬಂದಿದ್ದಾರೆ!
ಒಳಗೆ ಬರಬಹುದೆ? ಅಂತ ಕೇಳುತ್ತಿದ್ದಾರೆ!

ಸಾವಂತ್ರಿ : ಬಸವಣ್ಣನವರು! ನನ್ನ ಮನೆಗೆ! ಬಂದೆ ಇರು -
*(ಆಶ್ಚರ್ಯದಿಂದ ಎದ್ದು ಸೆರಗು ಸರಿಪಡಿಸಿಕೊಂಡು ಬಾಗಿಲಿನತ್ತ ಹೋಗುವಳು. ಬಿಜ್ಜಲ ಆಶ್ಚರ್ಯದಿಂದ ಆ ಕಡೆ ನೋಡುತ್ತಿರುವಾಗ ಬಸವ ಬಂದು ಬಾಗಿಲಲ್ಲಿ ನಿಂತುಕೊಳ್ಳುವನು.)*

## ದೃಶ್ಯ ಐದು

ಸೂತ್ರಧಾರ : ಕಲ್ಯಾಣದಲ್ಲಿ ಇರಬೇಕಾದ ಸ್ಥಳ ಮತ್ತು ಕ್ರಮದಲ್ಲಿ ಯಾವುದೂ
ಇರಲಿಲ್ಲ, ಯಾರೊಬ್ಬರ ಮ್ಯಾಲೂ ಯಾರೊಬ್ಬರಿಗೂ
ನಂಬಿಕೆ ಇರಲಿಲ್ಲ, ಪ್ರತಿಯೊಬ್ಬರೂ ಪ್ರತಿಯೊಬ್ಬರ
ಮಾತುಗಳನ್ನು ಅನುಮಾನದಿಂದಲೇ ಕೇಳುತ್ತಿದ್ದರು.
ಪ್ರತಿಯೊಬ್ಬರ ಮಾತಿಗೂ ಮುಖಬೆಲೆ ಒಂದಾದರೆ - ಹುದುಗಿದ
ಇನ್ನೊಂದರ್ಥವೂ ಇರುತ್ತಿತ್ತು.
ಆ ರಾತ್ರಿ ಶಿವರಾತ್ರಿ, ಕಲ್ಯಾಣ ಮಲಗಿರಲಿಲ್ಲ!
ಹಾಗಂತ ಜಾಗರಣೆಯನ್ನೂ ಮಾಡುತ್ತಿರಲಿಲ್ಲ.
ಎಲ್ಲರೂ ಸಾವಂತ್ರಿಯ ಮನೆಯ ಕಡೆಗೇ ಕಣ್ಣು ಕಿವಿಗಳ ನೆಟ್ಟು
ಅಂಗೈಯಲ್ಲಿ ಜೀವ ಹಿಡಿದುಕೊಂಡು
ಕಾಯುತ್ತಿದ್ದರು. ಕೊಂಚ ಧೈರ್ಯವಿದ್ದವರು ಹೊರಕೇರಿಯ
ಮನೆ ಗುಡಿಸಲುಗಳ ಮುಂದೆ
ರಾಜಭಟರಿಗೆ ಕಾಣದಂತೆ ಕೂತುಕೊಂಡು ಕಾಯುತ್ತಿದ್ದರು.
ಹುದುಗಿದರ್ಥಗಳ ಅಡಗಿಸಿಕೊಂಡು
ಮುಖಬೆಲೆಯ ಮಾತುಗಳ ಚೆಲ್ಲಾಡುತ್ತಿದ್ದರು, ಕೇಳಿರಿ:

**ಒಂದನೆಗುಂಪು**

ಶರಣ ೧ : ಶರಣರ ಬೇಟೆ ಸುರುವಾಗೇತ್ರಪ! ಮಡಿವಾಳ ಮಾಚಯ್ಯನನ್ನ
ಹಿಡಿದು ಥಳಿಸಿ ಶರಣರ ಬಟ್ಟೆ ತುಳಿದು ಕಳಿಸ್ಯಾರ!
ಇಂತಾದರೊಳಗ ಅಣ್ಣಾವರು ಸೂಳೆ ಸಾವಂತ್ರಿಯ ಮನೆಗೆ
ಬಂದಾರಂದರ ಏನ ಹೇಳೋಣು?

ಶರಣ ೨ : ಶರಣರನ್ನ ಶೂಲಕ್ಕೇರಿಸ್ಯಾರಂದ ಮ್ಯಾಲ ಅವರ ಕೈ
ಮೇಲಾಧಾಂಗ ಆಯ್ತು! ಇನ್ನವರ ಎದುರಿಗೆ
ನಿಲ್ಲೋವಂಥವರು ಯಾರಿಲ್ಲ.

ಮತ್ತೊಬ್ಬ : ಹರಳಯ್ಯ ಮಧುವರಸರನ್ನು ಶೂಲಕ್ಕೇರಿಸಿದರೂ ನಾವು
ನೊಡಿಕೊಮಡು ಕೂತಿವಲ್ಲ!

ಒಬ್ಬ : ಅವರನ್ನು ಶೂಲಕ್ಕೇರಿಸಿ ಜೀರ್ಣಿಸಿಕೊಂಡರು ಅಂದರ
ಇದು ಸಣ್ಣ ಮಾತಲ್ಲ ತಗಿ. ಇನ್ನ ಮುಂದ ಸೋತವರನ್ನು
ಹಾಂಗs ಬಿಟ್ಟಾರಂತ ನನಗನ್ನಸೋದಿಲ್ಲ!

ಮತ್ತೊಬ್ಬ : ರಾಜ್ಯದ ಮೂಲೆ ಮೂಲೆಯಿಂದ ಪುಂಡರನ್ನ ಕರಿಸ್ಯಾರಂತ!

ಮಗದೊಬ್ಬ : ಪುಂಡರ್ಯಾಕ ಬೇಕು? ಅವರ ಕಡೆ ಸೈನ್ಯ ಐತೆಲ್ಲಪ್ಪ!
ನಿಜ. ಕೊಂಬು ಕಹಳೆ ಮೊಳಗಿ
ಬೇಟೆ ನಾಯಿ ಬೊಗಳಿ
ಕಲ್ಯಾಣ ನಗರಕ್ಕೆ ಬಲೆ ಹಾಕಿ
ಶರಣರ ಬೇಟೆ ಅಡತಾರಂಥಂಗಾಯ್ತು.
ಬೆಲೆ ತೆರಬೇಕಪ್ಪ ಎದಕ್ಕೂ!
ಇವು ಶರಣರ ದುಷ್ಕಾಲದ ದಿನಗಳು!

ಒಬ್ಬ : ಶಿವನೇ ಕಾಪಾಡಬೇಕು.

ಮತ್ತೊಬ್ಬ : ಶಿವ ಕೈಲಾಸದೊಳಗಿದ್ದಾನ, ಇಲ್ಲಿ ನಮ್ಮ ರಕ್ಷಣೇಗ್ಯಾರು?

ಮಗದೊಬ್ಬ : ನಾವು ಶರಣರಾಗಿದ್ದೀವಿ. ಯಾವುದರ ಮ್ಯಾಲೂ
ನಿಯಂತ್ರಣ ಇರಬೇಕಂತ ಅಣ್ಣಾವರs ಹೇಳ್ಯಾರ.

ಒಬ್ಬ : ದೇವರು ಅವರ ಕೈಯಾಗ ತ್ರಿಶೂಲ ಕೊಟ್ಟು ಕಳಿಸ್ಯಾನ
ನಮಗಾದರ ಅಂಗೈಗೆ ಲಿಂಗಾ ಕೊಟ್ಟು ಸಹಿಸ್ಕೋ
ಅಂತಾನ! ಏನ ಮಾಡೋಣು?

ಮತ್ತೊಬ್ಬ : ದೇವರು ಒಬ್ಬನೇ. ಆ ದೇವರು ಅವರಿಗೆ ರಕ್ಷಣೆ
ಕೊಟ್ಟು ನಮಗ ಕೊಟ್ಟಿಲ್ಲ! ಅಂದಮ್ಯಾಲ ನಮ್ಮ
ರಕ್ಷಣೆ ನಾವು ಮಾಡಿಕೋಬೇಕಪ.

ಒಬ್ಬ : ಅಣ್ಣಾವರಂತೂ ಸಾವಂತ್ರೀ ಮನಿ ಹೊಕ್ಕಾರ, ಬಳಗ
ರಾಜಾ ಇದ್ದಾನಂತ! ಇಂಥಾ ರಾತ್ಯಾಗ ರಾಜಾ - ಮಂತ್ರಿ
ಭೇಟಿ ನಡದೈತಿ ಅಂದರ ಏನೋ ಒಂದು
ಆಗಬಾರದ್ದು ಆದರ ನಮ್ಮ ಗತಿಯೇನು?

ಮತ್ತೊಬ್ಬ : ಛೇ ಛೇ ಅಂಥಾದ್ದೇನೂ ಆಗಾಕಿಲ್ಲ ತಗಿ, ಒಂದು ವೇಳೆ
ಆದರ ಅಣ್ಣಾವರು ಸುಮ್ಮನೇ ಇರತಾರ ಅಂದೇನು?
ಏನಾರ ಒಂದು ಪವಾಡ ಮಾಡಿ ದಾಟಿ ಬರ್ತಾರ!
ಬೇಕಾದರ ನೋಡ್ತೀರು.

ಒಬ್ಬ : ನನಗ ಅನಸೋಪ್ರಕಾರ ನಾವು ಯಾವುದಕ್ಕೂ
ಸಿದ್ಧರಾಗಿರಬೇಕು.

<u>ಎರಡನೆಯಗುಂಪು</u>

ಒಬ್ಬ : ನೀವು ಏನೇ ಹೇಳ್ರಿ, ಹರಳಯ್ಯ ಮಧುವರಸರನ್ನ
ಶೂಲಕ್ಕೇರಿಸಿದ್ದು ಕೊಂಚ ಹೆಚ್ಚಾಯಿತು.

ಇನ್ನೊಬ್ಬ : ಇದು ಕೊಡುಕೊಳುವ ಸಂಸಾರದ ವಿಷಯ, ಯಜಮಾನರೇ,
ಕುಲ ಮೂಲಗಳನ್ನ ನೋಡಬ್ಯಾಡವೇ?
ದಲಿತರಿಗೂ ಇನ್ಯಾರಿಗೋ ಮದುವೆ ಮಾಡಿಸಿದ್ದರೆ
ಆಗ್ತಿತ್ತು. ದಲಿತರಿಗೂ ಬ್ರಾಹ್ಮಣರಿಗೂ ಸಂಬಂಧ
ಬೆಳೆಸೋದಂದರೆ - ಸಾವಿರಾರು ವರ್ಷಗಳಿಂದ
ಬಂದ ಧರ್ಮ ಕೆಟ್ಹೋಯ್ತೆ?

ಮತ್ತೊಬ್ಬ : ನೋಡ್ರೀ, ನಾವು ವಿದ್ವಾಂಸರು, ಲೌಕಿಕ ವಿಷಯ
ಮಾತಾಡಬಾರದು. ನಾವು ಮಾತಾಡೋ ವಿಷಯ
ಶ್ರೇಷ್ಠತೆಗಿಂತ ಕೊಂಚ ಕಡಿಮೆ ಆದರೂ ನಡೆಯೋದಿಲ್ಲ.
ದಯಮಾಡಿ ವಿಷಯ ಬದಲಿಸಿರಿ.

ಒಬ್ಬ : ಕತ್ತಲಾಗ ಬರೀ, ಯಾಕ ರಸ್ತಾದ ನಡುವೆ ನಿಂತೀರಿ?
ಮೊದಲೇ ಗಲಾಟೆ ದಿನ ಇವು. ಮಹಾರಾಜರಿಗೆ
ಗೊತ್ತಾದರ ಮುಗೀತು ನಮ್ಮ ಕತಿ!
ನಿಮಗೂ ಕಾಮಾಕ್ಷಿ ಬೇಕಾದಳ? ಅಂತ ಕೇಳತಾರ
ಮಹಾರಾಜರು.

ಇನ್ನೊಬ್ಬ : ನನಗ ಹಾಂಗೇನೂ ಅನ್ನಿಸೋದಿಲ್ರೆಪ. ಯಾಕಂದಿ,
ಆಕೆ ಕೇಳೋವಷ್ಟು ಹಣ ಕೊಡ್ಲಿಕ್ಕಾದೀತ ನಮ್ಮ ಕೈಯಿಂದ?
ಆಕಿ ಸೊಥಾ ಕೈ ಮಾಡಿ ಕರೆದರೂ ನಾ ಹೋಗೋಣಿಲ್ರೆಪ!

ಮತ್ತೊಬ್ಬ : ನಿನ್ನ ಕೈಮಾಡಿ ಕರೆಯೋವಷ್ಟು ಬಡತನ ಆಕೆಗ್ಯಾಕೋ
ಬರತೈತಿ? ನಾವು ಜೀವಮಾನ ದುಡಿದಷ್ಟನ್ನ
ಆಕೆ ಒಂದ ರಾತ್ರಿನೇ ದುಡೀತಾಳಂತ!

ಬಾಲಕ : *(ಸಾವಂತ್ರಿಯ ಮನೆಯ ದ್ವಾರಪಾಲಕನನ್ನು ತೋರಿಸುತ್ತ)* ಅಪಾ,
ಅವರಲ್ಲಿ ರಾಜಾ ಯಾರು? ಭಲ್ಲೆ ಹಿಡಕೊಂಡ
ನಿಂತಾನಲ್ಲ ಅವನೇ ಏನು?

ಒಬ್ಬ : ಮಹಾರಾಜರು ಒಳಗಿದ್ದಾರ. ಹೊರಗ ಬಂದಾಗ
ತೋರಿಸ್ತೀನಿ, ಸುಮ್ಮಕಿರು.

ಮತ್ತೊಬ್ಬ : ಲೇ ನಿಮ್ಮಂಥಾ ಸಣ್ಣ ಹುಡುಗರು ಬರೋ ಜಾಗ
ಅಲ್ಲ ಇದು. ನಡಿ ಹೋಗು, ರಾಜಭಟ ನೋಡಿದರ
ಜುಟ್ಟ ಹಿಡಿದು ಕರಕೊಂಡ ಹೋಗ್ತಾನ ನೋಡು.

ಬಾಲಕ : ಅಪಾ ಏನಂತಾನ ನೋಡಪಾ!

ಇನ್ನೊಬ್ಬ : ಸುಮ್ಮಕಿರ್ರೆಪ ಇಷ್ಟು ಅಧ್ಭುತವಾದ ಮನರಂಜನೆ
ಕಲ್ಯಾಣದ ಪ್ರಜೆಗಳಿಗೆ ಎಂದಾದರೂ ಸಿಕ್ಕಿತ್ತೆ?
ದೇಶದ ರಾಜ ಮತ್ತು ಪ್ರಧಾನಿ ಒಬ್ಬಳ ಮನೆಗೇ ಹೋದದ್ದನ್ನು
ಎಂದಾದರು ಕೇಳಿದ್ದೀರಾ? ಕಂಡಿದ್ದೀರಾ?
ನೋಡ್ತಾ ಇರಿ ಹಾಗೇ,
ಕೊನೆಯ ಪಕ್ಷ ರಾಜ ಮತ್ತು ಪ್ರಧಾನಿ
ಪರಸ್ಪರ ಜುಟ್ಟು ಹಿಡಕೊಂಡಾದರೂ ಹೊರಗ ಬರ್ತಾರ!

ಮತ್ತೊಬ್ಬ : ಇಲ್ಲ ರಾಜ, ರಕ್ತಸೋರುವ ಬಸವಣ್ಣನವರ
ರುಂಡವನ್ನಾದರೂ ಹಿಡಕೊಂಡು ಬರ್ತಾನ!
ಇಂಥಾ ದೃಶ್ಯವನ್ನು ಕಲ್ಯಾಣದ ಪ್ರಜೆಗಳು ಕಲ್ಪಿಸೋದಾದರೂ
ಸಾಧ್ಯವೆ?

ಒಬ್ಬ : ಏನೋ ನಮ್ಮ ಪುಣ್ಯ! ರಾಜರಿಲ್ಲಂತ ಮಂತ್ರಿಬಂದು
ಒಳಗ ಹೊಕ್ಕಾನ! ಒಳಗ ರಾಜ ಕುಂತಾನ!
ಅಪರೂಪಕ್ಕೆ ಸೂರ್ಯಗ್ರಹಣ ಹಿಡಿಧಾಂಗಾಗಿ
ಅದರ ನೆರಳು ಇದರ ಮ್ಯಾಲ ಬಿದ್ದು ಹಾಡಾಹಗಲೀನ
ಕತ್ತಲಾಧಂಗ ಆಗೇತಿ, ಸುಮ್ಮನ ನಿಂತುಕೊಂಡ ನೋಡ್ರಿ.

ಇನ್ನೊಬ್ಬ : ಅಧಿಕಾರದ ತುದಿಯಲ್ಲಿರುವ ಇಬ್ಬರು ನಾಯಕರು
ಕಲ್ಯಾಣ ಹೊತ್ತಿ, ಉರೀತಿರುವಾಗ ವಾರಾಂಗನೆಯ
ಮನೆಯಲ್ಲಿ ಭೇಟಿಯಾಗುವುದು ಅಪರೂಪ. ಇಂಥ
ಸುವರ್ಣಾವಕಾಶ ಒದಗಿಸಿಕೊಟ್ಟ
ರಾಜ ಪ್ರಧಾನಿಗೆ ಧನ್ಯವಾದಗಳನ್ನು ಹೇಳಿ
ಈಗ ಬಾಯಿ ಮುಚ್ಚಿಕೊಂಡು ನೋಡುತ್ತಿರೋಣ;
ಆದೀತೆ? ಆಕಾ ರಾಜಭಟರು ಬರ್ತಿದಾರೆ ಬಾಯ್ಮುಚ್ಚಿರಿ.

## ದೃಶ್ಯ ಆರು (1)

*(ಎಲ್ಲರೂ ಬಾಗಿಲ ಕಡೆಗೆ ಆಶ್ಚರ್ಯದಿಂದ ನೋಡುತ್ತಿರುವಾಗ ಬಸವಣ್ಣ ಬಂದು ಬಾಗಿಲಲ್ಲಿ ನಿಂತುಕೊಳ್ಳುವನು. ಅನಿರೀಕ್ಷಿತವಾಗಿ ಬಿಜ್ಜಳನನ್ನು ನೋಡಿದ ಬಸವಣ್ಣ ಚಕಿತನಾಗಿ "ಮಹಾರಾಜರು!" ಎಂದು ಉದ್ಗಾರ ತೆಗೆದು ಕೈಮುಗಿಯುವನು. ಆದರೆ ಈ ಮಧ್ಯೆ ಸಾವಂತ್ರಿಯ ಸಡಗರ ಮುಗಿಲು ಮುಟ್ಟಿದೆ.)*

ಬಿಜ್ಜಳ : *(ಎದ್ದುನಿಂತು)* ಬಾ ಬಸವಾ ಬಾ *(ಸ್ವಾಗತಿಸಲೆಂಬಂತೆ ಕೈ ಚಾಚುವನು.)*

ಸಾವಂತ್ರಿ : *(ಭಾವುಕಳಾಗಿ ಕಣ್ಣೀರುಗರೆಯುತ್ತ)* ನನ್ನಪ್ಪಾ ನನ್ನಯ್ಯಾ ನನ್ನ ತಂದೇ,
ನನ್ನ ಮನೆಗೆ ಬಂದಿರಾ ಬಸವ ದೇವರೇ!
ಸೂಳೆಯ ಮನೆತನಕ ಪಾದ ಬೆಳೆಸಿದಿರಾ ನನ್ನಪ್ಪಾ!
ನನ್ನ ಬದುಕನ್ನು ಪಾವನಗೊಳಿಸಿದಿರಿ ತಂದೇ!
*(ಎನ್ನುತ್ತ ಹೋಗಿ ಬಸವಣ್ಣನ ಪಾದಕ್ಕೆ ನಮಸ್ಕರಿಸಿ ಸೀರೆ ಸೆರಗಿನಿಂದ ಅವನ ಪಾದ ಒರೆಸುವಳು. ಬಸವಣ್ಣ ಅವಳನ್ನೆಬ್ಬಿಸುತ್ತ)*

ಬಸವಣ್ಣ : ಏಳು ತಾಯಿ!

ಬಿಜ್ಜಳ : ಏನಿದು ಬಸವಣ್ಣಾ! ದೇಶದ ಮಹಾರಾಜ ಮತ್ತು ಮಂತ್ರಿವರ್ಯರು
ಕಲ್ಯಾಣದ ಸೂಳೆಯ ಮನೆಯಲ್ಲಿ ಭೇಟಿಯಾಗುವುದೆಂದರೆ
ಇದು ಯೋಗಾಯೋಗವೋ! ಕರ್ಮಧರ್ಮ ಸಂಯೋಗವೊ!

ಬಸವಣ್ಣ : ಹೌದು ಪ್ರಭು, ಸಾವಂತ್ರಿಯಂಥ ಪುಣ್ಯವಂತೆಯ ಮನೆಯಲ್ಲಿ
ಮಹಾರಾಜರು ಮತ್ತು ಮಾಜಿ ಮಂತ್ರಿ ಸೇರುವುದು
ಯೋಗಾಯೋಗವೇ! ಇದರಂಥ ಪವಿತ್ರ ಗಳಿಗೆ ಪುಣ್ಯವಂತರಿಗಲ್ಲದೆ
ಬೇರೆಯವರಿಗೆ ಸಿಕ್ಕುವುದುಂಟೆ?
ತಮ್ಮ ಸರಸ ಕ್ಷಣಗಳಿಗೆ ಭಂಗ ತಂದೆನೇ ಮಹಾಪ್ರಭು?

ಬಿಜ್ಜಳ : ಎಲ್ಲಿಯ ಸರಸ ಮಾರಾಯಾ.
ರಾಜಕಾರಣದಿಂದ ಬೇಸರವಾದಾಗ ಕೊಂಚ ಮನರಂಜನೆ
ಇರಲಿ ಅಂತ ಕಾಮಾಕ್ಷಿ ಇದ್ದಳು. ನಿನ್ನ ಸಂಗಯ್ಯ

ಬಂದು ಅವಳನ್ನೂ ಅಪಹರಿಸಿ ಬಿಟ್ಟ!
ಈ ಬಡಪಾಯಿ ಬಿಜ್ಜಳನಿಗೆ ಇನ್ನೇನುಳಿಯಿತು ಈ ರಾಜ್ಯದಲ್ಲಿ!
ನೀನೇನು ಇಲ್ಲಿ? ನಿನಗಿನ್ನೂ ಬೇಕಾದಷ್ಟು ವಯಸ್ಸಿದೆ.
ಹುಳಿಬ್ಯಾಳಿ ಸಾರು ತಿಂದು ತಿಂದು ನಾಲಗೆಯ ರುಚಿಕೆಟ್ಟು
ಬೇರೆ ರುಚಿಯ ಆಸ್ವಾದಕ್ಕಾಗಿ ಇಲ್ಲಿಗೆ ಬಂದೆಯೇನೋ
ಅಂದುಕೊಂಡೆ.

ಬಸವಣ್ಣ : ಹಾಗೇನಿಲ್ಲ ಪ್ರಭು, ಇದ್ದಕ್ಕಿದ್ದ ಹಾಗೆ ಮುಗ್ಧ ಸಂಗಯ್ಯ
ಮನೆಯಲ್ಲಿ ಹೇಳದೆ ಕೇಳದೇ ಮಾಯವಾದ.
ಚಿಂತೆಯಾಗಿ ಹುಡುಕುತ್ತಿದ್ದಾಗ ಇಲ್ಲಿದ್ದಾನೆ ಅಂತ
ಯಾರೋ ಹೇಳಿದರು. ಕರೆದುಕೊಂಡು ಹೋಗೋಣ
ಅಂತ ಬಂದೆ.

ಬಿಜ್ಜಳ : ಹಾಗೋ? ಆಹಾ ನಿನ್ನ ಸಂಗಯ್ಯನೋ
ಅವನ ಲಿಂಗಪೂಜೆಯೋ - ಹೋಗಿ ನೋಡು,
ಸಾವಂತ್ರಿ ಬಸವನಿಗೆ ಸಂಗಯ್ಯನನ್ನ ತೋರಿಸು.

ಸಾವಂತ್ರಿ : ಸಂಗಯ್ಯನವರು ಇಲ್ಲಿದ್ದಾರೆ ನೋಡ್ರಿ ಅಣ್ಣಾವರ….
*(ಬಸವಣ್ಣ ಹೋಗಿ ನೋಡಿ ಭಾವುಕನಾಗಿ ಕೈಮುಗಿಯುವನು.)*

ಬಸವಣ್ಣ : ಸಾವಂತ್ರೀ ತಾಯೀ, ನೀನೇ ಧನ್ಯಳು, ಧನ್ಯಳಾದೆ ತಾಯಿ!
ಸಂಗಯ್ಯ ಲಿಂಗಪೂಜೆಯಿಂದ ಈ ಪರಿ ತೃಪ್ತನಾದುದನ್ನು
ಅವನ ಮುಖದಲ್ಲಿ ನಾನು ಈವರೆಗೆ ಕಂಡಿರಲಿಲ್ಲ!

ಸಾವಂತ್ರಿ : ನಿಮ್ಮ ದಯೆ ನನ್ನಪ್ಪ. ಸ್ವಲ್ಪ ಹಾಲು ಹಣ್ಣು ಕೊಡಲೆ ತಂದೆ?

ಬಸವಣ್ಣ : ಬೇಡ ತಾಯಿ. ಸಂಗಯ್ಯನನ್ನು ಕಂಡು ಊಟ ಮಾಡಿದಷ್ಟು
ಸಂತೋಷವಾಯಿತು.

ಸಾವಂತ್ರಿ : ನೀವು ಮೂರು ದಿನಗಳಿಂದ ಏನೂ ತೆಗೆದುಕೊಂಡಿಲ್ಲವೆಂದು ಕೇಳಿದೆ.
ಸ್ವಲ್ಪ ಹಾಲನ್ನಾದರೂ ತಕ್ಕೊಂಡರೆ ನನಗೆ
ಆನಂದವಾಗುತ್ತದೆ.

ಬಸವಣ್ಣ : ಒತ್ತಾಯ ಮಾಡಬೇಡ ತಾಯಿ.
ಇವತ್ತು ಶಿವರಾತ್ರಿ. ನನಗೆ ತೃಪ್ತಿಯಾಗಿದೆ, ತಾಯೀ ತೃಪ್ತಿಯಾಗಿದೆ!

ಬಿಜ್ಜಳ : ಓಹೊ ಈ ಸೂಳೆ ನಿನ್ನ ತಾಯಿಯೊ?

ಬಸವಣ್ಣ : ಸಂಗಯ್ಯನಿಗೆ ತಾಯಿಯಾದವಳು ನನಗೂ
ತಾಯಿಯಾಗೋದು ನನ್ನ ಭಾಗ್ಯವಲ್ಲವೆ ಪ್ರಭು?
ನನ್ನನ್ನು ತನ್ನ ಮಗ ಎಂದು ತಾಯಿ ಸಾವಂತ್ರಿ
ಒಪ್ಪಿಕೊಂಡರೆ ನಾನು ಧನ್ಯನಾದೆ.

ಸಾವಂತ್ರಿ : ಈ ಸೂಳೆಯ ಬದುಕನ್ನ ಪಾವನಗೊಳಿಸಿದಿರಿ ನನ್ನಯ್ಯಾ?
ಸಮಗಯ್ಯ ನನ್ನ ಮನೆಗೆ ಬಂದರು! ಮಹಾತ್ಮಾ
ಬಸವಣ್ಣನವರು ನನ್ನ ಮನೆಗೆ ಬಂದರು! ಇಂಥಾ
ಅನಿರೀಕ್ಷಿತ ಭಾಗ್ಯದಿಂದ ಈ ಸೂಳೆಯ ಜನ್ಮ
ಸಾರ್ಥಕವಾಯಿತು ನನ್ನಯ್ಯಾ!

ಬಿಜ್ಜಳ : ಈ ಜನಕ್ಕೆ ಅದೇನು ಮಾಟ ಮಾಡಿದ್ದೀ ಬಸವ?
ಕಲ್ಯಾಣದ ಒಬ್ಬರಲ್ಲೂ ಸ್ವಾಮಿ ಭಕ್ತಿ ಇಲ್ಲ.
ಇದ್ದದ್ದೆಲ್ಲಾ ಬಸವ ಭಕ್ತೀನೇ! ಬಸವ ಭಕ್ತಿ,
ಸ್ವಾಮಿ ಭಕ್ತಿ, ಎರಡರಲ್ಲಿ ಯಾವುದು ಹೆಚ್ಚು ಅಂತ
ಒರೆಗೆ ಹಚ್ಚಲೇಬೇಕಲ್ಲ!

ಬಸವ : ತಮ್ಮ ಸರಸದ ಸಮಯದಲ್ಲಿ ಒಂದೆರಡು ನಿಮಿಷ
ಕದ್ದರೆ ಎಷ್ಟೊಂದು ಅಸೂಯೆ ಪಡುವಿರಲ್ಲ ಪ್ರಭು!
ನಾನೆಂದಾದರೂ ತಮ್ಮ ಎದುರಾಳಿಯಾಗಬಲ್ಲೆನೆ?

ಬಿಜ್ಜಳ : *(ಸಂಗಯ್ಯನನ್ನು ತೋರಿಸಿ)* ನನ್ನ ಎದುರಾಳಿಯನ್ನ
ಒಳಗೇ ಕೂರಿಸಿದ್ದೀಯಲ್ಲ! ಬಿಡು ಬಿಡು ಅದು ಇನ್ನೊಂದು ಕತೆ.
ಮಹಾರಾಜ ಮತ್ತವನ ಅರಮನೆ ಕೂಡ
ಇವರ ದೃಷ್ಟಿಯಲ್ಲಿ ಯಃಕಶ್ಚಿತ ಅನಿಸುವ ಪವಾಡ ಮಾಡಿದ್ದೀಯಲ್ಲ!

ಬಸವಣ್ಣ : ನಾನ್ಯಾವ ಸೀಮೆಯ ಪವಾಡ ಪುರುಷ ಪ್ರಭು!

ಬಿಜ್ಜಳ : ಈ ಪಾಮರ ಬಿಜ್ಜಳನಿಗಾಗಿ
ಕೈಲಾಸ ವೈಕುಂಠಗಳು ವೇಶ್ಯೆಯ ಮನೆಯಲ್ಲಿ ಅವತರಿಸುವಂತೆ
ಮಾಡಿದೀಯಲ್ಲ, ಇದು ಪವಾಡದ ಸಂಗತಿ ಅಲ್ಲವೆ?
ನೀನೇ ನೋಡು: ಒಂದು ಕಡೆ ಲಿಂಗಪೂಜೆಯಲ್ಲಿ
ನಿರತರಾದ ಮುಗ್ಧ ಸಂಗಯ್ಯ ದೇವರು!
ಇನ್ನೊಂದೆಡೆಗೆ ಮಹಾತ್ಮಾ ಬಸವಣ್ಣನವರು!
ಮಧ್ಯೆ ಬಡಪಾಯಿ ಮಹಾರಾಜ ಬಿಜ್ಜಳ!
ಇದಕ್ಕಿಂತ ಇನ್ನೊಂದು ಪವಾಡ ಇದೆಯೆ?

ಬಸವಣ್ಣ : ಇಂಥ ಪವಾಡ ಮಾಡಿ ಮಾಡಿ,
ನಾನೂ ನಗೆಮಾರಿ ತಂದೆಯಾಗಿದ್ದೇನೆ; ಏನು ಮಾಡಲಿ ಪ್ರಭು?
ಎಲ್ಲಿ, ಯಾವಾಗ, ಯಾವ ಪವಾಡ ಮಾಡ್ತೀನೋ
ತಿಳೀಧಾಂಗ ಆಗಿದೆ. ದಿನಾ ನನ್ನ ಹೆಸರಿಗೆ
ಪವಾಡಗಳ ಕಟ್ಟುತ್ತಾರೆ.

ಸಾವಂತ್ರಿ : ತಮ್ಮ ಹೆಸರಿನಲ್ಲೂ ಪವಾಡಗಳು ಬೇಕಾದಷ್ಟಿವೆ ಪ್ರಭು,
ಹೇಳಲೇನು?

ಬಿಜ್ಜಳ : ನೋಡು ನೋಡು ನೀನು ನನಗೆ ಹೇಳೇ ಇಲ್ಲ!
ಒಂದು ಹೇಳು ಕೇಳೋಣ.

ಸಾವಂತ್ರಿ : ಒಂದಾನೊಂದು ಕಾಲದಲ್ಲಿ ಬಿಜ್ಜಳ ಮಹಾರಾಜರ ಆಸ್ಥಾನದಲ್ಲಿ
ಕ್ರಮಿತ ಅಂತ ಒಬ್ಬ ಪುರೋಹಿತ ಇದ್ದ.
ಅವನ ಪೂಜಾಶಾಸ್ತ್ರ ಮಾಡುವ ಪ್ರತಿಭೆಗೆ
ಮರುಳಾದ ಮಹಾರಾಜರು
“ಏನು ಬೇಕು ಕೇಳಿಕೊ ಕ್ರಮಿತ” ಅಂದರಂತೆ.
ಅವನು ದಿನಕ್ಕೆರಡು ನಿಮಿಷ ತಮ್ಮ ಕಿವಿ ಕೊಡಿ ಸ್ವಾಮಿ”
ಅಂದನಂತೆ. ಮಹಾರಾಜರು “ತಥಾಸ್ತು” ಅಂದರು.
ಅಂದಿನಿಂದ ಅವನು ದಿನಾಲು ಬಂದು
ಎರಡು ನಿಮಿಷ ಮಹಾರಾಜರ ಕಿವಿಯಲ್ಲಿ
ರಾಜ್ಯದ ಸ್ಥಿತಿಗತಿಗಳನ್ನು ಹೇಳುತ್ತಿದ್ದ.
ಮೊದಮೊದಲು ನಿಜವನ್ನೇ ಹೇಳಿ, ತಮ್ಮನ್ನು ವಿಶ್ವಾಸಕ್ಕೆ
ತಗೊಂಡ. ಆಮೇಲೆ ಇದ್ದದ್ದು ಇಲ್ಲದ್ದು ಬೆರೆಸಿ ಹೇಳಿದ.
ಆಮೇಲಾಮೇಲೆ ಬರೀ ಇಲ್ಲದ್ದನ್ನೇ ಹೇಳಿ ಹೇಳಿ,
ರಾಜರು ನಂಬಿ ನಂಬಿ ಒಂದು ವರ್ಷದಲ್ಲಿ
ಕ್ರಮಿತ ಮಂತ್ರಿಯಾದ. ಮಂತ್ರಿ ಪೇದೆಯಾದನಂತೆ ಪ್ರಭು!

ಬಿಜ್ಜಳ : ಕೇಳಿದಿಯಾ ಬಸವ ಈ ತುಂಟ ಹೆಣ್ಣಿನ ಮಾತನ್ನ?

ಸಾವಂತ್ರಿ : ಇದು ನನ್ನದಲ್ಲ ಪ್ರಭು, ಜಾನಪದ ಪ್ರತಿಭೆ!
ಇಂಥ ಇನ್ನೂ ಅನೇಕ ಪವಾಡಗಳು ತಮ್ಮ ಹೆಸರಿನಲ್ಲಿವೆ.
ಇನ್ನೂ ಒಂದೆರಡು ಹೇಳಲೇ ಪ್ರಭು?

ಬಿಜ್ಜಳ : ಬೇಡ ಮಾರಾಯ್ತಿ. ಅಪರೂಪಕ್ಕೆ ನನ್ನ ಮೇಲೆ
ಕೋಪಗೊಂಡಿದ್ದ ಬಸವಣ್ಣ ನಿನ್ನ ಮನೆಯಲ್ಲಿ ಸಿಕ್ಕಿದಾನೆ.
ಸ್ವಲ್ಪ ಅಂತರಂಗ ಮಾತಾಡುತ್ತೇವೆ.

ಬೇಕಾದರೆ ನೀನೂ ಇರು, ಆದರಿಂದ ನಮಗೇನೂ ತೊಂದರೆ
ಇಲ್ಲ. ಅಲ್ಲವೆ ಬಸವಣ್ಣ?
ಬಸವಣ್ಣ : ಆಯ್ತು ಪ್ರಭು. ಹಾಗೆಯೇ ತಮ್ಮಲ್ಲಿ ಕೇಳಬೇಕೆಂದಿದ್ದ
ಒಂದು ಮಾತು ಗಂಟಲಲ್ಲೇ ಉಳಿದಿದೆ.
ಕೇಳಲೆ ಪ್ರಭು?

ಬಿಜ್ಜಳ : ಸಂಕೋಚ ಬೇಡ. ಕೇಳು ಬಸವಣ್ಣಾ.

ಬಸವಣ್ಣ : ಹರಳಯ್ಯನ ಮಗ ಶೀಲವಂತನ ಬಗ್ಗೆ ತಮ್ಮಲ್ಲಿ
ಇನ್ನೂ ಕೋಪವಿದೆಯೇ ಪ್ರಭು?

ಬಿಜ್ಜಳ : ಖಂಡಿತ ಇಲ್ಲ.

ಬಸವಣ್ಣ : ಅವನ ಜೀವನಕ್ಕೆ ಅಪಾಯವಿದೆಯೆಂದು ಕೇಳಿ
ಚಿಂತೆಯಾಗಿದೆ. ದಯಮಾಡಿ ರಕ್ಷಣೆ ಕೊಡುವಿರಾ?

ಬಿಜ್ಜಳ : ಇಗೊ ಮಾತು ಕೊಟ್ಟಿದ್ದೇನೆ. ಇನ್ನು ಮೇಲೆ
ನಿಶ್ಚಿಂತನಾಗಿರು, ಬಸವಣ್ಣ. ಅವನ ಚಿಂತೆ ನನ್ನದು.
ಯಾರಲ್ಲಿ?

ದ್ವಾರಪಾಲಕ : *(ಪ್ರವೇಶಿಸಿ)* ಮಹಾಪ್ರಭು.

ಬಿಜ್ಜಳ : ಕೊತವಾಲ ಅಥವಾ ಅಂಗರಕ್ಷಕ ಅಥವಾ ಯಾರಿದ್ದರೆ
ಅವರನ್ನು ಕರೆ.
*(ದ್ವಾರಪಾಲಕ ಹೋಗಿ ರಾಜಭಟನನ್ನು ಕರೆದು ತರುವನು, ರಾಜಭಟ ನಮಿಸಿ ನಿಲ್ಲುವನು.)*

ಬಿಜ್ಜಳ : ನೋಡಪ್ಪ, ಈ ಕ್ಷಣವೆ ಹೋಗಿ ಕೊತವಾಲನಿಗೆ ಹೇಳು:
ಶೀಲವಂತ ಎಲ್ಲಿದ್ದರಲ್ಲಿ ಅವನಿಗೆ ಬಿಗಿ ಭದ್ರತೆ
ಕೊಡಬೇಕು. ತಿಳಿಯಿತೆ? ಹೋಗು.

ರಾಜಭಟ : ಅಪ್ಪಣೆ ಪ್ರಭು. *(ಹೋಗುವನು.)*

ಬಿಜ್ಜಳ : ಈಗ ಅಂತರಂಗಕ್ಕೆ ಬರೋಣ.
ನೀನು ಮಂತ್ರಿ ಪದವಿಗೆ ರಾಜೀನಾಮೆ ಕಳಿಸಿದ್ದು
ನನಗೆ ತಲುಪಿದೆ. ನಾನಿನ್ನೂ ಅದನ್ನು ಒಪ್ಪಿಲ್ಲ.

ಬಸವಣ್ಣ : 'ರಾಜೀನಾಮೆ ನೀಡಿ ನಿಮ್ಮೂರಿಗೆ ಹೊರಡಬಹುದು' ಅಂತ
ತಾವು ಹೇಳಿದ ಮೇಲೆ ಆ ಪದವಿಯಲ್ಲಿ ನಾನು

ಮುಂದುವರಿಯಲಾರೆ ಪ್ರಭು. ನನ್ನನ್ನು ತಮ್ಮಲ್ಲಿಗೆ
ಕಳಿಸಿದವನು ಕೂಡಲ ಸಂಗಯ್ಯ.
ಅವನ ಆಜ್ಞೆಬರುವತನಕ ಇಲ್ಲಿಯೇ ಇರುವುದೆಂದು
ತೀರ್ಮಾನಿಸಿದ್ದೇನೆ. ಅವನ ಆಜ್ಞೆ ಬಂದ ತಕ್ಷಣ ಹೊರಡುತ್ತೇನೆ.
ಅಲ್ಲಿಯವರೆಗೆ ಕಲ್ಯಾಣದಲ್ಲಿ ಇರಲು ಅವಕಾಶ ಮಾಡಿಕೊಡಬೇಕೆಂದು
ಕೇಳಿಕೊಳ್ಳುತ್ತೇನೆ ಪ್ರಭು.

ಬಿಜ್ಜಳ : ನನ್ನ ವಿರುದ್ಧ ಧರ್ಮಯುದ್ಧ ಸಾರಿದಂತಿದೆ.

ಬಸವ : ಧರ್ಮಯುದ್ಧವಾದರೆ ತತ್ವಗಳ ಘರ್ಷಣೆ ಇರಬೇಕು.
ಇಲ್ಲಿ ಹಾಗಿಲ್ಲ. ತಾವಾಡುವುದು ನಾಟಕ ಎಂದು
ಚಾಡಿಕೋರರಿಗೂ ಗೊತ್ತಿದೆ. ರಾಜಾಶ್ರಯಕ್ಕಾಗಿ ನಾನು
ಸುಳ್ಳು ಹೇಳಲಾರೆ ಪ್ರಭು.

ಬಿಜ್ಜಳ : ಅರಮನೆಯ ಎದುರು ಮಹಾಮನೆ ಎದ್ದಾಗಲೇ
ನೀನು ನನ್ನಿಂದ ದೂರವಾದೆ ಬಸವಣ್ಣ.

ಬಸವ : ಹೌದು ಪ್ರಭು, ಹೊಸಗಾಳಿ ಬೀಸತೊಡಗಿತು.
ಹೊಸಗಾಳಿಯ ಜೀವಂತಿಕೆಯ ಉಸಿರಾಡಿದವರು ಬದಲಾವಣೆ
ಬೇಕೆಂದರು. ನಾವೂ ಮನುಷ್ಯರೆಂದರು. ಯಜ್ಞಪಶುವಿಗೇ
ಬಾಯಿಬಂದು ವಚನಂಗಳ ಹಾಡಿತು.
ಸಾವಿರಾರು ವರ್ಷಗಳ ಹಿಂದಿನ ಗಾಳಿಯನ್ನೇ ತಮ್ಮ
ವ್ಯವಸ್ಥೆ ಈಗಲೂ ಉಸಿರಾಡುತ್ತಿದೆ. ಉಸಿರಾಡಿದರೆ
ಅದು ಉಳಿಯಬಹುದೇ? ಯೋಚನೆ ಮಾಡಬಾರದೆ ಪ್ರಭು?

ಬಿಜ್ಜಳ : ಹೊಸಗಾಳಿಯ ಹೆಸರಿನಲ್ಲಿ ನೀನು ವರ್ಣಸಂಕರ,
ವರ್ಣಾಶ್ರಮ ಧರ್ಮವನ್ನ ಪ್ರಶ್ನಿಸುವಂಥ ಮದುವೆ
ಮಾಡಬಹುದೆ?

ಬಸವ : ಅದು ವರ್ಣಸಂಕರದ ಮದುವೆಯಲ್ಲ ಪ್ರಭು,
ಅನುಭವ ಮಂಟಪದ ಸಿದ್ಧಾಂತ. ಒಂದು ಕಾಲಕ್ಕೆ
ಮಧುವರಸರು ಬ್ರಾಹ್ಮಣರಾದುದು ನಿಜ. ಹರಳಯ್ಯನವರು
ಶೂದ್ರರಾಗಿದ್ದುದೂ ನಿಜ. ಆದರೆ ಅವರು ಲಿಂಗದೀಕ್ಷೆ
ತಗೊಂಡು ಶಿವಧರ್ಮದವರಾಗಿದ್ದಾರೆ. ಶರಣರಾದ
ಮೇಲೆ ಹರಳಯ್ಯ ಅಂತ್ಯಜನಲ್ಲ, ಮಧುವರಸ ವಿಪ್ರನಲ್ಲ.
ಶರಣರಿಗೆ ಜಾತಿಭೇದವಿಲ್ಲ. ಆದ್ದರಿಂದ ಅದು
ಸ್ವಜಾತಿಯ ಸ್ವಧರ್ಮದ ವಿವಾಹ. ಜಾತೀಯತೆಯನ್ನ

ನಿರ್ನಾಮ ಮಾಡುವ ವೀರಸಾಹಸ, ಈವರೆಗಿನ ನಮ್ಮ ಸಿದ್ಧಾಂತ
ಬರೀ ವಚನವಾಗಿತ್ತು. ಈಗ ಕೃತಿಯಾಯಿತು.

ಬಿಜ್ಜಳ : ನಿಮ್ಮ ಸಿದ್ಧಾಂತವನ್ನು ಜೀರ್ಣಿಸಿಕೊಂಬ ಶಕ್ತಿ
ಸಮಾಜಕ್ಕಿಲ್ಲ ಬಸವಣ್ಣ.

ಬಸವಣ್ಣ : ಸಮಾಜವೆಂದರೆ ಕೇವಲ ಅಗ್ರಹಾರವೇ ಪ್ರಭು,
ಇನ್ನುಳಿದ ಧರ್ಮಬಾಹಿರ ಜನ ಶೇಕಡಾ ತೊಂಬತ್ತರಷ್ಟು
ಇರುವಾಗ?

ಬಿಜ್ಜಳ : ಎಲ್ಲರಿಗೂ ಅವರವರಿಗೆ ಎಂಥ ಧರ್ಮದ ಅಗತ್ಯವಿದೆಯೋ
ಅದನ್ನು ಅಲ್ಲಲ್ಲಿ ಅವರವರಿಗೆ ಕಲ್ಪಿಸಿಕೊಡುವ ಶಕ್ತಿ
ವ್ಯವಸ್ಥೆಗಿದೆ. ವ್ಯವಸ್ಥೆಯಲ್ಲಿರುವ ದೇವರು ಎಲ್ಲರ
ಯೋಗಕ್ಷೇಮ ನೋಡಬಲ್ಲವನಾಗಿದ್ದಾನೆ. ಇದು ಅನಿವಾರ್ಯ!
ಈ ಅನಿವಾರ್ಯವನ್ನು ನಾವು ಹತ್ತು ಸಾವಿರ ವರ್ಷಗಳಿಂದ
ಬದುಕುತ್ತ ಬಂದಿದ್ದೇವೆ. ಈ ಮಧ್ಯೆ ನೀನು ಬಂದು
ಜನಗಳಲ್ಲಿ ಇಲ್ಲದ ಅಗತ್ಯಗಳನ್ನು ಗುರುತಿಸಿ
ಅವನ್ನು ಕೊಡಬಲ್ಲ ದೇವರನ್ನು ಕೊಡುತ್ತೇನೆನ್ನುವುದು
ಅಹಂಕಾರದ ಮಾತಲ್ಲವೆ?

ಬಸವಣ್ಣ : ಸಾವಿರ ವರ್ಷ ನಡೆದುಕೊಂಡು ಬಂದದ್ದಕ್ಕೇ
ಅದು ಸತ್ಯ ಮತ್ತು ನಿರಂತರವಾಗಬೇಕಿಲ್ಲ ಪ್ರಭು.
ಸುಳ್ಳು ಮತ್ತು ಅನ್ಯಾಯಗಳೂ ಆಗಿರಬಹುದು.
ಯಾಕಂದರೆ ಇವೂ ಸಾವಿರಾರು ವರ್ಷಗಳಿಂದ ಇವೆಯಲ್ಲ!
ಕೆಲವು ಪ್ರತಿಷ್ಠಿತರಿಗೆ ಮಾತ್ರ ಸತ್ಯವಾಗಿ, ಉಳಿದವರಿಗೆ
ಅದು ಅಸತ್ಯವೆಂದು ಖಾತ್ರಿಯಾಗಿದ್ದರೆ - ಆ ಉಳಿದವರು
ತಮಗೆ ಅಸತ್ಯವೆನಿಸಿದ್ದನ್ನು ತಿರಸ್ಕರಿಸುವ ಹಕ್ಕು ಅವರಿಗೆ
ಇದೆಯಲ್ಲವೆ? ನನಗೆ ಸತ್ಯವಾದದ್ದು ತಮಗೂ
ಸತ್ಯವಾಗಲೇಬೇಕೆಂದು ಹೇಳಲಾಗುವುದಿಲ್ಲ.

ಬಿಜ್ಜಳ : ನೀನು ಸತ್ಯವನ್ನು ಹ್ಯಾಗೆ ನಿರ್ಧರಿಸುತ್ತಿ?

ಬಸವಣ್ಣ : ಅನುಭವದಿಂದ. ನಮಗಾದ ಸುದೀರ್ಘವಾದ
ಅನುಭವದಿಂದ ಯಾವುದು ಸತ್ಯವೂ, ನಿರಂತರವೂ
ಆಗಿದೆ ಎಂದು ಖಾತ್ರಿಯಾಗುತ್ತದೆ.
ಅದು ಹುಡುಕಿ ಹುಡುಕಿ ಕಸವೆನಿಸಿದ್ದನ್ನು ಬಿಸಾಕಿ,
ಹಿತಕರವಾದದ್ದನ್ನು ಉಳಿಸಿಕೊಂಡು ಬದುಕುತ್ತದೆ.

ಅಷ್ಟೇ ಅಲ್ಲ, ಕಾಲಕ್ಕೆ ತಕ್ಕಂತೆ ಅದು ಬದಲಾಗಲೂಬಹುದು.
ಅದನ್ನು ಕೂಡ ಅನುಭವವೇ ನಿರ್ಧರಿಸುತ್ತದೆ.

ಬಿಜ್ಜಳ : ಇದನ್ನೇ ನಾನು ಪದ್ಧತಿ ಅಂದೆ.

ಬಸವಣ್ಣ : ಅದು ಇಬ್ಬರಲ್ಲಿ ತಮಗೆ ಮಾತ್ರ ಅನುಕೂಲಕರವಾಗಿದ್ದು
ನನಗದು ಅನುಕೂಲವಾಗಿಲ್ಲವಾದರೆ ಅದನ್ನು
ನಿರಾಕರಿಸುವ ಹಕ್ಕು ನನಗಿದೆ.
ದೀರ್ಘ ಅನುಭವ ಅಂತ ಹೇಳಿದೆ. ದೀರ್ಘ ಅನುಭವ
ಅಂದರೆ ಇಬ್ಬರ ಅನುಭವದ ಮೊತ್ತವೇ ಹೊರತು
ತಮ್ಮೊಬ್ಬರದೇ ಅಲ್ಲ. ನಿಮ್ಮ ಪದ್ಧತಿಯ ದೇವರು
ಕೆಲವರನ್ನು ಮುಟ್ಟುತ್ತದೆ, ಕೆಲವರನ್ನು ದೂರ ಇಡುತ್ತದೆ.
ನನ್ನ ಪ್ರಕಾರ ಅದು ನನ್ನ ದೇವರಲ್ಲ. ನನ್ನ ದೇವರೇ
ಆಗಿದ್ದರೆ ಇಬ್ಬರನ್ನೂ ಮುಟ್ಟಬೇಕು, ಇಲ್ಲಾ
ಇಬ್ಬರನ್ನೂ ದೂರ ಇಡಬೇಕು. ಅಂದರೆ ಇಬ್ಬರಿಗೂ
ಸಮಾನವಾಗಿರಬೇಕು. ಅಂಥ ದೇವರು ನನಗೆ ಬೇಕು.
ಇಲ್ಲದಿದ್ದರೆ ನನಗೆ ಆ ದೇವರೇ ಬೇಡ.

ಬಿಜ್ಜಳ : ಹೊಸ ದೇವರು, ಹೊಸ ಧರ್ಮ - ವ್ಯವಸ್ಥೆಯನ್ನು ವಿರೋಧಿಸುವ
ಸಂಸ್ಥೆಯೊಂದು ಬೇಕೇ ಬೇಕು - ಅಂತಲ ನೀನು ಹೇಳೋದು?

ಬಸವಣ್ಣ : ಪ್ರಭು ತಮಗೇ ತಿಳಿದಿರುವಂತೆ ಇವರು ಧರ್ಮಬಾಹಿರರು.
ಅವರಿಗೂ ಒಂದು ಧರ್ಮದ ಅಗತ್ಯವಿದೆ, ತಮ್ಮೊಂದಿಗೆ
ಮಾತಾಡುವ ದೇವರ ಅಗತ್ಯ ಇದೆ ಅಂತ ನಾನು
ಹೇಳಿದರೆ ವ್ಯವಸ್ಥೆಯ ವಿರೋಧಿ ಸಂಸ್ಥೆ ಅನ್ನುತ್ತೀರಲ್ಲ?
ಅವರು ಮನುಷ್ಯರೆಂದು ಒಪ್ಪುವುದಕ್ಕೇ ತಾವು ಸಿದ್ಧರಿಲ್ಲ!
ಅಂದಮೇಲೆ ನಾನೇನು ಹೇಳಲಿ?

ಬಿಜ್ಜಳ : ಅಂದರೆ ಅದಿಲ್ಲದೆ ಅವರೀಗ ಕತ್ತಲೆಯಲ್ಲಿದ್ದಾರೆಯೊ?
ಅವರಿಗೆ ಹೊಸ ಧರ್ಮ, ದೇವರನ್ನು ಕೊಟ್ಟು
ನೇರ ಕೈಲಾಸಕ್ಕೆ ಕರೆದೊಯ್ಯುತ್ತೀರೊ?

ಬಸವಣ್ಣ : ಅದನ್ನ ನಿಮ್ಮ ವ್ಯವಸ್ಥೆಯೂ ಮಾಡಲಾರದು ಪ್ರಭು.
ತಮ್ಮ ರಾಜ್ಯದಲ್ಲಿ ಧರ್ಮವಿದೆ, ಕೆಲವೇ ಪ್ರತಿಷ್ಠಿತರಿಗೆ!
ಅದನ್ನವರು ಬಡ ಜನಗಳ ಮೇಲೆ ಹೇರುತ್ತಿದ್ದಾರೆ. ಈ ಜನಕ್ಕೆ
ದೇವರನ್ನು ತಲುಪುವ, ಮುಟ್ಟುವ, ಅವನೊಂದಿಗೆ
ಮಾತಾಡುವ, ಕಷ್ಟಸುಖ ಹೇಳಿಕೊಳ್ಳುವ ಅವಕಾಶವಿಲ್ಲ.

ದೇವರ ಜೊತೆಗೆ ದೇವಭಾಷೆಯಲ್ಲೇ ಮಾತಾಡಬೇಕು.
ಮಹಾಮನೆಯಲ್ಲಾದರೆ ದೇವರು ಭಕ್ತರ ಭಾಷೆಯಲ್ಲೇ
ಮಾತಾಡುತ್ತಾನೆ. ಈಗ ದೇವರು ಮತ್ತು ಭಿಕಾರಿಗಳು
ಪರಸ್ಪರ ಅವರವರೇ ಮಾತಾಡಿಕೊಳ್ಳುತ್ತಾರೆ. ಆ ಮೂಲಕ
ಅವರಿಗೂ ಧರ್ಮ ಅಂತ ಒಂದು ಸಿಕ್ಕಿದೆ. ಆತ್ಮವಿಶ್ವಾಸ
ಸಿಕ್ಕಿದೆ. ಅವರು ಯಾರ ಗೋಜಿಗೂ ಹೋಗದೇ ತಮ್ಮ
ಧರ್ಮವನ್ನು ತಾವು ಪಾಲಿಸುತ್ತಾರೆ. ಕಾಯಕ ಮಾಡುತ್ತಾರೆ.
ಕೊಡಬೇಕಾದ ತೆರಿಗೆ ಕೊಡುತ್ತಾರೆ. ಸಾಲದೆ?

ಬಿಜ್ಜಳ : ಸರಿ, ನೀವು ಕಟ್ಟುವ ಕಲ್ಯಾಣಕ್ಕೆ
ಬಸವಣ್ಣನಂತೆ ಒಬ್ಬ ಬಿಜ್ಜಳನೂ ಬೇಕೆಂಬುದನ್ನು
ಅರಿಯದೆ ಹೋದಿರಲ್ಲಾ ಬಸವಣ್ಣಾ!
ನೀವು ನಿಮ್ಮ ಕನಸಿಗೆ ರೂಪ ಕೊಡುತ್ತಿರುವಾಗ
ನಾನೂ ನಿಮ್ಮ ಪಕ್ಕದಲ್ಲಿಯೇ ಇದ್ದೆ. ಅದರಲ್ಲಿ
ನನಗೇನಾದರೂ ಒಂದು ಸ್ಥಳ ಇದೆಯೇ? ಅಂತ
ಹುಡುಕಿದೆ. ಆಸನಗಳಿರಲಿ, ಕೂರಲಿಕ್ಕೆ ಅಂಗೈಯಗಲ
ನೆಲವೂ ಉಳಿದಿರಲಿಲ್ಲ! ಅಷ್ಟು ಜನ ಶರಣರು
ಒಟ್ಟಾಗಿ ಕುಳಿತಿದ್ದರೆ ಉಳಿದವರಿಗೆ ಸ್ಥಳವೆಲ್ಲಿ?

ಬಸವಣ್ಣ : ತಾವಿರುವ ಕಲ್ಯಾಣವನ್ನೇ ಕುಡಲ ಸಂಗಮವಾಗಿಸಲು
ಪ್ರಯತ್ನಿಸಿದೆವು ಪ್ರಭು. ತಮ್ಮನ್ನು ಸಿಂಹಾಸನದಲ್ಲಿಯೇ
ಕೂರಿಸಿ ವ್ಯವಸ್ಥೆಯ ನಿಂತ ನೀರಿಗೇ ಹರಿವು ನೀಡಿ,
ಹೊಸದರೊಂದಿಗೆ ಸೇರಿಸಿ ಶಿವಪುರವೆಂಬ ಕೂಡಲ ಸಂಗಮವನ್ನ
ರೂಪಿಸಬೇಕೆಂಬುದು ನಮ್ಮ ಕನಸಾಗಿತ್ತು.
ಆದರೆ ತಾವು ಕತ್ತಲೆಗೆ ಒಯ್ಯುವ ಹಳೆಯ ರಸ್ತೆಗಳಲ್ಲೇ
ನಡೆಯಬಯಸಿದಿರಿ. ಆದ್ದರಿಂದ ನಾವು ಭಿನ್ನ ದಾರಿ
ತುಳಿಯಲೇಬೇಕಾಯಿತು.

ಬಿಜ್ಜಳ : ನಾನು ಹೇಳಿದ್ದು ರಾಜ ಅಂದರೆ ಕಾನೂನು ಕಟ್ಟಳೆಗಳು.

ಬಸವಣ್ಣ : ರಾಜನ ಕಾನೂನಿಗೆ ದೈವಪ್ರಜ್ಞೆ ಆಧಾರವಾಗಿರಬೇಕು.
ಮನುಷ್ಯನ ಆತ್ಮಗೌರವದ ಬಗ್ಗೆ ಸಮ್ಮತಿ ಇರಬೇಕು.
ಎಲ್ಲಿಯತನಕ ಕಾನೂನು ಇವನ್ನು ಮೀರುವದಿಲ್ಲವೋ
ಅಲ್ಲಿತನಕ ತಾವು ರಾಜರು. ಮೀರಿದ್ದರಿಂದ ನಾವು
ಬೇರೆ ದಾರಿ ಹುಡುಕಬೇಕಾಯಿತು ಪ್ರಭು.

ಬಿಜ್ಜಳ : ನಿನ್ನನ್ನು ಮೀರಿದ ಜಗತ್ತಿನೊಂದಿಗೆ ವ್ಯವಹರಿಸುತ್ತಿದ್ದೀ
ಬಸವಣ್ಣಾ. ಇದು ಲೌಕಿಕ. ನಿನ್ನಂಥವರು ಹಿಂದೆಯೂ ಆಗಿ
ಹೋಗಿದ್ದಾರೆ, - ವ್ಯವಸ್ಥೆಯನ್ನ ತೊಳೆಯುತ್ತೇವೆಂದವರು. ಅವರಿಗೆ
ದಕ್ಕಿದ್ದೂ ತೊಳೆಯುವ ಸರದಿಯಷ್ಟೆ. ಹೋಗಲಿ ಇಲ್ಲಿ
ನಿನ್ನ ಪಾತ್ರವೇನು? ನೀನೂ ಒಬ್ಬ ಬ್ರಾಹ್ಮಣ. ನಿರಾಕರಿಸಲ್ಪಟ್ಟವನಲ್ಲ.
ಕಲ್ಯಾಣದಿಂದ ಕೂಡಲ ಸಂಗಮದವರೆಗಿನ
ಯಾತ್ರೆಯಲ್ಲಿ ನಿನ್ನ ಪಾತ್ರವೇನು? ಹುತಾತ್ಮನೊ? ದಳ್ಳಾಳಿಯೊ?

ಬಸವಣ್ಣ : ನಾನವರ ಗೆಳೆಯ. ಅವರವನಲ್ಲದೆ ಅವರ ಕೆಲಸ
ಮಾಡುತ್ತಿರುವುದರಿಂದ ದಳ್ಳಾಳಿ. ಕಾನೂನು ಮೀರಿ
ನೀವು ಕೊಂದರೆ ಹುತಾತ್ಮ.

ಬಿಜ್ಜಳ : ನೀನು ಖಂಡಿತವಾಗಿ ನನ್ನ ಮೇಲೆ ಯುದ್ಧಸಾರಿದಂತಿದೆ ಬಸವಣ್ಣ.

ಬಸವಣ್ಣ : ಇಲ್ಲ ಪ್ರಭು, ನಾನು ಯುದ್ಧ ಸಾರಲೂ ಇಲ್ಲ.
ಮಾಡಲೂ ಇಲ್ಲ. ಮಹಾರಾಜರಿಗೆ ಗಾಯಗಳಾಗಿದ್ದರೆ ಅವು
ತಮ್ಮನ್ನು ತಾವೇ ಇರಿದುಕೊಂಡು ಮಾಡಿಕೊಂಡ
ಗಾಯಗಳು. ಅಥವಾ ಪ್ರೇಯಸಿಯರು ಕಚ್ಚಿ ಮಾಡಿದ ಗಾಯಗಳು.

ಬಿಜ್ಜಳ : ಸದ್ಯ ನಕ್ಕೆಯಲ್ಲಾ ಮಾರಾಯಾ!
ನಿನ್ನ ಮುಖ ಅರಳಿದ್ದನ್ನು ನೋಡಿ
ವರ್ಷಗಳಾಗಿದ್ದವು!

ಸಾವಂತ್ರಿ : ಪ್ರಭುಗಳು ಮತ್ತು ಅಣ್ಣನವರು ಅಪ್ಪಣೆ ಕೊಟ್ಟರೆ
ಕೊನೆಯದಾಗಿ ಒಂದು ಮಾತು ಹೇಳಬಹುದೆ?

ಬಿಜ್ಜಳ : ಹೇಳು.

ಸಾವಂತ್ರಿ : ಅಣ್ಣನವರು ಕೂಡಲ ಸಂಗಮಕ್ಕೆ ಒಂದು ದಾರಿಯನ್ನು
ತೋರಿಸಿದರು. ಎರಡೂ ಬದಿಗೆ ಗಿಡಗಳ ಸಾಲು -
ಹ್ಯಾಗೆ ನೆಡಬೇಕೆಂದು ಮಳಲಿನ ಮೇಲೆ ಬರೆದು
ತೋರಿಸಿದರು. ನೂರು ವರ್ಷಗಳಾದ ಮೇಲೆ ಈ ದಾರಿ
ಹ್ಯಾಗಿರುತ್ತದೆಂದು ನೋಡಿದರೆ: ಗಿಡಗಳು ಮರಗಳಾಗಿ
ದಾರಿಕಾಕರಿಗೆ ನೆರಳಾಗಿ, ತಂಪಿಗೆ ಆಸರೆಯಾಗಿ
ಆದರ್ಶದ ಕೂಡಲ ಸಂಗಮಕ್ಕೆ ಒಯ್ಯುವ ದಾರಿಗುಂಟ ಬೆಳೆದಿದ್ದುವು.
ಆದರೆ ಅಷ್ಟರಲ್ಲಿ ರಾಜಭಟರು ಬಂದು ಮಳಲಿನಲ್ಲಿ
ಬರೆದ ದಾರಿಯನ್ನೂ ಮುಚ್ಚಿ ಮರಗಿಡಗಳನ್ನು ತುಳಿದು,

ಅಳಿಸಿಬಿಟ್ಟರು ಸ್ವಾಮಿ. ಕೂಡಲ ಸಂಗಮದ
ದಾರಿಯನ್ನು ನೀವೇ ಮುಚ್ಚಿಸಿದಿರಿ.

ಬಿಜ್ಜಳ : ಆಯ್ತು ಸಾವಂತ್ರಿಯ ಮಾತಿನೊಂದಿಗೆ ಇಂದಿನ ಚರ್ಚೆಯನ್ನ
ಮುಗಿಸೋಣ, ನಮ್ಮ ಮಾತು ಅಪೂರ್ಣವಾದರೂ.
ನಿನ್ನ ರಾಜೀನಾಮೆಯ ಬಗ್ಗೆ ಪುನಃ ಆಲೋಚನೆ
ಮಾಡುವ ಅವಕಾಶವಿದೆ ಅಂದುಕೊಂಡಿದ್ದೇನೆ.

ಬಸವ : ಇಲ್ಲ ಪ್ರಭು. ಶರಣರ ಎಳಹೂಟೆಯಂದೇ, ಅವರೊಂದಿಗೇ
ನನ್ನ ಪ್ರಾಣ ಹಾರಿಹೋಗಿದೆ. ಈಗ ಉಳಿದಿರೋದು ಅದರ
ನೆರಳು ಮಾತ್ರ. ಅಂದಿನಿಂದ ನನಗೇನೇನೂ ತಿಳಿಯದೆ
ಏನೇನೋ ಮಾತಾಡುತ್ತಿದ್ದೇನೆ. ಅಲ್ಲದ್ದನ್ನಾಡಿದ್ದರೆ ಕ್ಷಮಿಸಿರಿ.

ಬಿಜ್ಜಳ : ಇನ್ನೊಂದು ವಿಷಯ ಬಗೆಹರಿಯಬೇಕು.
ಅರಮನೆಯಲ್ಲಿ ಕಳುವಾದ ಸರವನ್ನು ಮುಗ್ಧ ಸಂಗಯ್ಯ
ಈ ದಿನ ಸಾವಂತ್ರಿಗೆ ಬೆಲೆಯಾಗಿ ಕೊಟ್ಟಿದ್ದಾನೆ. ಹ್ಯಾಗೆಂದು
ತೀರ್ಮಾನವಾಗಬೇಕು. ತಾನಾಗಿ ಒಪ್ಪಿಕೊಂಡರೆ ಮುಗಿಯಿತು.

## ದೃಶ್ಯ ಆರು (2)

ಬಸವಣ್ಣ : *(ಆಘಾತ ಹೊಂದಿ)* ಸಾಧ್ಯವಿಲ್ಲವಲ್ಲ!
ಸಾವಂತ್ರೀ, ಇದೇನು ಮಾತು ತಾಯೀ?

ಸಾವಂತ್ರಿ : ರತ್ನದ ಸರವನ್ನು ಮುಗ್ಧ ಸಂಗಯ್ಯನವರು ಬೆಲೆಯಾಗಿ
ಕೊಟ್ಟುದು ನಿಜ ಅಣ್ಣಾ. ಆದರೆ ಇದರಲ್ಲೇನೋ
ಮೋಸವಿದೆಯೆಂದು ನನ್ನ ಅಂಬೋಣ. ಕಾಮಾಕ್ಷಿಯೂ
ಅದನ್ನು ಸ್ವೀಕರಿಸಲು ನಿರಾಕರಿಸಿದ್ದರಿಂದ ಪ್ರಭುಗಳಿಗೇ
ಕೊಟ್ಟಿದ್ದೇನೆ.

ದ್ವಾರಪಾಲಕ : *(ಪ್ರವೇಶಿಸಿ)* ಪ್ರಭು, ತಮ್ಮನ್ನು ನೋಡಲು ಕ್ರಮಿತರು ಒಬ್ಬರನ್ನ
ಕಳಿಸಿದ್ದಾರೆ. ಅವರು ಕಾಯುತ್ತಿದ್ದಾರೆ ಪ್ರಭು.

ಬಿಜ್ಜಳ : ಒಳಕ್ಕೆ ಕಳಿಸು.

ಹರಿಹರ : *(ಪ್ರವೇಶಿಸಿ)* ಮಹಾಪ್ರಭುಗಳು ಕ್ಷಮಿಸಬೇಕು.
ತಮ್ಮ ಮಾತಿನಲ್ಲಿ ಸರದ ಪ್ರಸ್ತಾವ ಬರಲೆಂದು ಕಾಯುತ್ತಿದ್ದೆವು.

ಅನಿವಾರ್ಯವಾಗಿ ಹೀಗೆ
ಪ್ರವೇಶಿಸಬೇಕಾಯಿತು ಪ್ರಭು.

ಬಿಜ್ಜಳ : ಅನಿವಾರ್ಯ ಪ್ರಸಂಗ ಅದೇನೆಂದು ಹೇಳೋಣವಾಗಲಿ ಪಂಡಿತರೆ.

ಹರಿಹರ : ಇಂದು ಸಂಜೆ ಅರಮನೆಯ ಆಳುಗಳೆಲ್ಲ
ಸಂಜೆಯ ಮಹಾಪೂಜೆಯ ಗಡಿಬಿಡಿಯಲ್ಲಿದ್ದಾಗ
ರತ್ನದ ಸರ ಕಳುವಾಯಿತು. ಕಳ್ಳ ಓಡಿ ಹೋಗುವಾಗ
ನಾವು ಅವನನ್ನ ಬೆದರಿಸಿದೆವು. ಆದರೂ ಓಡಿಹೋದ.

ಬಿಜ್ಜಳ : ಕಳ್ಳ ಯಾರೆಂದು ತಿಳಿಯಿತೋ?

ಹರಿಹರ : ಇನ್ನೂ ಸಾಧ್ಯವಾಗಿಲ್ಲ ಪ್ರಭು. ನಮಗವನ ಬಾಹ್ಯ ಚಹರೆ
ಕಂಡಿತೇ ವಿನಾ ವಿವರಗಳು
ಕಾಣಲಿಲ್ಲ. ನಾವು ಕಂಡಂತೆ ಆ ಕಳ್ಳ ಒಬ್ಬ ತರುಣ ಜಂಗಮ.

ಬಿಜ್ಜಳ : ಅದು ಸರಿ ಪಂಡಿತರೇ, ನೀವ್ಯಾಕೆ ಇಲ್ಲಿಗೆ ಬಂದಿರೆಂದು
ತಿಳಿಯಲಿಲ್ಲವಲ್ಲ!

ಹರಿಹರ : ಅದನ್ನೇ ಹೇಳಬೇಕೆಂದು ಬಂದೆವು: ಸದರಿ ಜಂಗಮನು
ಸೂಳೆ ಸಾವಂತ್ರಿಯ ಮನೆಯಲ್ಲಿರುವನೆಂದು ಯಾರೋ
ಹೇಳಿದರು. ಈ ಸಂಗತಿಯನ್ನು ಎರಡನೆಯ ಧರ್ಮರಾಯ –
ನಂತಿರುವ ಪ್ರಭುಗಳ ಗಮನಕ್ಕೆ ತರೋಣವೆಂದು
ಬಂದೆವು.

ಬಿಜ್ಜಳ : ನೀವು ಬಂದವರು ಎಷ್ಟು ಜನ?

ಹರಿಹರ : ನಾವು ಒಬ್ಬರೇ!

ಬಿಜ್ಜಳ : ಓಹೋ ಹಾಗೊ! ಇರಲಿ. ಕದ್ದವನು ಒಬ್ಬ ತರುಣ ಜಂಗಮ.
ರತ್ನದ ಸರ ಸಾವಂತ್ರಿಯ ಮನೆಯಲ್ಲಿ ಸಿಕ್ಕಿದೆ.....

ಬಸವಣ್ಣ : ಪಂಡಿತರೆ, ಇಲ್ಲಿ ಬನ್ನಿರಿ.
*(ಹರಿಹರ ಹಿಂಜರಿಯುವನು.)* ಬನ್ನಿ ಸ್ವಾಮೀ. ನೀವು ಸರ ಕದ್ದ
ಹುಡುಗನನ್ನ ನೋಡಿದಿರಲ್ಲವೆ? ಅವನೊಬ್ಬ ತರುಣ
ಜಂಗಮ ಅಂದಿರಿ.

ಹರಿಹರ : ಹೌದು.

ಬಸವಣ್ಣ : ನೋಡಿದರೆ ನಿಮಗವನ ಗುರುತು ಸಿಗುವುದೆ?

ಹರಿಹರ : ಸಿಕ್ಕೇ ಸಿಗುತ್ತದೆ.

ಬಸವಣ್ಣ : ಹಾಗಿದ್ದರಿಗೊ ಒಳಗೆ ನೋಡಿರಿ: ಹಾಸಿಗೆಯ ಮೇಲೊಬ್ಬ
ಹುಡುಗ ಲಿಂಗಪೂಜೆ ಮಾಡಿಕೊಳ್ತಿದಾನಲ್ಲ...

ಹರಿಹರ : ಲಿಂಗಪೂಜೆ! ಛೀ ಛೀ!

ಬಸವಣ್ಣ : ಸ್ವಯಂ ಕಳ್ಳನನ್ನು ನೋಡಿದವರೇ ಹೀಗಂದರೆ ಹ್ಯಾಗೆ?
ಆ ಲಿಂಗಪೂಜೆ ಮಾಡಿಕೊಂಬ ಹುಡುಗನೇ
ಕಳ್ಳನಾಗಿರಬಹುದ? ನೋಡ್ರಿ

ಹರಿಹರ : *(ಹೋಗಿ ನೋಡಿ)* ಆಶ್ಚರ್ಯ! ಪರಮಾಶ್ಚರ್ಯ! ಹೌದು ಸ್ವಾಮೀ
ನಾವು ಅರಮನೆಯಲ್ಲಿ ಕಂಡ ತರುಣ ಜಂಗಮ
ಇವನೇ!

ಬಸವಣ್ಣ : ಪ್ರಭು, ನಾನು ನನ್ನ ಹಾಗೂ ತಮ್ಮ ಸಂಬಂಧಗಳ
ನೆನೆದು ಹೇಳುತ್ತೇನೆ: ಮುಗ್ಧ ಸಂಗಯ್ಯ ಕಳ್ಳನಲ್ಲ.
ಈ ಬಗ್ಗೆ ತಾವು ಯಾರನ್ನಾದರೂ ಕೇಳಬಹುದು.

ಹರಿಹರ : ನಮ್ಮ ಜೊತೆಗೊಬ್ಬ ಶರಣಮ್ಮ ಬಂದಿದ್ದಾಳೆ, ಸಾಕ್ಷಿಗೆ.
ಅವಳನ್ನು ಕರೆಸಬಹುದೇ ಪ್ರಭು?

ಬಿಜ್ಜಳ : ಆಗಬಹುದು. *(ದ್ವಾರಪಾಲಕನಿಗೆ)* ನೋಡಯ್ಯಾ ಹೊರಗೊಬ್ಬ
ಶರಣಮ್ಮ ನಿಂತಿದ್ದಾಳಂತೆ. ಕರೆದುಕೊಂಡು ಬಾ.
*(ಎಲ್ಲರೂ ಬಾಗಿಲ ಕಡೆಗೆ ನೋಡುತ್ತಿರುವಂತೆ ಕಾಶಮ್ಮ ಅವಳ ಹಿಂದೆ ದಾಮೋದರ ಬರುವರು. ಹರಿಹರ ಮಗನ ಮುಖ ನೋಡಿ ತಿರಸ್ಕಾರದಿಂದ ಬೇರೆ ಕಡೆಗೆ ನೊಡುವರು. ಕಾಶವ್ವ ಬಸವಣ್ಣನನ್ನು ನೋಡಿದ್ದೇ ಭಾವುಕಳಾಗಿ ಕೈಮುಗಿಯುವಳು)*

ಕಾಶವ್ವ : ನನ್ನಪ್ಪಾ, ನನಗೆ ಇಲ್ಲಿ ದರ್ಶನ ಕೊಟ್ಟೆಯಲ್ಲಾ ತಂದೇ ಬಸವಾ! ಬಸವಾ!
*(ಬಸವಣ್ಣನ ಕಾಲಿಗೆರಗುವಳು.)* ಯಾಕೆ ಕರೆಸಿದಿ ನನ್ನಯ್ಯಾ?
ಅಣ್ಣನವರು ಸಾಕ್ಷಿ ಹೇಳಲು ಕರೀತಾರೆ ಬಾ ಅಂತ
ಈಯಪ್ಪ ಕರೆತಂದ.

ಬಸವಣ್ಣ : *(ಬಿಜ್ಜಳನನ್ನ ತೋರಿಸಿ)* ಮಹಾರಾಜರು! ನಮಸ್ಕಾರ ಮಾಡಮ್ಮಾ.
*(ಕಾಶಮ್ಮ ಬಿಜ್ಜಳನಿಗೂ ನಮಸ್ಕರಿಸುವಳು.)*

ಹರಿಹರ : ಕಾಶೀ, ಈ ದಿನ ಜಂಗಮರ ಹುಡುಗನೊಬ್ಬ ಬಂದು
ನಿನ್ನ ಮನೆಯಲ್ಲಿ ರತ್ನದ ಸರವನ್ನಿಟ್ಟಿದ್ದ, ಅಲ್ಲವೆ?

ಕಾಶವ್ವ : ಹೌಂದು ಸ್ವಾಮಿ. ರಾಜಭಟ್ರು ಬರ್ತಾರೇಂತ ನಮ್ಮನೇಲಿ
ಅಡಿಕ್ಕೊಂಡು ಕೂತ. ರಾಜಭಟರು ಬಂದು ಹೋಗೋತಂಕ
ಸುಮ್ಮನೆ ಬಿದ್ದುಕೊಂಡಿದ್ದ. ಆಮ್ಯಾಲೆ ಆ ಸರವ ನಮ್ಮನೇಲೇ
ಬಿಟ್ಟು ಓಡಿಹೋದ.

ಹರಿಹರ : ಆಯ್ತು, ನೀನಿನ್ನು ಹೊರಡು. ಹೊರಡೀಗ.
ಪ್ರಭುಗಳಿಗೆ ಈಗ ಖಾತ್ರಿಯಾಗಿರಬೇಕೆಂದು ನಂಬುತ್ತೇವೆ.

ಬಿಜ್ಜಳ : ಇರಿ ಸ್ವಾಮಿ, ಯಾಕೆ ಅವಸರ ಮಾಡ್ತೀರಿ?
ಆಕೆ ಹೇಳಿದ್ದು ಜಂಗಮರ ಹುಡುಗ ಸರವನ್ನ
ಆಕೆಯ ಮನೆಯಲ್ಲಿ ಬಿಟ್ಟ.
ಅದು ಸಾವಂತ್ರಿಯ ಮನೆಗೆ ಹ್ಯಾಗೆ ಬಂತು?

ಹರಿಹರ : ಹಾಗೊ? ಹಾಗಿದ್ದರೆ ಈಗ ನೋಡ್ರಿ:
ಏನೇ ಕಾಶಿ, ನಿಮ್ಮ ಮನೆಯಲ್ಲಿ ಅಡಗಿದವನು
ಜಂಗಮರ ಹುಡುಗ, ಕಾವೀ ಬಟ್ಟೆ ಧರಿಸಿದ್ದ! ಅಲ್ಲವೆ?

ಕಾಶವ್ವ : ಹೌದು ಸ್ವಾಮಿ.

ಹರಿಹರ: ಕೇಳಿದಿರಾ ಪ್ರಭು? ಕಾಶೀ ನೀನಿನ್ನು ಹೊರಡು.

ಸಾವಂತ್ರಿ : ಕಾಶವ್ವಾ ಇಲ್ಲಿ ಬಾ. *(ಕಾಶವ್ವ ಸಾವಂತ್ರಿಯ ಬಳಿಗೆ ಹೋಗುವಳು.)*
ಒಳಗಡೆ ಕೂತಾನಲ್ಲ ಒಬ್ಬ ಜಂಗಮ, –
ನಿನ್ನ ಮನೆಗೆ ಸರ ತಂದವನು ಅವನೇ ಏನಮ್ಮ?

ಕಾಶವ್ವ : ಅಲ್ಲ! ಇವನು ಸಂಗಯ್ಯ. ಆ ಜಂಗಮರ ಹುಡುಗ
ಬೇರೆ. ಅವನೇ ಸಂಗಯ್ಯಂಗೆ ಆ ಸರ ಕೊಟ್ಟು
ನಿನ್ನ ಮನೆ ತೋರಿಸಿ ಅಲ್ಲಿಗೆ ಹೋಗು ಅಂತ ಕಳಿಸಿದ!

ಹರಿಹರ : *(ತನ್ನ ಮಗ ದ್ವಾರದಲ್ಲಿ ನಿಂತುದನ್ನು ಅರಿತು)*
ಮಹಾಪ್ರಭು, ಈ ಹೆಂಗಸು ಏನು ಮಾತಾಡುತ್ತಿದೆ ಅಂತ
ಅದಕ್ಕೇ ಗೊತ್ತಿಲ್ಲ. ಬೇಕಾದರೆ ಕಾವೀ ಧರಿಸಿದ
ಯಾರೇ ಒಬ್ಬನನ್ನು ತೋರಿಸಿದರೂ ಇವನೇ ಕಳ್ಳ ಎನ್ನುತ್ತದೆ.

ತೋರಿಸಲ? *(ದನಿ ನಡುಗಿಸುತ್ತ)* ಸಿದ್ಧಮಾಡಿ ತೋರಿಸಲು ಅಪ್ಪಣೆ ಕೊಡಿ
ಮಹಾಪ್ರಭು, ತಾವು ನಮ್ಮ ಧರ್ಮರಾಯರು!

ಬಿಜ್ಜಳ : ಅಯ್ತು, ತೋರಿಸಿ ಸ್ವಾಮಿ.

ಹರಿಹರ : ದಾಮೋದರ.... *(ಕೂಡಲೇ ಅವಕಾಶಕ್ಕಾಗಿ ಕಾಯುತ್ತಿದ್ದ ದಾಮೋದರ ನಾಟಕೀಯವಾಗಿ ಕಾಣಿಸಿಕೊಳ್ಳುತ್ತಾನೆ)*
ಕಾಶೀ ನಿಮ್ಮ ಮನೆಯಲ್ಲಿ ಅಡಗಿದ್ದುಕೊಂಡು ಆಮೇಲೆ
ಸರವನ್ನು ಅಲ್ಲೇ ಬಿಟ್ಟು ಹೋದವನು ಇವನ ಹಾಗೇ ಇದ್ದನ?

ಕಾಶವ್ವ : ಇವನ ಹಂಗೇ ಯಾಕೆ? ಇವನೇ?
ರಾಜಭಟರು ಹೋದಮ್ಯಾಲೆ ನನ್ನ ಮುದುಕ
ಅದ್ಯಾಕೋ ಸತ್ತ ಹೆಗ್ಗಣ ನಾರತ್ತೈತಲ್ಲ? - ಅಂತ ಒಳಗಡೆ ಹೋದ.
ಒಳಗ ಸರ ಇತ್ತು! ಅದನ್ನ ಹೊರಗ ಒಗೀಬೇಕೆಂದಿವಿ,
ಅಷ್ಟರಾಗ ಈ ಹುಡುಗ ಬಂದು ಸರ ನಂದು ಅಂತ
ತಕ್ಕೊಂಡ!

ದಾಮೋದರ : ಅಪ್ಪಣೆ ಇಲ್ಲದೆ ಬಂದಿದ್ದೇನೆ; ಮಹಾಪ್ರಭುಗಳು ಕ್ಷಮಿಸಬೇಕು,
ನಡೆದದ್ದನ್ನ ಈ ತಾಯಿ ಹೇಳಿದ್ದು ಸರಿಯಾಗಿದೆ.

ಬಿಜ್ಜಳ : ಅಂದರೆ ನೀನೇ ಸರದ ಕಳ್ಳ ಅಂತಲ?

ದಾಮೋದರ : ಹೌದು ಮಹಾಪ್ರಭು. ಅದನ್ನ ತಿಳಿಸುವುದಕ್ಕೇ ನಾನು ಬಂದೆ.

ಹರಿಹರ : ಇದ್ಯಾಕೋ ನಮ್ಮ ಕೈ ಮೀರಿ ಹೋಯ್ತು ಪ್ರಭು!
ಈತ ಯಾರೋ ನಮಗೆ ಗೊತ್ತಿಲ್ಲ. ಅರಮನೆಯಲ್ಲಿ ನಾವು ಇವನನ್ನು
ನೋಡಲೂ ಇಲ್ಲ. ಮಹಾಮನೆಯವರು
ತಮಗೆ ಬೇಕಾದವರನ್ನು ರಕ್ಷಿಸಲು ನಕಲಿ
ಜಂಗಮನನ್ನು ಸೃಷ್ಟಿಸಲೂ ಬಲ್ಲರು!
ತಮ್ಮಂಥವರನ್ನು ನಂಬಿಸಲೂ ಬಲ್ಲರು.

ಬಿಜ್ಜಳ : ನಾಲಗೆ ಮೇಲೆ ನಿಯಂತ್ರನವಿರಲಿ ಪಂಡಿತರೆ *(ಧಿಕ್ಕರಿಸಿ ನೋಡುವನು.*
*ಹರಿಹರ ಹೆದರುವನು. ದಾಮೋದರನಿಗೆ)*
ಏನಯ್ಯಾ, ಇವರು ಯಾರೆಂದು ನಿನಗೆ ಗೊತ್ತೊ?

ದಾಮೋದರ : ಗೊತ್ತು ಪ್ರಭು. ಇವರು ನನ್ನ ತಂದೆ!
*(ಎಲ್ಲರಿಗೂ ಆಘಾತವಾಗುವುದು. ಬಿಜ್ಜಳ "ಹೌದೆ?" ಎಂಬಂತೆ ಹರಿಹರನನ್ನು ನೋಡುವನು. ತಕ್ಷಣ ಹರಿಹರ ಎಚ್ಚತ್ತು.)*

ಹರಿಹರ : ಮಹಾಪ್ರಭುಗಳಿಗೆ ಸತ್ಯ ಹೇಳುವ ನಮ್ಮ ನಾಲಗೆ
ಕ್ರೂರವಾಗಿ ಕಂಡಿದ್ದರೆ ಅದು ಈ ರಾಜ್ಯದ ದುರ್ದೈವ.
ನಮ್ಮ ಸತ್ಯವನ್ನು ನೀವು ಇಲ್ಲಿಯೇ ಈಗಲೇ ಬೇಕಾದರೆ
ಪರೀಕ್ಷಿಸಿಕೊಳ್ಳಿ. ಈ ಹುಡುಗ ನಕಲಿ ಜಂಗಮ.
ನಕಲಿ ಸತ್ಯಕ್ಕೆ ನಕಲಿ ಸಾಕ್ಷಿ!
ಬೇಕಾದರೆ ಅವನ ಮೈಮೇಲೆ ಲಿಂಗವಿದೆಯೇ ಅಂತ
ನೀವೇ ಪರೀಕ್ಷೆ ಮಾಡಿಕೊಳ್ಳಿರಿ. ಈತ ಯಾರೋ ನಮಗೆ ಗೊತ್ತಿಲ್ಲ.
ಹೇಳುವುದನ್ನ ಹೇಳಿಯಾಯ್ತು. ಅಪ್ಪಣೆಯಾಗಲಿ.
*(ಸರನೇ ಹೋಗುವನು. ಬಿಜ್ಜಳನಿಗೂ ಹರಿಹರನ ಉದ್ಧಟತನದಿಂದ ಆಶ್ಚರ್ಯವಾಗುವದು.)*

ದಾಮೋದರ : ಮಹಾಪ್ರಭು, ಈಗ ನಾನು ಒಂದೆರಡು ಮಾತಾಡಲು
ಅಪ್ಪಣೆ ಕೊಡಬೇಕೆಂದು ಪ್ರಾರ್ಥನೆ.

ಬಿಜ್ಜಳ : ಹೇಳು ನೀನು ನಿಜವಾಗಿ ಅವರ ಮಗನೊ?

ದಾಮೋದರ : ಬೇಕಾದರೆ ಸಾಕ್ಷಿಯಾಗಿ ತಾವು ಮಂತ್ರಿ ಕ್ರಮಿತರನ್ನೇ
ಕರೆಸಬಹುದು.

ಬಿಜ್ಜಳ : ಕ್ರಮಿತರೆ? ಅವರೂ ನಿನಗೆ ಗೊತ್ತೆ?

ದಾಮೋದರ : ಎರಡು ನಿಮಿಷ, ಎರಡೇ ನಿಮಿಷ ನಾನು ಮಾತಾಡಲೇ
ಪ್ರಭು?

ಬಿಜ್ಜಳ : ಮಾತಾಡು.

ದಾಮೋದರ : ಮಹಾಪ್ರಭು, ದಯಮಾಡಿ ನನ್ನ ತಪ್ಪನ್ನು ಕ್ಷಮಿಸಿರಿ.
ನಕಲಿ ಜಂಗಮನ ವೇಷದಲ್ಲಿ ಅರಮನೆಯ ರತ್ನದ ಸರವನ್ನು
ಕದ್ದವನು ನಾನೇ. ಕಾಶವ್ವನ ಮನೆಯಲ್ಲಿ ಅಡಗಿದವನೂ
ನಾನೇ. ಆ ಸರವನ್ನು ಮುಗ್ಧ ಸಂಗಯ್ಯನಿಗೆ ಕೊಟ್ಟು ಅವನನ್ನು
ಸೂಳೆ ಸಾವಂತ್ರಿಯ ಮನೆಗೆ ಕಳಿಸಿದವನೂ ನಾನೇ.
ಇದು ಸತ್ಯ. ಬಸವಣ್ಣ ಪಾದದಾಣೆಗೂ ಸತ್ಯ. ನನ್ನ ಸಾಕ್ಷಿ
ಕಾಶವ್ವ ಮತ್ತು ಕಳ್ಳ ಚಿಕ್ಕಣ್ಣ ಹೊರಗಿದ್ದಾರೆ, ಕರೆತರಲೆ?

ಬಿಜ್ಜಳ : ಬೇಡ. ಬಸವಣ್ಣ ಈ ಹುಡುಗ ತಾನು ಪಂಡಿತ ಹರಿಹರೇಶ್ವರರ
ಮಗ ಎಂದು ಸಾಬೀತಾಗುವತನಕ ನಾನು
ಯಾವುದೇ ತೀರ್ಮಾನ ತಕ್ಕೊಳ್ಳಲಾರೆ. ನಾಳೆ ಖುದ್ದಾಗಿ

ನಾನೇ ವಿಚಾರಿಸಿ ಒಂದು ತೀರ್ಮಾನಕ್ಕೆ ಬರುತ್ತೇನೆ.
ಆಗಬಹುದೆ?

ಬಸವಣ್ಣ : ಅಲ್ಲಿಯವರೆಗೆ ಮುಗ್ಧಸಂಗಯ್ಯ ಮತ್ತು ಈ ಹುಡುಗ….

ದಾಮೋದರ : ನನ್ನ ಹೆಸರು ದಾಮೋದರ…

ಬಸವಣ್ಣ : ನಾಳೆಯವರೆಗೆ ಮುಗ್ಧಸಂಗಯ್ಯ ಮತ್ತು ದಾಮೋದರ
ತಮ್ಮ ಬಂಧಿಗಳೆ?

ಬಿಜ್ಜಳ : ಒಂದೇ ದಿನ. ಇದು ಕಾನೂನಿನ ಮಾತು ಬಸವಣ್ಣ.

ಸಾವಂತ್ರಿ : ನಾನು ಅಡವು ನಿಲ್ಲುತ್ತೇನೆ, ಮುಗ್ಧ ಸಂಗಯ್ಯನಿಗೆ
ಕೈ ಹಚ್ಚಬ್ಯಾಡಿ ಪ್ರಭು.

ಬಸವಣ್ಣ : ನಾನು ದಾಮೋದರನಿಗೆ ಅಡವು ನಿಲ್ಲುತ್ತೇನೆ.

ಬಿಜ್ಜಳ : ಇದು ರಾಜ್ಯದ ಕಾನೂನಿನ ಗೌರವದ ಪ್ರಶ್ನೆ. ಶರಣರಿಗೆ
ಒಂದು ಸೌಲಭ್ಯ ಕೊಟ್ಟರೆ ಎಲ್ಲರಿಗೂ ಕೊಡಬೇಕಾಗುತ್ತದೆ.
ಅಲ್ಲವೆ ಬಸವಣ್ಣ?

ದಾಮೋದರ : ಹೇಳಿದ ಮಾತನ್ನು ಸಾಬೀತುಪಡಿಸಬೇಕಾದವನು ನಾನು.
ಕಳ್ಳತನದಿಂದ ಹಿಡಿದು ಮುಗ್ಧಸಂಗಯ್ಯನನ್ನು ಇಲ್ಲಿಗೆ
ಕಳಿಸುವುದರವರೆಗೆ ಕೈವಾಡವಿರೋದು ನನ್ನದು.
ಹೀಗಿರುವಾಗ ನಾನೊಬ್ಬ ತಮ್ಮ ಬಂಧಿಯಾದರೆ
ಸಾಲದೆ ಪ್ರಭು?

ಬಿಜ್ಜಳ : ಆಯಿತಯ್ಯಾ. ಹರಿಹರೇಶ್ವರ ನಿನ್ನ ತಂದೆ
ಅಂತ ಹೇಳಿದೆಯಲ್ಲಯ್ಯ? ನಿನ್ನ ಮಾತು ನಂಬಬಹುದ?

ದಾಮೋದರ : ನಂಬಲೇಬೇಕು. ಯಾಕೆಂದರೆ ಅದು ಸತ್ಯ!

ಬಿಜ್ಜಳ : ಹಾಗಿದ್ದರೆ ನಿನಗೆ ತಂದೆಯಾದವನೇ ತಂದೆ
ಎಂದು ಹೇಳಲು ಯಾಕೆ ನಿರಾಕರಿಸಿದ?
ಕೇಳಿದೆಯಾ ಬಸವಣ್ಣ ಇವನ ವಾದವನ್ನ? ಯಾವನಾದರೂ
ತಂದೆ ಕೂಡಿದ ಜನರೆದುರಿನಲ್ಲಿ 'ನೀನು ನನ್ನ
ಮಗ ಅಲ್ಲ' ಅಂತ ಸುಳ್ಳು ಹೇಳುವುದು ಸಾಧ್ಯವೆ?

ಸಾವಂತ್ರಿ : ಪ್ರಭು, ನ್ಯಾಯನಿರ್ಣಯ ನಿಮಗೇ ಬಿಟ್ಟದ್ದು.
ಹೇಳಬೇಕಾದ್ದನ್ನು ಎಲ್ಲರೂ ಹೇಳಿಯಾಗಿದೆ.
ನ್ಯಾಯ ಯಾರ ಪರವಾದರೂ ಸರಿ, ದಯಮಾಡಿ
ಈಗ ಅಣ್ಣನವರನ್ನು ನೋಯಿಸಬ್ಯಾಡ್ರಿ. ಅವರೀಗ
ಮೊದಲಿನ ಬಸವಣ್ಣನವರಾಗಿ ಉಳಿದಿಲ್ಲ. ಹರಳಯ್ಯ
ಮಧುವರಸರನ್ನು ಎಳೆಹೂಟೆ ಎಳಸಿದಾಗಿನಿಂದಲೂ
ಅವರು ಅನ್ನ ನೀರು ಮುಟ್ಟಿಲ್ಲ. ಹೆಚ್ಚು ಮಾತಿಲ್ಲ,
ಕತೆಯಿಲ್ಲ. ನಿಮ್ಮೊಂದಿಗೆ ಅವರು ಈ ದಿನ ಒಂದೆರಡು
ಮಾತಾಡಿದ್ದೇ ಶಿವಾಯಿ ಸತಿಯರೊಂದಿಗೆ ಕೂಡ
ಬಾಯಿ ಬಿಚ್ಚಿಲ್ಲ. ಮನೆಯಲ್ಲಿ ತಾಯಂದಿರೂ ಉಪವಾಸ.
ಸುದ್ದಿ ಗೊತ್ತಾದ ಶರಣರೂ ಬಾಯಲ್ಲಿ ನೀರು ಹಾಕಿಲ್ಲ.
ಕೈಮುಗಿಯುತ್ತೇನೆ ಮುಗ್ಧ ಸಂಗಯ್ಯನನ್ನು
ಬಿಟ್ಟುಬಿಡ್ರಿ ಪ್ರಭು. *(ಅಳುತ್ತಾಳೆ)*

ಬಿಜ್ಜಳ : *(ಅಸೂಯೆಯಿಂದ)* ಬಸವಣ್ಣ ನಿನ್ನನ್ನ ಪ್ರೀತಿ ಮಾಡ್ತಾನೇನೇ?

ಸಾವಂತ್ರಿ : ಹೌದು, ಅವರು ಎಲ್ಲರನ್ನೂ ಪ್ರೀತಿಸುತ್ತಾರೆ.
ನಿಮ್ಮನ್ನೂ ಕ್ರಮಿತರನ್ನು ಕೂಡ.
*(ಹೊರಗಡೆ ಜನರ ಕೂಗಾಟ ಕಿರುಚಾಟ ಕೇಳಿಸುತ್ತದೆ ಒಳಗಿನವರಿಗೆ ಆತಂಕ)*

ಬಿಜ್ಜಳ : ಏನದು ಗಲಾಟೆ?... ಯಾರಲ್ಲಿ?

ದ್ವಾರಪಾಲಕ : ತಮ್ಮವರ್ಯಾರೂ ಇಲ್ಲಿಲ್ಲ ಸ್ವಾಮೀ.
ಅಗೊ ಯಾರೋ ಬಂದರೆಂದು ಕಾಣುತ್ತದೆ.
*(ಚಿಕ್ಕಣ್ಣ ಅಣ್ಣಾ ಎಂದು ಕೂಗುತ್ತ ಬಂದು ಬಸವಣ್ಣನ ಪಾದಗಳ ಮೇಲೆ ಬಿದ್ದು)*

ಚಿಕ್ಕಣ್ಣ : ಅಣ್ಣಾ, ಘಾತವಾಯಿತಣ್ಣಾ!
ಹರಳಯ್ಯನ ಕೇರಿಗೆ ಬೆಂಕಿ ಬಿದ್ದಿದೆ!

ಕಾಶವ್ವ : ಅಯ್ಯೋ! ಶೀಲವಂತ - ನನ್ನ ಮನೆಯಲ್ಲಿ ಅಡಗಿದ್ದನಣ್ಣಾಃ....
ತಂದೇ ಅವನನ್ನು ಉಳಿಸಿರಣ್ಣಾ.

ಚಿಕ್ಕಣ್ಣ : ಮೊದಲು ಬೆಂಕಿ ಬಿದ್ದದ್ದೇ ನಿನ್ನ ಮನೆಗಮ್ಮಾ!
*(ವಿಷಯ ತಿಳಿದೊಡನೆ ಬಸವಣ್ಣ ಚಕಿತನಾಗಿ ನಿಂತುಬಿಡುವನು. ಕಾಶವ್ವ "ಅಯ್ಯೋ ನನ್ನ ಕೂಸೇ ಶೀಲವಂತಾ" ಎಂದು ಗೋಳಿಡುತ್ತ ಎದೆ ಎದೆ ಬಡಿದುಕೊಳ್ಳುತ್ತ ಹೊರಗೆ ಓಡವಳು. ಒಂದೆರಡು ಕ್ಷಣ ಎಲ್ಲರೂ ಭ್ರಾಂತರಾಗಿ ನಿಲ್ಲುವರು. ಆಮೇಲೆ ಮುಗ್ಧ ಸಂಗಯ್ಯ ಮೈಯಲ್ಲಿ ಆವೇಶ ತುಂಬಿ ಎದ್ದು ಬಸವನ ಬಳಿ ಬಂದು 'ಮುಗಿಯಿತೋ ಮುಗಿಯಿತು' ಎಂದು ಕಾರಣಿಕ ಕೂಗಿದಂತೆ ಕೂಗುವನು.)*

ಸಂಗಯ್ಯ : ಶೀಲವಂತನಿಗೆ ರಕ್ಷಣೆ ಸಿಕ್ಕಲಿಲ್ಲವೆಂಬಲ್ಲಿಗೆ
ನಮ್ಮ ಕತೆ ಮುಗಿಯಿತು ಬಸವಣ್ಣಾ.
ಭರತವಾಕ್ಯ ನುಡಿಯುವುದಕ್ಕೆ ನಗರದೇವತೆಯ ಸನ್ನಿಧಿ
ಬೇಕು. ಎಲ್ಲಿ ಆ ತಾಯಿ?

ಹುಚ್ಚಿ : *(ಹೊರಬಾಗಿಲ ಕಡೆಯಿಂದ ಬರುವಳು.)*
ಇಲ್ಲಯೇ ಇದ್ದೇನೆ ನನ್ನಪ್ಪಾ, ಅನಿರೀಕ್ಷಿತಗಳ
ಎದುರಿಸಲಾರದೆ ಹೆದರಿಕೊಂಡು ಜನರಲ್ಲಿ
ಕರಗಿದ್ದೇನೆ. ಎಳೆಯ ಹುಡುಗರನ್ನ ಎಳೆದೆಳೆದು
ಕೊಂದರೂ ಹೇಳಕೇಳುವವರಿಲ್ಲ ಕಲ್ಯಾಣದಲ್ಲಿ.
ನಿನ್ನ ಶರಣರಿಗೂ ರಕ್ಷಣೆ ಕೊಡಲಾರದ
ಸ್ಥಿತಿ ಬಂದಿದೆ ನನಗೆ. ನಾನೂ ಈಗ
ಮುದಿನಾಯಿಯಂತೆ ಬೊಗಳುತ್ತಿದ್ದೇನೆ, ಕ್ಷಮಿಸು ನನ್ನಪ್ಪಾ.

ಬಸವಣ್ಣ : ನೀವು ಸಣ್ಣವರಾಗಿ ಮಾತಾಡಬಾರದು ತಾಯೀ.
ನಾನು ಕಲ್ಯಾಣಕ್ಕೆ ಬಂದಾಗ
ಇವ ಯಾರವ? ಇವ ಯಾರವ? - ಎಂದು ಭಿನ್ನ
ನುಡಿ ಬಂದಾಗ “ಇವ ನಮ್ಮವ ಇವ ನಮ್ಮವ”
ಎಂದು ಒಪ್ಪಕೊಂಡಿರಿ ತಾಯಿ.
ಕಾಪಾಡಿದಿರಿ ಕೃಪೆಯ ಚಾಚಿ.
ಅವಕಾಶ ಒದಗಿಸಿಕೊಟ್ಟಿರಿ ಬೇಕಾದಷ್ಟು.
ಕೈಲಾದಷ್ಟು ಮಾಡಿದೆ ನಿಮ್ಮ ಸೇವೆಯನ್ನ.
ನನ್ನ ಸೇವೆಯಲ್ಲೇನಾದರೂ ಕೊರತೆಯಾಗಿದ್ದಲ್ಲಿ
ಮಗನ ತಪ್ಪೆಂದು ಮನ್ನಿಸಿರಿ ತಾಯೀ!

ಹುಚ್ಚಿ : ಏನು ಮಾತು ನನ್ನಪ್ಪಾ?
ನೀನು ಮಗನಾಗಿ ಸಿಕ್ಕರೆ ಯಾವ ತಾಯಿ
ಹೆಮ್ಮೆ ಪಡದೆ ಇದ್ದಳು?
ನಿನ್ನನ್ನು ಹೆತ್ತ ತಾಯಿಯ ಹೊಟ್ಟೆ ತಣ್ಣಗಿರಲಿ.
ನೀನು ನನ್ನ ಹೆಮ್ಮೆಯಾಗಿದ್ದೆ
ಅಭಿಮಾನವಾಗಿದ್ದೆ ಬಸವಾ!

ಬಸವಣ್ಣ : ಇನ್ನು ಅಪ್ಪಣೆಯೆ ತಾಯಿ?

ಹುಚ್ಚಿ : ಹೊರಟೇಬಿಟ್ಟಿರಾ?

ಸಂಗಯ್ಯ : ಹೊರಡಲೇಬೇಕಲ್ಲ ತಾಯಿ.

ಹುಚ್ಚಿ : ನಮ್ಮ ಕತೆಯ ಕೊನೆ ಬಹಳ ಅವಸರವಾಯ್ತು.
ಅಷ್ಟೇ ಕಹಿಯಾಗಿತ್ತು. ಹೀಗಾದೀತೆಂದು ನನಗೆ
ಅಂದಾಜಾಗಲೇ ಇಲ್ಲ ಬಸವಣ್ಣಾ.
ಹೊಸ ಕ್ಷಿತಿಜವನ್ನ ಎತ್ತಿ ಹಿಡಿದ ಬೆಟ್ಟವಾಗಿ
ನೀ ಬಂದೆ ಬಸವಾ ಕಲ್ಯಾಣಕ್ಕೆ!
ಸಂಜೆಯಾದೊಡನೆ ಆಕಾಶವೂ ಬಾಗುತ್ತದಪ್ಪ
ಕ್ಷಿತಿಜ ಮ್ಯಾಲೆ. ಬೆಟ್ಟ ಕುಗ್ಗಿದರೆ
ಕ್ಷಿತಿಜವೂ ಕುಸಿಯುತ್ತದೆ - ಅಂತ ವ್ಯವಹಾರ
ಜ್ಞಾನವೂ ಬೇಡವೆ?
ಕಾಲನ ಬೆಂಕಿಯಲ್ಲಿ ನಾವು ಮಾಗಲೇ ಇಲ್ಲ!

## ದೃಶ್ಯ ಆರು (3)

ಬಸವಣ್ಣ : ನಿಮ್ಮಿಂದ ಅಗಲುವುದಕ್ಕೆ ಕರುಳು ಕತ್ತರಿಸಿದಂತಾಗುತ್ತದೆ ತಾಯಿ!

ಹುಚ್ಚಿ : ಬಸವಾ ಬಸವಣ್ಣಾ, ನಿನ್ನ ಕನಸು ಇರುತ್ತದೆ
ನನ್ನಪ್ಪಾ - ನನಸಾಗುವವರೆಗೆ.
ಕೊಂಚ ಅವಸರವಾಯ್ತು. ಅತಿ ಉತ್ಸಾಹದಲ್ಲಿ
ಮಧ್ಯರಾತ್ರಿಯಲ್ಲೇ ಎದ್ದು ಕೂತೆ ನೀನು!
ಎದ್ದವನೇ ಮುಖಕ್ಕೆ ತಣ್ಣೀರೆರಚಿಕೊಂಡು
ಬನ್ನಿರೋ ಬನ್ನಿರಿ ಹೊಸ ಬೆಳಕಿನ ಉದಯಕ್ಕೆ!
ಅಂತ ಜನಗಳ ಕರೆದೆ.
ನಿಜ ಹೇಳಬೇಕೆಂದರೆ ಆಗಿನ್ನೂ ಬೆಳಗಿನ ತಾರೆ
ಮೂಡಿರಲೇ ಇಲ್ಲ!
ರಾತ್ರಿಯಿನ್ನೂ ಒರಗಿತ್ತು ಗುಡ್ಡದಗುಂಟ, ಕನಸು ಕಾಣುತ್ತ.
ಅವಳ ಕಾಲುದೆಸೆ ಕಾಲ ಮಲಗಿದ್ದ ತನ್ನ ಮಾಪನ
ಸಾಮಗ್ರಿಗಳ ಚೆಲ್ಲಿ.
ನಿನ್ನ ಮಾತು ಕೇಳಿಸಿಕೊಂಡ ಜನರೇನೋ
ಗುಡ್ಡವನೇರಿ ಬಂದರು. ಆದರೆ ಮುಂಬೆಳಗಿನ
ಗುರುತು ಕಾಣದೆ ಹಾಗೆ ಹಾಗೇ ನಿದ್ದೆ ಹೋದರು!
ಅವರ ರೆಪ್ಪೆಗೆ ನಿದ್ದೆಯಿನ್ನೂ ಜೋತು ಬಿದ್ದಿದೆ!

ಆಯ್ತು, ಬೆಳಗಾದ ಮ್ಯಾಲಾದರೂ ಆ ಜನ ಎದ್ದು
ನೀನು ತೋರಿಸಿದ ಭವಿಷ್ಯಂತಿಯ ಬದುಕಲೆಂದು
ಹಾರೈಸೋಣ! ನಿನಗೆ ಶುಭವಾಗಲಿ ಬಸವಣ್ಣಾ.
ಸಂಗಯ್ಯಾ….

ಸಾವಂತ್ರಿ : ನನ್ನದೊಂದು ಪ್ರಾರ್ಥನೆ ಇದೆ ಅಣ್ಣನವರೇ.

ಬಸವಣ್ಣ : ಅದೇನು ಹೇಳು ತಾಯೀ.

ಸಾವಂತ್ರಿ : ಮಹಾಮನೆಯಲ್ಲಿ ನನಗೂ ಪ್ರವೇಶಿವಿದೆಯೇ ತಂದೆ?

ಬಸವಣ್ಣ : ಮಹಾಮನೆ ಎನ್ನುವುದು ಸ್ಥಾವರವಲ್ಲ ತಾಯೀ.
ಸಂಗಯ್ಯ ಸನ್ನಿಧಿ ಕೊಟ್ಟುದೇ ಮಹಾಮನೆ.
ಸಂಗಯ್ಯನ ಸನ್ನಿಧಿಯಿಂದ

ನಿನ್ನ ಮನೆಯನ್ನೇ ಮಹಾಮನೆ ಮಾಡಿಕೊಂಡ
ಧೀರ ಶಿವಶರಣೆ ನೀನು!

ಸಾವಂತ್ರಿ : ಹಾಗಿದ್ದರೆ ಕೂಡಲ ಸಂಗಮನ ಯಾತ್ರೆಯಲ್ಲಿ
ಪಾಲ್ಗೊಳ್ಳಲು ನನಗೂ ಅವಕಾಶವಿದೆಯೆ ನನ್ನಪ್ಪ?

ಬಸವಣ್ಣ : ಖಂಡಿತವಾಗಿ ತಾಯಿ.

ಹುಚ್ಚಿ : ಮತ್ತೆ ಈ ದೊಡ್ಡಮನೆ, ಈ ಶ್ರೀಮಂತಿಕೆ?

ಸಾವಂತ್ರಿ : ಅದೆಲ್ಲ ಪೂರ್ವಾಶ್ರಮ, ಪೂರ್ವಾಶ್ರಮದ ಕಿಂಚಿತ್
ಗುರುತೂ ನನಗೆ ಬೇಡ ತಾಯಿ.

ಕಾಮಾಕ್ಷಿ : ಅಣ್ಣನವರೇ, ನನಗೂ ಅನುಮತಿ ಕೊಡ್ರಿ ತಂದೇ.

ಬಸವಣ್ಣ : ನೀನೂ ಬಾ ಮಗಳೇ!

ಹುಚ್ಚಿ : *(ಸುಮ್ಮನೆ ಕುಳಿತ ಬಿಜ್ಜಳನನ್ನು ಕುರಿತು.)*
ಪೀಠದ ಮ್ಯಾಲೆ ಕೂತ ದೇವರ ಹೀಗೆ ಎಬ್ಬಿಸಿ
ಕಳಿಸುವುದುಂಟೆ?
ವಿಸರ್ಜನೆಗೊಂದು ಕ್ರಮ ಅಂತ ಬೇಡವೆ?
ಹೊರಟು ನಿಂತಿದ್ದಾನೆ ಸಂಗಯ್ಯ. ಭಕ್ತಿಯಿಂದ
ಬೀಳ್ಕೊಡಿರಯ್ಯಾ, ಬಿಲ್ವಪತ್ರೆಯ ಎಲೆಯನ್ನಾದರೂ
ಅವರ ಪಾದದ ಮ್ಯಾಲಿಡಿರಿ.
*(ಬಿಜ್ಜಳನೂ ಎದ್ದು ನಿಲ್ಲುವನು. ಸಂಗಯ್ಯ ಭರತವಾಕ್ಯ ನುಡಿಯುತ್ತ 'ಬಸವಣ್ಣಾ!!' ಎಂದು ಹೇಳಿದಲ್ಲಿ ಎಲ್ಲರೂ ಪಲ್ಲವಿಯಂತೆ "ಕಡೇರುದ್ರ " ಎಂದು ಕೂಗುವರು. ಹೊರಗಡೆ ಇದಕ್ಕೆ ಅನುಗುಣವಾಗಿ ಕರಡಿ ಮೇಳ ಕೇಳಿಸುವುದು.)*

ಮುಗ್ಧ ಸಂಗಯ್ಯ : ಮುಗಿಯಿತೋ ಮುಗಿಯಿತು!
ಕಲ್ಯಾಣದ ನಾಟಕ ಮುಗಿಯಿತು.
ಅವಧಿಯಳಿಯಿತ್ತು ವ್ಯವಧಾನ ಉಳಿಯಿತ್ತೋ ಬಸವಣ್ಣಾ॥

ನನಗೂ ನಿನಗೂ ಕೂಡಲ ಸಂಗಮದಲ್ಲಿ
ಪರಿಣಾಮ!
ಮನಮುಟ್ಟಿ ಮಾಡಿದ್ದೇವೆ
ಕೊನೆ ಮುಟ್ಟದಿದ್ದರೆ ಹೆಂಗೆಂದು
ಉಳಿದವರು ಉಳಿವಿಯಲ್ಲಿ ಹಲುಬುವರೋ ಬಸವಣ್ಣಾ॥

ಬಸವನಿಲ್ಲದ ಕಲ್ಯಾಣಿಗೆ
ಕನ್ನಡಿಯಲ್ಲಿ ಕಲ್ಯಾಣವ ಕಂಡು
ಇತಿಹಾಸದಲ್ಲಿ ಗೋಗರೆಯುವುದೇ ಪರಿಣಾಮ.
ನಡೆಯೋ ನಡೆಯಿನ್ನು ಕೂಡಲ ಸಂಗಮಕ್ಕೆ ಬಸವಣ್ಣಾ॥
*(ಎಂದು ಘರ್ಜಿಸಿ ಮುಂದೆ ಮುಂದೆ ನಡೆಯುವನು. ಅವನ ಮಾತಿಗೆ ತಕ್ಕಂತೆ ಹೊರಗೆ ಕರಡಿಯ ಮಜಲು ಜೋರಾಗಿ ಕೇಳಿಸುವುದು. ಆ ಸದ್ದಿನಲ್ಲಿ ಮುಗ್ಧ ಸಂಗಯ್ಯನ ಹಿಂದೆ ಹಿಂದೆ ಬಸವಣ್ಣ, ಮಂತ್ರಮುಗ್ಧಳಾಗಿ ಕೈಮುಗಿದ ಹುಚ್ಚಿಯೂ ಹೋಗುವರು. ಬಿಜ್ಜಳನಿಗೆ ನಮಸ್ಕರಿಸಿ ಸಾವಂತ್ರಿ, ಕಾಮಾಕ್ಷಿಯರೂ ಹಾಗೂ ಚಿಕ್ಕಣ್ಣನೂ ಹೋಗುವರು. ಬಸವಣ್ಣ ಹೊರಟಾಗ ಬಿಜ್ಜಳ, ದಾಮೋದರರು ಗರಬಡಿದಂತೆ ನಿಲ್ಲುವರು. ಹಾಗೆ ನಿಂತೇ ಇದ್ದ ಬಿಜ್ಜಳನನ್ನು ನೋಡಿ ದಾಮೋದರ ತಾನೂ ಹೋಗಬೇಕೆ? ಇರಬೇಕೆ? ತಿಳಿಯದೆ ಹೊರಡಲು ಅನುವಾದಾಗ ಬಿಜ್ಜಳ ಸನ್ನೆ ಮಾಡಿ ಅವನನ್ನು ನಿಲ್ಲಿಸುವನು. ಭಯಂಕರ ಸದ್ದಿನಿಂದ ಕೂಡಿದ ಇಡೀ ವಾತಾವರಣ ತಣ್ಣಗಾಗುವ ತನಕ ಸುಮ್ಮನಿದ್ದು ಆಮೇಲೆ)*

ದ್ವಾರಪಾಲಕ : *(ಪ್ರವೇಶಿಸಿ)* ಮಹಾಪ್ರಭು ಕೊತವಾಲರು ಬಂದಿದ್ದಾರೆ.

*(ದ್ವಾರಪಾಲಕ ಹೋಗಿ, ಕೊತವಾಲ ಬಂದು ನಮಸ್ಕರಿಸಿ ನಿಲ್ಲುವನು.)*

ಬಿಜ್ಜಳ : *(ದಾಮೋದರನನ್ನು ತೋರಿಸಿ)* ಈತ ಗೊತ್ತೊ ನಿನಗೆ?

ಕೊತವಾಲ : ಗೊತ್ತು ಪ್ರಭು, ಅರಮನೆಯಲ್ಲಿ ಸರ ಕದ್ದಾಗಿನಿಂದ ಹಿಡಿದು ಈವರೆಗಿನ...

ಬಿಜ್ಜಳ : ಇರು. ಈತ ಅರಮನೆಯಲ್ಲಿ ಸರ ಕದ್ದು, ಕಾಶವ್ವನ ಮನೆಯಲ್ಲಿ ಅಡಗಿ,
ಮುಗ್ಧಸಂಗಯ್ಯನಿಗೆ ಸರಕೊಟ್ಟು, ಸೂಳೆ ಸಾವಂತ್ರಿಯ ಮನೆಗೆ ಕಳಿಸಿದ,
ಸರಿಯ?

ಕೊತವಾಲ : ಸರಿಯಾಗಿದೆ ಮಹಾಪ್ರಭು.

ಬಿಜ್ಜಳ : ಈ ವಿಷಯವನ್ನೂ ಇವನೇ ಹೇಳಿಕೊಂಡ. ಈತ
ಹರಿಹರೇಶ್ವರನ ಮಗನಂತೆ. ಹೌದೊ?

ಕೊತವಾಲ : ಹೌದು ಪ್ರಭು.

ಬಿಜ್ಜಳ : *(ಅನುಮಾನದಿಂದ)* ಹರಿಹರೇಶ್ವರನಿಗೆ ಎಷ್ಟು ಜನ ಹೆಂಡಂದಿರು?

ಕೊತವಾಲ : ಒಬ್ಬಳೇ ಹೆಂಡತಿಯ ಒಬ್ಬನೇ ಮಗ ಇವನು.
ತಂದೆ ತಾಯಿ ಮತ್ತು ಮಗ ಜೊತೆಯಲ್ಲೇ ಇದ್ದಾರೆ.
ಮುಖ್ಯ ಇವನೊಬ್ಬ ಬಂಡುಕೋರ, ಪ್ರಗತಿವಾದಿ ಮಹಾಪ್ರಭು.
ಹಳೆಯ ಸಂಪ್ರದಾಯಗಳನ್ನು ವಿರೋಧಿಸಿ ಎಳೆಯ ವಯಸ್ಸಿನಲ್ಲೇ
ತನ್ನ ಕುಲಬಾಂಧವರಲ್ಲಿ ವಿರೋಧಿಗಳನ್ನು ಸಂಪಾದಿಸಿದ್ದಾನೆ.

ಬಿಜ್ಜಳ : ಇಂಥವನು ಕಳ್ಳತನ ಯಾಕೆ ಮಾಡಿದ?

ಕೊತವಾಲ : ನನಗೂ ಅದೇ ಆಶ್ಚರ್ಯ ಮಹಾಪ್ರಭು!
ಸಾಲದ್ದಕ್ಕೆ ಇವನು ನಿಷ್ಠುರವಾದಿ, ಸುಳ್ಳುಗಾರನಲ್ಲ.
ಯಾರ ಮಾತಿಗೂ ಮನ್ನಣೆ ಕೊಟ್ಟವನಲ್ಲ.
ಕಳ್ಳತನ ಮಾಡಲಿಕ್ಕೆ ಇವನಿಗೆ ಸ್ವಂತದ್ದೇನೋ ಉದ್ದೇಶ
ಇರಬೇಕೆಂದೇ ಇವನನ್ನು ಬಲ್ಲವರು ಹೇಳುತ್ತಾರೆ
ಮಹಾಪ್ರಭು.

ಬಿಜ್ಜಳ : ಇದಿನ್ನೂ ವಿಚಿತ್ರ! ಅಂದರೆ ಇವನು ಈವರೆಗೆ ಹೇಳಿದ್ದೆಲ್ಲಾ
ನಿಜ ಎಂದಂತಾಯ್ತು.
ಹೇಳು ಇನ್ನೇನು ಸುದ್ದಿ?

ಕೊತವಾಲ : ಹರಳಯ್ಯನ ಕೇರಿಗೆ ಬೆಂಕಿ ಹಚ್ಚಿದರು
ಮಹಾಪ್ರಭೂ. ಶೀಲವಂತ ಸುಟ್ಟುಕೊಂಡು ಸತ್ತ.

ಬಿಜ್ಜಳ : *(ಆಘಾತಗೊಂಡು)* ಬೆಂಕಿ ಹಚ್ಚಿದವರ್ಯಾರು?

ಕೊತವಾಲ ; ಕ್ರಮಿತರ ಕಡೆಯವರು ಪ್ರಭು.

ಬಿಜ್ಜಳ : ಮೂರ್ಖಾ, ಏನು ನಡೆದರೂ ಅವರನ್ನೇ ಗುರಿ
ಮಾಡುತ್ತೀಯಲ್ಲ? ಈ ಮಾತಿಗೆ ಸಾಕ್ಷಿ ಏನು?

ಕೊತವಾಲ : ಬೆಂಕಿ ಹಚ್ಚಿ ಓಡುವಾಗ ಜನರೇ ಬೆಂಕಿ ಹಚ್ಚಿದವರನ್ನು
ಹಿಡಿದು ಎದುರಿನಲ್ಲೇ ಇವರು ತಮ್ಮ ಪ್ರತಾಪಗಳನ್ನು
ಕೊಚ್ಚಿಕೊಂಡು ಕ್ರಮಿತರಿಗೆ ಜಯಕಾರ ಕೂಗಿದರು!

ಬಿಜ್ಜಳ : ನೀನೆಲ್ಲಿದ್ದೆ? ರಾಜಭಟರೇನು ಮಾಡುತ್ತಿದ್ದರು?

ಕೊತವಾಲ ; ನಾವೆಲ್ಲ ಅಲ್ಲೇ ಇದ್ದಿವಿ ಮಹಾಪ್ರಭು. ಶೀಲವಂತ
ಈಗ ಪ್ರಭುಗಳ ರಕ್ಷಣೆಯಲ್ಲಿದ್ದಾನೆಂದೂ ಹೇಳಿದೆವು.
ನಮ್ಮೊಂದಿಗೆ ಸಂವಾದ ಮಾಡುತ್ತಲೇ ನಮ್ಮನ್ನು
ಇನ್ನೊಂದು ಬದಿಗೊಯ್ದು, ಉಳಿದಿಬ್ಬರು ಕಾಶವ್ವನ
ಮನೆ ಕಡೆ ಓಡಿ ಕೊಳ್ಳಿಯಿಟ್ಟರು ಮಹಾಪ್ರಭು.
ಎದುರಾದ ನಮ್ಮಿಬ್ಬರು ರಾಜಭಟರನ್ನೂ ಬಲಿ
ತಗೊಂಡರು. ಅಪರಾಧಿಗಳನ್ನು ಕಟ್ಟಿ ತಂದಿದ್ದೇನೆ,
ಕರೆತರಲೆ ಮಹಾಪ್ರಭು?

ಬಿಜ್ಜಳ : ಬೇಡ. ಬಂಧನದಲ್ಲಿರಲಿ. ನಾಳೆ ವಿಚಾರಿಸೋಣ.
ಅಂಗರಕ್ಷಕರೆಲ್ಲಿ?

ಕೊತವಾಲ : ಯಾರೊಬ್ಬರೂ ಇಲ್ಲ ಪ್ರಭು!

ಬಿಜ್ಜಳ : ಬಸವಣ್ಣನ ಜೊತೆಗೆ ಹೊದರೆ?

ಕೊತವಾಲ : ಕಳ್ಳನನ್ನು ಹುಡುಕಿಕೊಂಡು ಅಲ್ಲಿಗೂ ಹೋಗಿದ್ದೆ.
ಬಸವಣ್ಣನವರೊಂದಿಗೆ ಹೋದವರಲ್ಲಿ ನಮ್ಮವರ್ಯಾರೂ
ಇರಲಿಲ್ಲ ಮಹಾಪ್ರಭು.

ಬಿಜ್ಜಳ : ಬಸವಣ್ಣ ಹೋದನ?

ಕೊತವಾಲ ; ಮೊದಲು ಬೆಂಕಿ ಬಿದ್ದ ಗುಡಿಸಲು ಮನೆಗಳಿಗೆ
ಹೋಗಿ ಸಮಾಧಾನ ಹೇಳಿ, ಕೆಲವು ಕರ್ತವ್ಯಗಳನ್ನು
ತಮಗೆ ತಿಳಿಸಲು ನನಗೆ ಹೇಳಿ ಹೋದರು. ಅವರೊಂದಿಗೆ
ಲೆಕ್ಕವಿಲ್ಲದಷ್ಟು ಶರಣರು ಹೋದರು ಮಹಾಪ್ರಭು.

ಬಿಜ್ಜಳ : ಹೊರಗೆ ಭಾರೀ ಕತ್ತಲಿರಬೇಕಲ್ಲಾ?

ಕೊತವಾಲ : ಶಿವರಾತ್ರಿಯ ಕತ್ತಲು. ಶೈವ ದೇವಸ್ಥಾನಗಳಲ್ಲಿ ಕೂಡ
ದೀಪ ಹಚ್ಚಿಲ್ಲ.

ಬಿಜ್ಜಳ : ವೇಷಾಂತರದಲ್ಲಿ ತಲೆ ಬಗ್ಗಿಸಿ ಬಂದೆನಾದ್ದರಿಂದ
ನಮಗೆ ಸರಿಯಾಗಿ ಕಾಣಲಿಲ್ಲ. ಹೊರಗಡೆ ಜನ ಇದ್ದಾರೇನು?

ಕೊತವಾಲ : ಇಡೀ ಕಲ್ಯಾಣ ಶಿವರಾತ್ರಿಯ ಕತ್ತಲಲ್ಲಿ ಮುಳುಗಿ
ಹೋದರೂ ಯಾರೊಬ್ಬರಿಗೂ ನಿದ್ರೆ ಇಲ್ಲ. ಮಹಾಪ್ರಭೂ.

ಎಲ್ಲರೂ ಕದ್ದು ತಮ್ಮ ಕಿವಿ ಕಣ್ಣುಗಳನ್ನು ಸಾವಂತ್ರಿಯ
ಮನೆಯ ಕಡೆಗೇ ನೆಟ್ಟಿದ್ದರು. ಮಾಹಾರಾಜ ಮತ್ತು
ಮಂತ್ರಿ ಒಬ್ಬಳೇ ಸೂಳೆಯ ಮನೆಯಲ್ಲಿದ್ದಾರೆಂಬುದೇ
ಭಯಂಕರ ಸುದ್ದಿಯಾಗಿತ್ತು
ಆದರೆ ಬಸವಣ್ಣನವರು ಹೊರಬಂದು ಕೂಡಲ
ಸಂಗಮಕ್ಕೆ ಹೊರಟೊಡನೆ ಎಲ್ಲರೂ ಅವರ
ಬೆನ್ನ ಹಿಂದಿನಿಂದ ಹೋಗೇಬಿಟ್ಟರು ಮಹಾಪ್ರಭು!

ಬಿಜ್ಜಳ : *(ಖೇದದಿಂದ)* ಬಸವಣ್ಣನ ಕೊನೆಯ ಆಸೆಯನ್ನೂ
ಈಡೇರಿಸಲಾಗಲಿಲ್ಲ, ನನಗೆ!
ಆಯ್ತು ನೀನು ಹೋಗಿ ಅಂಗರಕ್ಷಕರನ್ನು
ಕರೆದುಕೊಂಡು ಬಾ.

ಕೊತವಾಲ : ಆಗಲಿ ಪ್ರಭು *(ಹೋಗುವನು).*

ಬಿಜ್ಜಳ : ಇವತ್ತು ಶಿವರಾತ್ರಿ ಅಲ್ಲವೆ?

ದಾಮೋದರ : ಹೌದು ಮಹಾಪ್ರಭು.

ಬಿಜ್ಜಳ : ಕಲ್ಯಾಣವೆಲ್ಲಿ ಖಾಲಿ ಖಾಲಿ ಆದಂತಿದೆಯಲ್ಲಾ?

ದಾಮೋದರ : ಹೌದು ಪ್ರಭು.

ಬಿಜ್ಜಳ : *(ಬಂದು ಕೂತುಕೊಂಡು)* ಈ ಸರ ಕದ್ದವನು ನೀನು, ಅಂತಾಯ್ತು.

ದಾಮೋದರ : ಹೌದು ಪ್ರಭು.

ಬಿಜ್ಜಳ : ನೀನು ಹರಿಹರೇಶ್ವರರ ಮಗ;
ನೀನ್ಯಾವಾಗ ಜಂಗಮನಾದೆ?

ದಾಮೋದರ : ಸರದ ಕಳ್ಳತನಕ್ಕಾಗಿ ಇವತ್ತೇ ಜಂಗಮನ ವೇಷ
ಧರಿಸಿದ್ದೆ ಪ್ರಭು.

ಬಿಜ್ಜಳ : ಅರಮನೆಯಲ್ಲಿ ಕಳ್ಳತನ ಮಾಡಿದ್ದಕ್ಕೆ
ಶಿಕ್ಷೆ ಏನೆಂದು ನಿನಗೆ ಗೊತ್ತೊ?

ದಾಮೋದರ : ಸಿದ್ಧನಾಗೇ ಬಂದಿದ್ದೇನೆ.

ಬಿಜ್ಜಳ : ಜಂಗಮನ ವೇಷದಲ್ಲಿ ಕಳ್ಳತನ ಮಾಡಿದೆ.
ಅದು ತಪ್ಪು ಅಂತ ಯಾಕೆ, ಯಾವಾಗ ಅನ್ನಿಸ್ತು?

ದಾಮೋದರ : ಕಳ್ಳ ಚಿಕ್ಕಯ್ಯನನ್ನು ನೋಡಿದ ಮೇಲೆ ಅನ್ನಿಸ್ತು ಪ್ರಭು.
ದುರಾಸೆಯ ಪ್ರಚೋದನೆಗೆ ಒಳಗಾಗಿ ಜಂಗಮನ ವೇಷ
ಹಾಕಿದೆ. ಸರ ಕೊಟ್ಟು ತಂದೆ ತಾಯಿಗಳನ್ನು ಸಂತೋಷ
ಪಡಿಸುವೆನೆಂದೂ ನಂಬಿದ್ದೆ. ಇಷ್ಟೊಂದು ಬೆಲೆಬಾಳುವ
ಸರ, ನಾವು ಏಳೇಳು ಜನ್ಮ ದುಡಿದರೂ ಗಳಿಸಲಾರದ
ಒಂದು ಸರ ಇಷ್ಟು ಸುಲಭವಾಗಿ ಸಿಗುತ್ತಲ್ಲಾ ಎಂದು
ಆನಂದವಾಯ್ತು, ಕದ್ದೆ. ಆದರೆ ಇವೆಲ್ಲಕ್ಕಿಂತ ಪ್ರಬಲವಾದ ಕಾರಣ
ಬೇರೆ ಇನ್ನೊಂದು ಇದೆ ಎಂದು ನನ್ನ ಭಾವನೆ, ಪ್ರಭು
ತಾವು ಕ್ಷಮಿಸುವುದಾದರೆ ಹೇಳುತ್ತೇನೆ.

ಬಿಜ್ಜಳ : ಆಯ್ತು, ಕ್ಷಮಿಸಿದ್ದೇನೆ ಹೇಳು.

ದಾಮೋದರ : ಕಾಮಾಕ್ಷಿಯ ಮೇಲೆ ನನಗೂ ಆಸೆಯಾಗಿತ್ತು ಪ್ರಭು.

ಬಿಜ್ಜಳ : ಓಹೋ ನೀನೂ ನನ್ನ ಪ್ರತಿಸ್ಪರ್ಧಿಯೊ?

ದಾಮೋದರ : ಕ್ಷಮಿಸುತ್ತೇನೆಂದು ಹೇಳಿದಿರಿ.

ಬಿಜ್ಜಳ : ಮುಂದೆ ಹೇಳು.

ದಾಮೋದರ : ಕಳ್ಳತನವನ್ನೇನೋ ಮಾಡಿದೆ. ಆದರೆ ಕೊತವಾಲರ
ಕಣ್ಣಿಗೆ ಬಿದ್ದು ಓಡಿಹೋಗಿ ಕಾಶವ್ವನ ಮನೆಯಲ್ಲಿ ಅಡಗಿದೆ.

ಬಿಜ್ಜಳ : ನಿಮ್ಮ ಮನೆಗ್ಯಾಕೆ ಹೋಗಲಿಲ್ಲ?

ದಾಮೋದರ : ತಮ್ಮ ಕೊತವಾಲರು ನನ್ನ ಮುಖ ಗುರುತಿಸಬಹುದೆಂಬ
ಭಯದಿಂದಾಗಿ ಹರಳಯ್ಯನ ಕೇರಿಗೆ ಓಡಿದೆ.
ಅದು ವಕ್ರದಾರಿಗಳ, ಸಣ್ಣ ಬೀದಿಗಳ ಕೇರಿ ಪ್ರಭು.
ಬಚಾವಾಗುವುದು ಸುಲಭವೆಂದು ಅಲ್ಲಿ ಹೋಗಿ
ಕಾಶವ್ವನ ಮನೆಯಲ್ಲಿ ಅಡಗಿದೆ. ಸರವನ್ನು ಕಾಶವ್ವ,
ಮತ್ತವಳ ಗಂಡ ಕಸಿಯಬಹುದೆಂದುಕೊಂಡಿದ್ದೆ.
ಆದರೆ ಅಂತ್ಯಜಳಾದ ಕಾಶವ್ವ ಮತ್ತು ಅವಳ ಗಂಡನಿಗೆ
ಇದು ಸತ್ತ ಹೆಗ್ಗಣದಂತೆ ಕಂಡಿತು! ಅಷ್ಟೇ ಅಲ್ಲ,
ಅದನ್ನು ರಸ್ತೆಗೆ ಬಿಸಾಕಲಿದ್ದಾಗ ಆಘಾತವಾಯ್ತು ಪ್ರಭು!

“ಇದರ ಬೆಲೆ ಎಷ್ಟೆಂದು ಗೊತ್ತೆ?” ಅಂದೆ.
“ಎಷ್ಟಾದರೇನಪ್ಪ? ಕಾಯಕದಿಂದ ಬಾರದ್ದು ನಮಗೆ ಬೇಡ”
ಅಂದರಲ್ಲಿ ಪ್ರಭು! ಇಲ್ಲಿ ಬಂದರೆ ಇನ್ನೊಂದು ಆಘಾತ!
ಸಾಮಾನ್ಯವಾಗಿ ಚೆಲುವೆಯರು, ತರುಣಿಯರು ಉತ್ಕಟವಾಗಿ
ಬಯಸುವ ಸರ ಇದು. ಕಾಮಾಕ್ಷಿ ಕೂಡ ಇದು
ತನ್ನ ದೇಹದ ದಿನದ ಬೆಲೆಗಿಂತ ಹೆಚ್ಚನದೆಂದು
ನಿರಾಕರಿಸಿದಳಂತಲ್ಲ! ಇವರೆಲ್ಲಾ ನಮ್ಮೊಂದಿಗೇ
ಬದುಕುತ್ತಿರುವರಾ? ಆದರೆ ಎಷ್ಟೊಂದು ಭಿನ್ನವಾದ
ಲೋಕದಲ್ಲಿದ್ದಾರೆ! ಇಂಥದೊಂದು ದೇವಲೋಕವನ್ನು
ಬದುಕುತ್ತಿರುವವರು ನಮ್ಮಲ್ಲೇ ಇದ್ದಾರಲ್ಲ!
ನಾನೊಂದು ಪ್ರಶ್ನೆ ಕೇಳಲೆ ಪ್ರಭು?

ಬಿಜ್ಜಳ : ಕೇಳು.

ದಾಮೋದರ : ಇಂಥ ನಡೆಯನ್ನು ಉಚ್ಚ ಕುಲದವರಿಂದ
ತಾವು ನಿರೀಕ್ಷಿಸುತ್ತೀರಾ?

ಬಿಜ್ಜಳ : ಸರಿಯಾಗಿ ಹೇಳಿದೆ, ಸಾಧ್ಯವಿಲ್ಲ ಹುಡುಗಾ!

ದಾಮೋದರ : ಹಾಗಿದ್ದರೆ ಇವರಿಬ್ಬರಲ್ಲಿ ಯಾರು ಕುಲಜರು ಪ್ರಭು?

ಬಿಜ್ಜಳ : ಆದರೆ ಪದ್ಧತಿಯೊಂದಿದೆಯಲ್ಲ ಮಾರಾಯಾ.

ದಾಮೋದರ : ಮಹಾಮನೆಯ ನಡತೆ ನಮ್ಮ ನಿಮ್ಮಂಥವರಿಗೆ
ಜೀರ್ಣವಾಗದ್ದು ಪ್ರಭು. ಇಷ್ಟು ದಿವಸ ದೂರದಿಂದ
ಕೇಳಿ ತಿಳಿದಿದ್ದೆ, ಇವತ್ತು ಪ್ರತ್ಯಕ್ಷ ಕಂಡೆ!
ಮಾನವ ಜೀವನ ವ್ಯವಸ್ಥೆಯನ್ನು ಅಮೂಲಾಗ್ರ ಬದಲಾವಣೆಗೆ
ಒಳಪಡಿಸುವ ಪ್ರಯೋಗವೊಂದು ಕಲ್ಯಾಣದಲ್ಲಿ ನಡೆಯುತ್ತಿದೆ
- ಅಂತ ಸರದ ನೆಪದಲ್ಲಾದರೂ
ನಮಗೆ ತಿಳಿಯಲಿಲ್ಲವಲ್ಲ ಪ್ರಭು!
ವ್ಯವಸ್ಥೆಗಾಗಿ ನೀವಿಷ್ಟು ಹೆಣಗಿದರೂ ನಿಮ್ಮ ವ್ಯವಸ್ಥೆಗೇ
ಒಂದು ಕಟ್ಟುನಿಟ್ಟಿಲ್ಲ. ಅದರ ಮೇಲೆ ತಮಗೇ ನಿಯಂತ್ರಣವಿಲ್ಲ!
ಮಹಾಮನೆಗೆ ಅದು ಇದೆ!
ಆದ್ದರಿಂದಲೇ ಸಾವಂತ್ರಿ, ಚಿಕ್ಕಯ್ಯನಂಥವರ ಕತೆಗಳಿಗೆ ಅರ್ಥ
ಬಂತು. ಅರಮನೆಗೆ ಸೂಳೆಯಾದವಳು ಮಹಾಮನೆಯಲ್ಲಿ ಶಿವಶರಣೆ,
ಬಸವಣ್ಣನವರ ತಾಯಿಯಾಗುತ್ತಾಳೆಂದರೆ ಇದು
ಪವಾಡವಲ್ಲವೆ ಪ್ರಭು?

# ದೃಶ್ಯ ಆರು (4)

ಬಿಜ್ಜಳ : ಅರಮನೆಯಲ್ಲಿ ಕಳ್ಳತನ ಮಾಡಿದವನು ನಾನೇ ಅಂತ
ನೀನು ಒಪ್ಪಿಕೊಂಡಾಗ ನನಗೆ ಸಂತೋಷವಾಗಿತ್ತಯ್ಯ.
ಆದರೆ ಬರ್ತಾ ಬರ್ತಾ ನೀನು ಶರಣನಾಗಿ ಪರಿವರ್ತನೆ
ಹೊಂದುತ್ತ ಇದ್ದೀ ನೋಡು, ನನ್ನ ಸಂತೋಷ
ಮಾಯವಾಯ್ತು. ನೀನು ಶರಣನಾಗಿ ಎಷ್ಟು ದಿನ ಆಯ್ತು?

ದಾಮೋದರ : ನಾನಿನ್ನೂ ದೀಕ್ಷೆ ತಗೊಂಡಿಲ್ಲ ಪ್ರಭು.

ಬಿಜ್ಜಳ : ಈಗ ಹೇಳು: ಅರಮನೆಯಲ್ಲಿ ಕಳ್ಳತನ ಮಾಡೋದಕ್ಕೆ
ನಿನಗೆ ಪ್ರಚೋದನೆ ಕೊಟ್ಟವರು, ಅರಮನೆಯ ಬಳಕೆ
ಇರುವ ಹರಿಹರೇಶ್ವರರೇ ಎನ್ನುವುದರಲ್ಲಿ ಸಂದೇಹವಿಲ್ಲ,
ಅವರು ಮಾಡಿದ್ದು ವಿಶ್ವಾಸದ್ರೋಹ ಅಲ್ಲವೇನಯ್ಯಾ?

ದಾಮೋದರ : ತಾವು ಹೇಳುವ ಪ್ರತಿಯೊಂದು ಚಾಡಿಗೆ ಮಹಾರಾಜರ ಕಿವಿ
ಹೂವಿನಂತೆ ಅರಳುವುದಾದರೆ, ಚಾಡಿಯ ನಂಬಿ
ಮಹಾರಾಜರು ಇಷ್ಟೊಂದು ಕೊಲೆ ಮಾಡಬಹುದಾದರೆ
ನಿಮ್ಮ ನೆರಳುಗಳಾದ ಅವರ್ಯಾಕೆ ನಂಬಿಕೆಯ
ಪ್ರಯೋಜನ ಪಡೆಯಬಾರದು ಪ್ರಭು?

ಬಿಜ್ಜಳ : ಬಸವಣ್ಣ ಮಾಡಿದ್ದೂ ಅದನ್ನೇ. ಶರಣರ ಕಣ್ಣಲ್ಲಿ
ನನ್ನನ್ನ ರಾಕ್ಷಸನನ್ನಾಗಿ ಮಾಡಿ ನನ್ನಿಂದ ಎಲ್ಲ ಎಲ್ಲವನ್ನು
ಕಸಿದುಕೊಂಡ, ನನ್ನ ಪ್ರೀತಿ ಮತ್ತು ಜನಪ್ರಿಯತೆಯನ್ನ ಕೂಡ.

ದಾಮೋದರ : ಹಾಗೆಂದು ನಂಬುವುದು ನಿಮಗೆ ಇಷ್ಟವಾದುದರಿಂದ
ಹಾಗೆ ಹೇಳುತ್ತಿದ್ದೀರಿ - ನನ್ನಿಂದ ಸಮರ್ಥನೆ ಬಯಸಿ.
ದಲಿತರು ಮತ್ತು ಬಡವರಿಗೆ ಸೌಲಭ್ಯಗಳನ್ನ ಕಲ್ಪಸಿದಾಗ -
ಮುಖ್ಯವಾಗಿ ಅವರ ಆತ್ಮಗೌರವವನ್ನು ಮನ್ನಿಸಿದಾಗ
ಅದೇ ಜನಗಳಲ್ಲಿ ತಾವೂ ಜನಪ್ರಿಯರಾಗಿದ್ದಿರಿ ಪ್ರಭು.
ಹಾಗೇ ಮುಂದುವರಿದಿದ್ದರೆ ಕಲ್ಯಾಣವನ್ನ ಅಮರಾವತಿಯನ್ನಾಗಿ
ಮಾಡುವುದೂ ಸಾಧ್ಯವಿತ್ತು. ಆದರೆ ಚಾಡಿಗಳನ್ನ
ನಂಬಿ ಕಲ್ಯಾಣವನ್ನ ನರಕ ಮಾಡಿದಿರಿ.
ಹಿಂದೆ ಪ್ರಜೆಗಳ ಮಧ್ಯೆ, ಬಸವಣ್ಣನ ಪಕ್ಕದಲ್ಲಿ ನಿಂತಾಗಿನ
ಬಿಜ್ಜಳ ಉಜ್ವಲ ಕನಸುಗಳಿಂದ ಫಳಫಳ ಹೊಳೆವ
ತರುಣನಾಗಿದ್ದ. ಈಗ ಇಂದ್ರನ ಮಾದರಿಯ ಕಿರೀಟ,

ಜಗಮಗ ಆಭರಣ ಧರಿಸಿ ಚಾಡಿಕೋರರ ಕಣ್ಣಲ್ಲಿ
ನೋಡಿಕೊಳ್ಳುತ್ತಿದ್ದೀರಿ. ಈಗ ಹ್ಯಾಗೆ ಕಾಣುವಿರಿ ಗೊತ್ತ ಪ್ರಭು?

ಬಿಜ್ಜಳ : *(ಅಸಮಾಧಾನದಿಂದ)* ಹ್ಯಾಗೆ?

ದಾಮೋದರ : ತರುಣ ಬಿಜ್ಜಳನ ಭೂತದಂತೆ!

ಬಿಜ್ಜಳ : *(ರೇಗಿ)* ಎಲಾ ಅಯೋಗ್ಯ: ಕಲ್ಯಾಣ ನರಕವಾಗಿದ್ದರೆ
ನನ್ನೆದುರಿಗೆ ನನ್ನನ್ನೇ ಏಕವಚನದಲ್ಲಿ ಹೆಸರಿಸಲು ನಿನಗೆ ಧೈರ್ಯ

ಬರುತ್ತಿತ್ತೆ? ಮಹಾರಾಜರೆದುರಿಗೆ ನಿಂತು ಕುಲಜರ
ಕುನ್ನಿಯೊಂದು ಹೀಗೆ ಮಾತಾಡಲಾಗುತ್ತಿತ್ತೆ?
*(ಬಿಜ್ಜಳ ಕೋಪದ ಆವೇಶದಲ್ಲಿ ತಾನೇನು ಮಾಡುತ್ತಿರುವೆನೆಂಬ ಅರಿವಿಲ್ಲದೆ ಸೊಂಟದ ಚೂರಿ ಹಿರಿದು ದಾಮೋದರನನ್ನು ಇರಿಯುವನು. ದಾಮೋದರ ಚೀರಿ ಒದ್ದಾಡಿ ಸಾಯುವನು. ದಾಮೋದರನ ಭಯಂಕರ ಸಾವಿನಿಂದ ಕಂಗಾಲಾದ ಬಿಜ್ಜಳ ಹೆಣವನ್ನು ಪೀಠದ ಮರೆಯಲ್ಲಿಡಲು ಯತ್ನಿಸುತ್ತಾನೆ. ಅಷ್ಟರಲ್ಲಿ ಹೊರಗಡೆ ಹುಚ್ಚಿ ಮತ್ತು ದ್ವಾರಪಾಲಕರ ಮಾತು ಕೇಳಿ ಇನ್ನಷ್ಟು ಹತಾಶನಾಗುವನು.)*

ದ್ವಾರಪಾಲಕ ೧ : ಅಲ್ಲಿ ಯಾರಿದ್ದೀರಿ? ಯಾರು ಈ ಹುಚ್ಚಿಯನ್ನ ಒಳಗೆ ಬಿಟ್ಟವರು?

ಹುಚ್ಚಿ : ಯಾರ್ಯಾಕಯ್ಯಾ ಬಿಡಬೇಕು? ನಾನೇ ಒಳಗೆ ಬಂದೆ.
ನಾನು ರಾಜನನ್ನ ನೋಡಬೇಕು.

ದ್ವಾರಪಾಲಕ ೧ : ಈಗವರು ಯಾರನ್ನೂ ನೋಡುವದಿಲ್ಲಮ್ಮ.

ಹುಚ್ಚಿ : ನೀನು ಹೋಗಿ ಹೇಳಪ್ಪ ಅವನಿಗೆ.
ಒಳಗಡೆ ಯಾರೋ ಕಿರಿಚಿದ್ದು ಕೇಳಿಸಿತು.
ನಿನಗೆ ಕೇಳಿಸಲಿಲ್ಲವೆ?

ದ್ವಾರಪಾಲಕ ೧ : ನೋಡಮ್ಮಾ ನೀನು ಇಷ್ಟರ ಮಟ್ಟಿಗೆ ಒಳಗೆ ಬಂದದ್ದೇ
ಹೆಚ್ಚು. ನಿನ್ನ ನೋಡಿದರೆ ಅಯ್ಯೋ ಅನ್ನಿಸ್ತದೆ. ನಾನೇ
ನಿನ್ನನ್ನ ಹೊರಗೆ ಬಿಟ್ಟು ಬರ್ತೀನಿ ಬಾ.

ಹುಚ್ಚಿ : ಹೊರಗೆ ಹೋಗಲಿಕ್ಕೆ ಬಂದವಳಲ್ಲ ನಾನು.
ನೀನೂ ತೊಂದರೆ ತಗೋಬೇಡ. ಹೋಗಿ ರಾಜನಿಗೆ
ಹೇಳು: ನಾನವನನ್ನ ಭೇಟಿಯಾಗಬೇಕು.

ದ್ವಾರಪಾಲಕ ೧ : ಮಹಾರಾಜರನ್ನ ನೋಡೋದು ಸಾಧ್ಯವಿಲ್ಲವಮ್ಮ,
ಅವರು ಯಾರನ್ನೂ ನೋಡೋದಿಲ್ಲ.

ಹುಚ್ಚಿ : ಆತ ನೋಡೋದು ಬ್ಯಾಡಪ್ಪ. ನಾನೇ ಅವನನ್ನ ನೋಡಿ
ನೀನು ಯಾರು ಅಂತ ಹೇಳ್ತೀನಿ.

*(ತಳ್ಳಿ ಮುಂದೆ ನುಗ್ಗುವಳು. ಗೊಂದಲಗಳಿಂದ ಹತಾಶನಾಗಿ ಬಿಜ್ಜಳ ಬಾಗಿಲಿಕ್ಕಿಕೊಳ್ಳಲು ಹೋದಾಗ ಇಬ್ಬರೂ ದ್ವಾರಪಾಲಕರು ಆಯುಧ ಹಿರಿದು ನಿಂತಿದ್ದಾರೆ. ಅವರ ಮಧ್ಯೆ ಹುಚ್ಚಿ ನಿಂತಿದ್ದಾಳೆ. ಬಿಜ್ಜಳ ಗಾಬರಿಯಲ್ಲಿ ಹಿಂದೆ ಸರಿದು ಹುಚ್ಚಿಯ ಮುಂದೆ ಮಂಡಿಯೂರಿ ಕೂರುವನು.)*

ಬಿಜ್ಜಳ : ನಾನು ಒಂದಕ್ಕೊಂದು ಹೊಂದಾಣಿಕೆ ಇಲ್ಲದ ಎರಡು
ಅರ್ಧಗಳಿಂದ ಕೂಡಿದ್ದೇನೆ ತಾಯೀ!
ಮೊದಲನೇ ಅರ್ಧದಲ್ಲಿ ಬಸವಣ್ಣ ಮುಗ್ಧ
ಸಂಗಯ್ಯನನ್ನು ಸೃಷ್ಟಿಸಿದ. ನಾನು ಅವನ ಮುಗ್ಧಮುಖ
ಮತ್ತು ವಚನಗಳಿಂದ ತುಂಬಾ ಪ್ರಭಾವಿತನಾದೆ.
ಅವನೆದುರಿಗೆ ನಾನೊಬ್ಬ ಅಲ್ಪನೆನ್ನಿಸಿ ಪಶ್ಚಾತ್ತಾಪ
ಪಡುವಂತೆ ಮಾಡಿದ ಸಂಗಯ್ಯ. ಆದರೆ
ಯಾವ ರಾಜ ತಾನೇ ಸದಾಕಾಲ ಪಶ್ಚಾತ್ತಾಪ ಪಡಲು
ಇಷ್ಟಪಡುತ್ತಾನೆ?

ಇನ್ನರ್ಧದಲ್ಲಿ ಕೊಂಡೆಯರು ನನ್ನಲ್ಲಿ ಇಂದ್ರನನ್ನ
ಸೃಷ್ಟಿಸಿ "ಇಕೋ ರಾಕ್ಷಸ - ಸಂಹಾರ ಮಾಡಿ ಪ್ರಭು"
ಎಂದು ಒಬ್ಬ ಮುಗ್ಧನನ್ನು ಎದುರು ಹಿಡಿದರು. ಸಂಹರಿಸಿ
ನೋಡಿದರೆ ಮುಗ್ಧ ಸಂಗಯ್ಯನನ್ನು ಕೊಂದು ಹಾಕಿದ್ದೆ!
ಹೀಗೆ ನನ್ನರ್ಧ ಕಳಚಿ ಬಿದ್ದು ದೊಡ್ಡ ಗಾಯವಾಗಿ
ಉಳಿದರ್ಧದಿಂದ ರಕ್ತ ಸೋರುತ್ತಿದೆ ತಾಯೀ!
ಒಮ್ಮೆ ಸಂಗಯ್ಯನನ್ನು ಕೊಂದಾದ ಮೇಲೆ
ನನಗೆ ಎದುರಾಗುವವರು ಯಾರೂ ಉಳಿಯಲಿಲ್ಲ.
ಈಗ ನೋಡಿದರೆ ನನ್ನಲ್ಲಿ ಇಂದ್ರನನ್ನು ಸೃಷ್ಟಿಸಿದವರು
ಹಗಲು ಹೊತ್ತಿನಲ್ಲೇ ನನ್ನ ಮುಖ ನೋಡಲು
ಹೆದರುತ್ತಾರೆ. ನನ್ನನ್ನು ಶಿಕ್ಷಿಸಲು ದೇವರೂ ಹೆದರುತ್ತಾನೆ!
ಯಾರೆದುರು ಹೇಳಲಿ?
ಚಾಲುಕ್ಯರಿಗೆ ದ್ರೋಹ ಮಾಡಿ ಮಹಾರಾಜನಾದೆ.
ಬಸವಣ್ಣನಿಗೆ ದ್ರೋಹ ಮಾಡಿ
ಸಂಗಯ್ಯನ ಬಲಿಕೊಟ್ಟೆ.
ಒಮ್ಮೆ ಸತ್ತವನು ಮತ್ತೆ ಮತ್ತೆ ಎದ್ದು ಬಂದು
ಹೋದಲ್ಲಿ ಬಂದಲ್ಲಿ ತನ್ನ ಮುಗ್ಧ ನೇತ್ರಗಳಿಂದ
ನನ್ನನ್ನ ಇಟ್ಟಾಡಿಸಿ ಇರಿಯುತ್ತಿದ್ದಾನೆ.
ನಾನು ಕೊಲೆಗಡುಕ ತಾಯೀ;
ನನಗೆ ಶಿಕ್ಷೆ ಕೊಡು.

*(ಹುಚ್ಚಿ ತನ್ನ ಅಕ್ಕಪಕ್ಕದ ಇಬ್ಬರೂ ದ್ವಾರಪಾಲಕರನ್ನು ಮುಂದೆ ತಳ್ಳಿ "ನೋಡಿಕೊಳ್ಳಿ" ಎಂದು ಹೇಳಿ ಹೋಗುವಳು. ದ್ವಾರಪಾಲಕರು ಹೋಗಿ ಮಂಡಿಯೂರಿ ಕೂತಿದ್ದವನನ್ನು ತೋಳು ಹಿಡಿದು ಎಬ್ಬಿಸಿ, ಪೀಠದಲ್ಲಿ ಕೂರಿಸುವರು. ಇಬ್ಬರೂ ಅಲ್ಲಿಯ ಬಾಗಿಲು ಕಿಡಕಿಗಳನ್ನು ಮುಚ್ಚುವರು. ಬಿಜ್ಜಳ ಗಾಬರಿಯಾಗುವನು.)*

ಬಿಜ್ಜಳ : ಯಾರು ನೀವು?

ದ್ವಾರಪಾಲಕ ೧ : ಇವನು ಜಗದೇವ ನಾನು ಮಲ್ಲಿಬೊಮ್ಮಣ್ಣ.
ಚಾಲುಕ್ಯರ ಕಾಲದಿಂದ ನಿನ್ನ ಹಳೇ ವೈರಿಗಳು.
*(ಬಿಜ್ಜಳ ಗಾಬರಿಯಾಗಿ ಎದ್ದು ನಿಂತು "ಯಾರಲ್ಲಿ?" ಎಂದು ಕೂಗುವನು. ಜಗದೇವ ಬೊಮ್ಮಣ್ಣ ಇಬ್ಬರೂ ಶಾಂತವಾಗಿದ್ದಾರೆ.)*

ಮಲ್ಲಿಬೊಮಣ್ಣ : ಈಗ ಯಾರೂ ಬರಲಾರರು, ಯಾಕಂದರೆ ಯಾರೂ ಇಲ್ಲ.
ಕೊತವಾಲನೂ ಹಿಂದಿರುಗಿ ಬಾರದಂತೆ ವ್ಯವಸ್ಥೆ ಮಾಡಿದ್ದೇವೆ.

ಬಿಜ್ಜಳ : ಯಾರು ನಿಮ್ಮನ್ನ ನಿಯಮಿಸಿಕೊಂಡವರು?

ಜಗದೇವ : ಯಾರೂ ಇಲ್ಲ ಮಾರಾಯಾ, ನನ್ನನ್ನು ಬೊಮ್ಮಣ್ಣ
ನಿಯಮಿಸಿಕೊಂಡ. ನಾನು ಬೊಮ್ಮಣ್ಣನನ್ನು
ನಿಯಮಿಸಿಕೊಂಡೆ. ನಾವಿಬ್ಬರೂ ಯಾರೆಂದು
ಕಲ್ಯಾಣದಲ್ಲಿ ಯಾರಿಗೂ ಗೊತ್ತಿಲ್ಲ.. ನಿನಗೇ ಗೊತ್ತಾಗಲಿಲ್ಲ!
ನಗರ ದೇವತೆಗಷ್ಟೇ - ಅದೂ ಇವತ್ತೇ ಗೊತ್ತಾಯಿತಷ್ಟೆ.

ಬಿಜ್ಜಳ : ಏನು ಬೇಕು ನಿಮಗೆ?

ಜಗದೇವ : ನಿನ್ನ ಪ್ರಾಣ! ಒಂದು ತಿಂಗಳು ಕಾದೆವು ಮಾರಾಯಾ,
ಈ ಸಂದರ್ಭಕ್ಕಾಗಿ.

ಬಿಜ್ಜಳ : ಒಂದು ತಿಂಗಳು?

ಮಲ್ಲಿಬೊಮ್ಮಣ್ಣ : ಇದ್ದನಲ್ಲ ಮಾರಾಯಾ ಆ ಬಸವಣ್ಣ! ಅವನ ಸ್ನೇಹದ
ಶ್ರೀರಕ್ಷೆ ನಿನ್ನನ್ನ ಇಲ್ಲೀತನಕ ಕಾಪಾಡಿತು. ಬಸವಣ್ಣ
ಹೋದ ನೋಡು: ಶ್ರೀರಕ್ಷೆ ಕಳಚಿ ನಮ್ಮ ಆಯುಧಗಳಿಗೆ
ಕಳೆ ಬಂತು! ನಮಗೇನೂ ಅವಸರವಿಲ್ಲ.
ನಿನ್ನವೇನಾದರೂ ಬಾಕಿ ಇದ್ದರೆ ತೀರಿಸಿಕೊ.

ಬಿಜ್ಜಳ : ಬಾಗಿಲುಗಳನ್ನೆಲ್ಲ ಯಾಕೆ ಮುಚ್ಚಿದಿರಿ?

ಜಗದೇವ : ಯಾಕೆಂದರೆ ಹೊರಗಿನವರಿಗೆ - ಇಲ್ಲಿಯ ಗಲಾಟೆ
ಕೇಳಿಸದಿರಲಿ ಅಂತ. ನೋಡು ತಮ್ಮಾ ಬಿಜ್ಜಳ,

ಸಾಯುವುದಕ್ಕೆ ನಿನಗೆ ಎರಡು ಆಯ್ಕೆಗಳಿವೆ: ಒಂದು
ವೈಭವದ ಹಾದಿ. ನೀನು ನೇರ ಸ್ವರ್ಗಕ್ಕೇ ಹೋಗಬೇಕು.
ಭೂಲೋಕದ ಇತಿಹಾಸದಲ್ಲೂ ನಿನು ಧೀರೋದಾತ್ತನಾಯಕ
ನಾಗಿರಬೇಕು. ಕವಿಗಳು ನಿನ್ನ ಬಗ್ಗೆ "ತಿರುಗಿ ಬರಲಾರೆಯಾ।
ಬಿಜ್ಜಳರಾಯಾ॥ ಅಂತ ಹಾಡು ಬರೆದಿರಬೇಕು. ಆ ಕಾಮಾಕ್ಷಿ
ಯಾರೊಂದಿಗೆ ಇದ್ದರೂ "ಬಿಜ್ಜಳ ರಾಯನ ಎದುರಿಗೆ
ಇವರೆಲ್ಲ ಕಸ!" ಅಂತ ಮೂಗು ಮುರಿದಿರಬೇಕು.
ಈ ದಾರಿ ಸಾಯಲಿಕ್ಕೂ ಸುಲಭ. ಎಲ್ಲಕ್ಕಿಂತ ಹೆಚ್ಚಾಗಿ ನೋವಿಲ್ಲ!
ಅವಧಿ - ಒಂದೇ ನಿಮಿಷ! ಕವಿಯಾಗಿದ್ದನೋ ಎಂಬಂತೆ ನಿನಗೋಸ್ಕರ
ಈ ದಾರಿಯನ್ನು ಹುಡುಕಿದ್ದಾನೆ - ಮಲ್ಲಿಬೊಮ್ಮಣ್ಣ.

ಮಲ್ಲಿಬೊಮ್ಮಣ್ಣ : ಇನ್ನೊಂದು: ಈ ಕೋಣೆಯ ತುಂಬ ರಕ್ತ ಚೆಲ್ಲಾಡಿ

ಬೆಳಿಗ್ಗೆ ನೋಡ ಬಂದ ಮಕ್ಕಳು, ಹೆಂಗಸರು
ನಾಲಗೆ ಹಿರಿದು ಬಿದ್ದ ನಿನ್ನ ಶವ ನೊಡಿ, ಹೆದರಿ ಕಿಟಾರನೆ
ಕಿರಿಚಿರಬೇಕು. ಗರ್ಭಿಣಿಯರು ವಾಂತಿ ಮಾಡಿಕೊಂಡು
ಹಲಿವುಳ್ದಿರಬೇಕು. ಕಾಮಾಕ್ಷಿಯಂತೂ "ಅಯ್ಯೋ! ನಾನು ಇಂಥ ಅಗ್ಗದ
ನಾಯೀ ಜೊತೆಗಿದೇನೆ?" ಅಂತ ಅಂದುಕೊಳ್ಳೋದಕ್ಕೂ
ನಾಚಿಕೆ ಪಟ್ಟಿರಬೇಕು!
ಇದು ಜಗದೇವ ನಿನಗಾಗಿ ಕಂಡುಹಿಡಿದ ದಾರಿ.
ಆಯ್ಕೆ ನಿನ್ನದು.

ಜಗದೇವ : ನಮಗೀಗ ನಿನ್ನ ಬಗ್ಗೆ ಸೇಡು ಉಳಿದಿಲ್ಲ.
ಯಾಕಂತೀಯೊ? ಬಸವಣ್ಣನಿಗೂ ದ್ರೋಹ ಮಾಡಿದವನು
ನೀನು ಮನುಷ್ಯನಲ್ಲ. ನಿನ್ನನ್ನ ಕೊಂದರೆ ಯಾವದೇ
ಪುರುಷಾರ್ಥ ಈಡೇರುವುದಿಲ್ಲ. ಬೇಗ ನಿನ್ನ
ಆಯ್ಕೆ ಮಾಡಿಕೊ. ಇದೊಂದು ಸಣ್ಣ ವಿಧಿ. ಮುಗಿಸಿಬಿಡುತ್ತೇವೆ.

ಬಿಜ್ಜಳ : ಕೆಲವು ಪ್ರಶ್ನೆಗಳಿವೆ.

ಜಗದೇವ : ಅವನ್ನು ನರಕದ ದೇವತೆಗಳಿಗೇ ಕೇಳಿಕೊ.
ಅವರ ಬಳಿ ಇರುವಂಥ ಅಲೌಕಿಕ ಉತ್ತರಗಳು ಮಾನವರ
ಬಳಿ ಸಿಕ್ಕುವುದಿಲ್ಲ!

ಬಿಜ್ಜಳ : *(ಹತಾಶನಾಗಿ)* ಅಯ್ಯೊ ಬಸವಾ! ಎಲ್ಲಾ ಪ್ರಶ್ನೆಗಳ ಉತ್ತರಗಳನ್ನು
ಬಲ್ಲ ಮಿತ್ರನೊಬ್ಬನಿದ್ದ.
ಅವನ ಒಂದು ಕೊನೆಯ ಆಸೆಯನ್ನೇ

ಈಡೇರಿಸಲಾಗದವನಿಗೆ ಇನ್ನೇನು ಬಾಕಿ ಇದ್ದೀತ್ರಪ್ಪ?
ನೀವೇ ನೋಡಿದಿರಲ್ಲ ಹೋಗುವಾಗ ನನಗೊಂದು
ಮಾತು ಹೇಳಲಿಲ್ಲ ಬಸವಣ್ಣ! ಕಣ್ಣೆತ್ತಿ ನೋಡಲಿಲ್ಲ!
ಕಲ್ಯಾಣದಲ್ಲಿ ಕತ್ತಲೆಯನ್ನ ಬಿಟ್ಟು ಹೋದ!
ಶಿವರಾತ್ರಿಯ ಕತ್ತಲೆ, ಎಲ್ಲಾ ಮೌನಗಳ, ಎಲ್ಲಾ
ಅಜ್ಞಾತಗಳ, ಎಲ್ಲ ಎಲ್ಲದರ  ಇಲ್ಲದಿರುವಿಕೆಯ ಮೊತ್ತವಾದ
ಕತ್ತಲೆಯನ್ನು ಬಿಟ್ಟು ಹೋದ!

*(ಸಾವು ಅನಿವಾರ್ಯವೆನ್ನಿಸಿ ಎದುರಿಸಲು ಸಿದ್ಧನಾಗುವನು.)*

ಬಸವಾ ಬಸವಣ್ಣಾ - ಇಂಥ ಕತ್ತಲೆಯಲ್ಲಿ
ನನ್ನೊಬ್ಬನನ್ನೇ ಬಿಟ್ಟು ಹೋದೆಯಲ್ಲೊ ಬಸವಾ!

ಮುಟ್ಟಲಾಗದ ನನ್ನ ಎದೆಯ ಮೂಲೆಗಳನ್ನ
ಮುಟ್ಟಿದವ, ತಟ್ಟಿದವ ನೀನೊಬ್ಬನೇ ಬಸವಣ್ಣಾ!
ನಿನ್ನ ವಚನಗಳಿಗೆ ಆ ಶಕ್ತಿಯಿತ್ತು, ನಿಜ.
ಆದರೆ ಚಾಡಿಗೆ ನಿನ್ನ ಮಾತಿಗಿಂತ ಹೆಚ್ಚಿನ ಶಕ್ತಿ
ವ್ಯಾಪ್ತಿ, ವೇಗವಿತ್ತು ಬಸವಣ್ಣಾ!
ಚಾಡಿಗಳ ಸಡಗರದಲ್ಲಿ ತಲೆ ಎತ್ತಿ ನಿನ್ನನ್ನ ಕಾಣದೆ,
ಕಾಲ ನೆಲ ಕಾಣದೆಯೆ ಎಡವಿದೆನು ಬಸವಣ್ಣಾ!

ಸಂತೆ ಸೇರಿವೆ ನೆನಪುಗಳು!
ಒಂದರ ಮುಖದಲ್ಲೂ ನಗೆಯಿಲ್ಲ. ಎಲ್ಲವೂ ನನ್ನ
ಹಂಕಾರವ ಹೂಂಕರಿಸಿ ಹಿಂಸಿಸುತ್ತಿವೆ ಮಾರಾಯಾ!

ಅಗೊ ಅಗೋ, ಸಾವಿನ ಮಂಜು ಮುಸುಕಿದ ಮಬ್ಬಿನಲ್ಲಿ
ನೆನಪಿನ ಒಂದು ಮುಖವೂ ಈಗ ಕಾಣುತ್ತಿಲ್ಲ!
ಎಲ್ಲವೂ ಅಸ್ಪಷ್ಟ ಆಕಾರವಾಗಿ ಸರಿಯುತ್ತ ಸರಿಯುತ್ತ
ಮಾಯವಾಗುತ್ತಿವೆ. ಯಾವ ಮನುಷ್ಯರ ನೆನಪೂ
ಕಾಣುತ್ತಿಲ್ಲ. ನಿನ್ನದೊಂದೇ ಮುಖ,
ಕಟ್ಟಬೇಕೆಂಬ ಕೈಲಾಸದಲ್ಲಿ ವಿಹರಿಸಿ ಬಂದ
ಉಲ್ಲಾಸಭರಿತ ಕನಸಿನ ಮುಖ - ನನಗೆ ಹಿತಕರ!!
ವಂದನೆಗಳೊಂದಿಗೆ ಕಂಬನಿಯಲದ್ದುವೆನು
ನಿನ್ನ ಮುಖದ ಪವಿತ್ರ ನೆನಪನ್ನು!
ಮತ್ತೆ ನೋಯಿಸಲಾರೆ ನಿನ್ನ.
ವ್ಯವಸ್ಥೆ ಹೃದಯವಿಲ್ಲ, ಸಂಗಯ್ಯನಿಗೆ ಕರುಣೆಯಿಲ್ಲ ಬಸವಣ್ಣಾ.
ಎರಡು ತಿರಸ್ಕಾರಗಳ ನಡುವೆ ನಿಂತಿದ್ದೇನೆ.

ನನಗೂ ಮೈತುಂಬ ಗಾಯಗಳಾಗಿವೆ ಮಾರಾಯಾ,
ಎಲ್ಲಾ ಗಾಯಗಳಿಂದ ಸೋರುತ್ತಿದೆ ಸೊಕ್ಕು!
ಹೇಳಿ ಕೇಳಿ ಭವಿ ನಾನು, ಬಸವಾ,
ಕ್ಷಮಿಸು ನನ್ನ!

ಜಗದೇವ ಮಲ್ಲಿಬೊಮ್ಮಣ್ಣಾ,
ಸಿದ್ಧನಿದ್ದೇನೆ ಬನ್ನಿರಯ್ಯಾ.
*(ಎಂದು ಅವರನ್ನು ತಬ್ಬಿಕೊಳ್ಳುವಂತೆ ಕೈ ಚಾಚಿ ನಿಲ್ಲುವನು. ಅವರೂ ತಮ್ಮ ಒಂದೊಂದು ಕೈಯಿಂದ ತಬ್ಬಿ ಇನ್ನೊಂದು ಕೈಯಿಂದ ಇರಿಯುವರು. ಬಿಜ್ಜಳ ಕುಸಿಯುತ್ತಿದ್ದಂತೆ ಕತ್ತಲೆ ಆವರಿಸುವುದು.)*

# ಹಿನ್ನುಡಿ

ಚಂದ್ರಶೇಖರ ಕಂಬಾರರು "ಚಕೋರಿ" ಎಂಬ ಕಥಾನಕ ಕವನ, "ಶಿಖರಸೂರ್ಯ"ವೆಂಬ ಅಲೆಗರಿ ಮಾದರಿಯ ಕಾದಂಬರಿ, "ಎಲ್ಲಿದೆ ಶಿವಾಪುರ?" ಎಂಬ ಮಹತ್ವದ ಕವನ ಸಂಕಲನದ ನಂತರ ಬಿಜ್ಜಳ ಮತ್ತು ಬಸವಣ್ಣನ ಜೀವನದ ಕೊನೆಯ ದಿನಗಳನ್ನು ನಿಮಿತ್ತವಾಗಿಟ್ಟುಕೊಂಡು ರಚಸಿದ ಈ ನಾಟಕವು ಹಲವಾರು ದೃಷ್ಟಿಗಳಿಂದ ಗಮನ ಸೆಳೆಯುತ್ತದೆ. ನಾನು ಇಲ್ಲಿ ಹೇಳಿದ ಕೃತಿಗಳ ವಿಚಾರ ಸರಣಿಯನ್ನನುಸರಿಸಿ ಈ ನಾಟಕವನ್ನು ಪ್ರವೇಶಿಸಿದರೆ ಇಲ್ಲಿ ಹಲವಾರು ಕುತೂಹಲಕರವಾದ ಅಂಶಗಳು ನಮ್ಮ ಗಮನಕ್ಕೆ ಬರುತ್ತವೆ. "ಚಕೋರಿ"ಯಲ್ಲಿ ಜಾನಪದ ಪರಿಕಲ್ಪನೆಯಲ್ಲಿಯ ಜಗತ್ತಿನ ಹುಟ್ಟು ತಾಮಸ ಮತ್ತು ಶುದ್ಧ ಪರಿಶುದ್ಧವಾದುದರ ಮಧ್ಯೆ ನಡೆಯುವ ಸಂಘರ್ಷ, ಈ ಸಂಘರ್ಷದ ದಾರಿಯಲ್ಲಿ ಎದುರಾಗುವ ವಿಚಾರಗಳು - ಇವುಗಳನ್ನು ಕುರಿತಂತೆ ನಡೆಯುವ ಚಿಂತನೆಯೊಂದು ಕೆಲಸ ಮಾಡಿದೆ. "ಶಿಖರ ಸೂರ್ಯ"ದಲ್ಲಿ ಇದೇ ಚಿಂತನೆಯ ಮುಂದುವರಿದ ಭಾಗವೆಂಬಂತೆ ಸ್ವಾರ್ಥಪೂರ್ಣ ಭೌತಿಕ ಜಗತ್ತು ಪರಿಶುದ್ಧವಾದ ಆಧ್ಯಾತ್ಮವನ್ನು ಎದುರಿಸಿ ಸೋಲುತ್ತದೆ. ಈ ಭೌತಿಕ ಜಗತ್ತಿನಲ್ಲಿ ಸ್ವಾರ್ಥ, ಕಪಟ, ಮೋಸ, ಲಂಪಟತನ ಇವುಗಳೆಲ್ಲ ಉದ್ದೇಶಿತ ಗುರಿಯನ್ನು ಸಾಧಿಸಲು ಒದಗಿಬರುವ ವಾಮ ಮಾರ್ಗಗಳಾಗಿ ಮೂಡಿವೆ. "ಎಲ್ಲಿದೆ ಶಿವಾಪುರ" ಕವನ ಸಂಕಲನದಲ್ಲಿ ಕೆಲವೊಂದು ಪದ್ಯಗಳು, ದೈವಿಕ ಸಾನಿಧ್ಯಗಳನ್ನು ದೈಹಿಕ ಮಟ್ಟದಲ್ಲೇ ಸಾಕ್ಷಾತ್ಕಾರಿಸಿಕೊಳ್ಳಲು ಪ್ರಯತ್ನಿಸುತ್ತವೆ. ಮುಖ್ಯವಾಗಿ ದೈಹಿಕ ನೆಲೆಯನ್ನು ಬಿಟ್ಟು ಇರುವ ಆತ್ಮದ ಕಲ್ಪನೆಯನ್ನು ಇಲ್ಲಿಯ ಕೆಲವು ಪದ್ಯಗಳು ಪರೋಕ್ಷವಾಗಿ ಪ್ರಶ್ನಿಸುತ್ತವೆ. ಇನ್ನು 'ವ್ಯವಸ್ಥೆ', 'ರಾಜಕೀಯ' ಮತ್ತು ಇವುಗಳ ವಿರುದ್ಧ ಏಳುವ ಬಂಡು'; ಹಾಗೆಯೇ 'ದೇಹ' ಮತ್ತು 'ಮನಸ್ಸಿ'ನ ಮಧ್ಯೆ ಉಂಟಾದ ವೈರುಧ್ಯ ಇವುಗಳು ನವ್ಯ ಸಾಹಿತ್ಯದ ಧೋರಣೆಗಳಲ್ಲಿಯ ಕೆಲವು ಮೂಲ ಅಂಶಗಳಾಗಿದ್ದವು. ಕಂಬಾರರಿಗೆ ಈ ಧೋರಣೆಗಳ ಹಿನ್ನೆಲೆಯೂ ಇರುವುದರಿಂದ ಅವುಗಳು ಹೇಗೆ ಅವರಲ್ಲಿ ವಿಕಸನಗೊಂಡವು ಎಂಬುದು ಕೂಡ ಈ ನಾಟಕವನ್ನು ಓದುವಾಗ ನಮ್ಮನ್ನು ಕೆಣಕುತ್ತವೆ. ವ್ಯವಸ್ಥೆ ಮತ್ತು ರಾಜಕೀಯ ಅವರ ಈ ಹಿಂದಿನ ಕೆಲವು ನಾಟಕಗಳಲ್ಲಿ ಅತಿಯಾದ ವ್ಯಂಗ್ಯಕ್ಕೆ ಒಳಗಾಗಿ ನಾಟಕದ ರಚನೆಯಲ್ಲಿಯ ಬಿಗಿ ಕಡಿಮೆಯಾಗಿದೆ. ಅಲ್ಲದೆ ಅಲ್ಲಿ ನಡೆಯುವ ಘಟನೆಗಳಿಗೆ ಕೌತುಕದ ಅಥವಾ ಮಂತ್ರ'ದ ಅಂಶ ಸೇರಿಕೊಂಡು ಅವು ಅವಾಸ್ತವದ ನೆಲೆಗಳಲ್ಲೂ ವಿಹರಿಸಿವೆ. 'ಡಿಂಗಡಾಂಗ' ಕತ್ತೆಯ ಅಧಿಕಾರಕ್ಕೆ ಬರುವುದು. ಗಣಪನು ಕೊಟ್ಟ ಮುತ್ತು ಒಂದು ಮಂತ್ರ ಶಕ್ತಿಯನ್ನು ಕೊಡುವುದು ಇತ್ಯಾದಿ ಅವರ ನಾಟಕದಲ್ಲಿ ಮೂಡಿಬಂದದ್ದು ಇಲ್ಲಿ ನೆನಪಾಗುತ್ತದೆ.

ಜಗತ್ತಿನ ಉಗಮ, ವ್ಯವಸ್ಥೆಯ ಹುಟ್ಟು, ಆ ಹುಟ್ಟಿನಲ್ಲೇ ಇರಬಹುದಾದ ದೋಷಗಳು ಮತ್ತು ಪದ್ಯದ ಮಾಂತ್ರಿಕತೆಯಿಂದಾಗಿ ಒದಗಿ ಬಂದ ಒಂದು ಅಪೂರ್ವ 'ಭೂಮಿ ಬಿಟ್ಟ ದೃಷ್ಟಕೋನ' ಇವುಗಳ ಒಟ್ಟು ಸಂಯೋಜನೆಗೆ ಕಂಬಾರರು ಒಂದು ರೂಪಕವನ್ನು ಹುಡುಕುತ್ತಲೇ ಇದ್ದಾರೆಂದು ಅವರ ಕೃತಿಗಳನ್ನು ಅಭ್ಯಸಿಸಿದವರಿಗೆ ವಿದಿತವೇ ಇದೆ. ಇದು ಅವಾಸ್ತವದಿಂದ ವಾಸ್ತವಕ್ಕಿಳಿದು ಹೆಚ್ಚು ಹುರಿಗೊಂಡು ಒಡಮೂಡುವ ಎಲ್ಲ ಲಕ್ಷಣಗಳೂ ಅವರ ಈ ನಿಕಟ ಪೂರ್ವ ಕೃತಿಗಳಲ್ಲಿ ಕಂಡುಬಂದಿದೆ.

ಬಸವಣ್ಣ ಮತ್ತು ಬಿಜ್ಜಳರನ್ನೊಳಗೊಂಡಂತೆ ಕನ್ನಡದಲ್ಲಿ ಅನೇಕ ನಾಟಕಗಳು ಈಗಾಗಲೇ ಬಂದಿವೆ. ಸಮಾನತೆಯ ಹಸಿವು ಹೆಚ್ಚಾದಂತೆ ಹನ್ನೆರಡನೆಯ ಶತಮಾನದ ವಚನಕಾರರು ಕನ್ನಡದ ಲೇಖಕರನ್ನು ಹೆಚ್ಚಾಗಿ ಆಕರ್ಷಿಸಿದರು. ಬಸವಣ್ಣ ಒಬ್ಬ ಧೀಮಂತ ನಾಯಕನಾಗಿ ಮತ್ತು ನಮ್ಮ ಕಾಲದ ಸಮಸ್ಯೆಗಳಿಗೆ ಉತ್ತರವಾಗಿ ಕಾಣತೊಡಗಿದ್ದು ನ್ಯಾಯಸಮ್ಮತವೆ. ಆದರೆ ಇಂಥ ಬಸವಣ್ಣನನ್ನು ಬಿಜ್ಜಳನಂಥ ದೊರೆ ಸಂಶಯದಿಂದ ನೋಡಲು ಕಾರಣವೇನು ಎಂಬ ಪ್ರಶ್ನೆಯು, ನಮ್ಮ ಇಂದಿನ ರಾಜಕೀಯವು ಶುದ್ಧವಾದುದನ್ನೆಲ್ಲ ಗುಮಾನಿಯಿಂದಲೇ ಕಾಣಲು ಕಾರಣವೇನು ಎಂಬ ಪ್ರಶ್ನೆಯಿಂದಲೇ ಪ್ರೇರಿತವಾಗಿದೆ. ಅಥವಾ ಒಳ್ಳೆಯದಾದುದೆಲ್ಲ ವಿಫಲತೆಯ ದಾರಿಯಲ್ಲೇ ಏಕೆ ಸಾಗುತ್ತಿದೆ ಎಂಬ ಹತಾಶ ಭಾವವೂ ಇದರಲ್ಲಡಗಿದೆ. ಈ ಮೊದಲು ಬಂದ ಹೆಚ್ಚಿನ ನಾಟಕಗಳು ಬಸವಣ್ಣನವರ ಸಮಾನತೆಯ ತತ್ವಗಳನ್ನು ಬಿಂಬಿಸಿ, ನಂತರ ಅದಕ್ಕಾಗಿ ಆ ಮಹಾನುಭಾವನು ತೆರಬೇಕಾದ ದಂಡವನ್ನು ಕುರಿತೇ ಯೋಚಿಸಿವೆ. ಕಂಬಾರರನ್ನು ಕಾಡುತ್ತಿರುವ ಸಮಸ್ಯೆಯು ಬಸವಣ್ಣನ ಸಮಸ್ಯೆಯಲ್ಲ. ಅವರನ್ನು ಕಾಡುತ್ತಿರುವುದು ಬಿಜ್ಜಳನ ದೃಷ್ಟಿಕೋನ. ಅಂದರೆ ವ್ಯವಸ್ಥೆಯ ದೃಷ್ಟಿಕೋನದಲ್ಲಿ ಸಮಾನತೆ ಮತ್ತು ಆಧ್ಯಾತ್ಮಕ್ಕೆ ಸ್ಥಾನವೇಕೆ ಸಿಕ್ಕುವುದಿಲ್ಲ ಎಂಬುದೇ ಅವರ ಸಂಕಟವಾಗಿದೆ. ಇದಕ್ಕೆ ರೂಪಕವಾಗಿ ಕಂಬಾರರಿಗೆ ಬಿಜ್ಜಳ ಮತ್ತು ಬಸವಣ್ಣನವರ ಮಧ್ಯದ ವೈಚಾರಿಕ ಸಂಘರ್ಷವು ಕಂಡಿದೆ. ವಿಚಿತ್ರವೆಂದರೆ ಈ ರೂಪಕವನ್ನು ಹುಡುಕುವ ಪ್ರಕ್ರಿಯೆಯಲ್ಲಿ ಅವರು ಜಾನಪದ ಅಂಶಗಳನ್ನೂ ಕೆಲಮಟ್ಟಿಗೆ ಮೈಗೂಡಿಸಿಕೊಂಡು ಈ ನಾಟಕವನ್ನು ಬರೆದಿರುವುದು. ಇಲ್ಲಿ ಬರುವ ಮುಗ್ಧ ಹುಡುಗ ನಿಜವಾಗಿಯೂ ಕೂಡಲ ಸಂಗಯ್ಯನಾಗಿರುವುದು ಮತ್ತು ಹುಚ್ಚಿಯು ನಗರದೇವತೆಯಾಗಿರುವುದು ಇದಕ್ಕೆ ನಿದರ್ಶನಗಳಾಗಿವೆ. ಅವಾಸ್ತವವು ಅವಾಸ್ತವವೇ ಆಗಿ ಉಳಿದು ಕೃತಿಯ ಅರ್ಥವಂತಿಕೆಗೆ ಸಹಾಯ ಮಾಡದಿದ್ದರೆ ಸೃಜನಶೀಲ ಉದ್ದೇಶಕ್ಕೆ ಧಕ್ಕೆ ಬರುತ್ತದೆ. ಇಲ್ಲಿ ಮುಗ್ಧ ಸಂಗಯ್ಯ ಮತ್ತು ಹುಚ್ಚಿ ನಾಟಕದ ಅವಿಭಾಜ್ಯ ಅಂಗವಾಗಿ ಬೆಳೆದು ಬರುವ ರೀತಿಯು ಅರ್ತಗರ್ಭಿತವಾಗಿದೆ ಮತ್ತು ಅದು ನಾಟಕವನ್ನು ಮಾಂತ್ರಿಕ ಸ್ಪರ್ಶಕ್ಕೆ ಒಳಪಡಿಸುತ್ತದೆ. ಇಲ್ಲಿಯೇ ಕಂಬಾರರ ಈ ನಾಟಕ ಅವರ ಹಿಂದಿನ ನಾಟಕಗಳಿಗಿಂತ ಭಿನ್ನವಾಗಿ ಕಾಣುತ್ತದೆ.

ದೇವರೇ ಬಂದು ನಾಟಕದಲ್ಲಿ ಪಾತ್ರವಹಿಸುವುದು, ನಗರ ದೇವತೆಯು ಹುಚ್ಚಿಯಾಗಿರುವುದರ ಜೊತೆಗೆ ಕೊನೆಗೆ ಅವಳೇ ಬಿಜ್ಜಳನ ಕೊಲೆಗೆ ಅನುವು ಮಾಡಿಕೊಡುವುದು ಮತ್ತು ಸಂಗಯ್ಯ 'ಭರತವಾಕ್ಯ' ನುಡಿಯುವುದು ಇವೆಲ್ಲಾ ಸಾಂಪ್ರದಾಯಿಕ ನಾಟಕದ ಅಂಶಗಳನ್ನೇ ಸೂಚಿಸುತ್ತವೆ. ವ್ಯವಸ್ಥೆಯ ದೃಷ್ಟಿಕೋನ ಮತ್ತು ಸಮಾನತೆಯ ದೃಷ್ಟಿಕೋನಗಳು ಭಿನ್ನವಾಗಿ ನಿಂತಿರುವುದೇ ನಮ್ಮ ಕಾಲದ ದುರಂತ. ಇದನ್ನು ಸೆರೆಹಿಡಿಯಲು ಈ ನಾಟಕ ಶ್ರಮಿಸುವುದರಿಂದ ಸಹಜವಾಗಿಯೇ ನಾಟಕದ ಘಟನೆಗಳು ಹನ್ನೆರಡನೆಯ ಶತಮಾನದಲ್ಲಿ ನಡೆದರೂ ಅವು ನಮ್ಮ ಕಾಲದ ಸಮಸ್ಯೆಗಳನ್ನೇ ಧ್ವನಿಸುತ್ತವೆ. ಹೀಗಾಗಿಯೇ ಇಲ್ಲಿಯ ಘಟನೆಗಳಿಗೆ ಸೃಜನಶೀಲತೆಯ ಸ್ಪರ್ಶ ಮತ್ತು ಕಾವ್ಯದ ಮಾಂತ್ರಿಕತೆ ದಕ್ಕಿ ಅವು ನಮ್ಮನ್ನು ಮತ್ತು ನಮ್ಮ ಕಾಲವನ್ನು ಪರೀಕ್ಷೆಗೆ ಒಡ್ಡುತ್ತವೆ.

ನಾಟಕದ ಪ್ರಾರಂಭದಲ್ಲಿ ಬರುವ ಸೂತ್ರಧಾರನ ಈ ಮಾತುಗಳು ಬಸವಣ್ಣ ಕಲ್ಯಾಣಕ್ಕೆ ಬಂದಾಗ ಇದ್ದ ಪರಿಸ್ಥಿತಿಯನ್ನು ತಿಳಿಸುತ್ತವೆ:

ಅವನಿಗೂ ಕಲ್ಯಾಣ ಹೊಸದು; ಆಯವ್ಯಯದ ವಿಚಾರದಲ್ಲಿ
ಯಾರ ಮೇಲೂ ನಂಬಿಕೆ ಇರಲಿಲ್ಲ, ಬಿಜ್ಜಳನಿಗೆ.
ನಂಬಿಕಸ್ಥನಾದ ಬಸವಣ್ಣ ಕಲ್ಯಾಣಕ್ಕೆ ಬಂದ.
ಮರ್ತ್ಯದ ಹಲವಾರು ಸಂಬಂಧಗಳಲ್ಲಿ
ಕೂಡಲಸಂಗಯ್ಯನ ಮೂಲಸಂಬಂಧವನ್ನು
ಬಸವಣ್ಣ ಮರೆಯಲಿಲ್ಲ. ದೇವಲೋಕ -
ಮರ್ತ್ಯಲೋಕಗಳನ್ನು ಒಂದು ಮಾಡಲು
ಕರ್ತಾರನ ಕಮ್ಮಟ ನಡೆಸಿದ.

ಈ ಮಾತುಗಳು ನಾಟಕದ ಒಟ್ಟೂ ಉದ್ದೇಶವನ್ನು ಸ್ಥಾಪಿಸುತ್ತವೆ. ಬಿಜ್ಜಳನ ಮೂಲ ಗುಣವೇ ಎಲ್ಲ ವ್ಯವಸ್ಥೆಗಳ ಮೂಲ ಗುಣದಂತೆ ಅಪನಂಬಿಕೆ. ಬಸವಣ್ಣ ವ್ಯಾವಹಾರಿಕ ಜಗತ್ತಿನಲ್ಲಿದ್ದರೂ ದೇವರ ಸಂಬಂಧವನ್ನು ಮರೆತಿಲ್ಲ. ತನ್ನನ್ನೂ ಮೀರಿದ ಶಕ್ತಿಯೊಂದಿಗೆ ಎಂಬ ಅರಿವು ಆತನಿಗಿದೆ. ಆದರೆ ಈ ಅರಿವು ಅಲ್ಲಿಯವರೆಗಿನ ಅಂಥ ಅರಿವಿಗಿಂತ ಭಿನ್ನವಾದುದು ಎಂಬುದನ್ನೇ ನಾಟಕವು ಅರಳಿದಂತೆ ವಿಶದಪಡಿಸುತ್ತಾ ಹೋಗುತ್ತದೆ. 'ಚಿನ್ನದ ಸುತ್ತ ಆಸೆ ಆಮಿಷಗಳಿರುತ್ತವೆ/ ಮಣ್ಣಿನ ಸುತ್ತ ಮನುಷ್ಯರಿರುತ್ತಾರೆ" ಎಂಬ ಸೂತ್ರಧಾರನ ಮಾತು "ಶಿಖರಸೂರ್ಯ" ಕಾದಂಬರಿಯಲ್ಲಿ ಮಂತ್ರಿಕ ಶಕ್ತಿಯಿಂದ ಆಹಾರ ಧಾನ್ಯಗಳನ್ನು ಚಿನ್ನವಾಗಿ ಪರಿವರ್ತಿಸುವುದನ್ನು ನೆನಪಿಸುತ್ತದೆ. ಶಿಖರಸೂರ್ಯ ಭೌತಿಕವಾದುದನ್ನು ಬೆಂಬತ್ತಿ ತನ್ನ ನಾಶವನ್ನು ತಾನೇ ಮಾಡಿಕೊಂಡರೆ, ಇಲ್ಲಿ ಬಿಜ್ಜಳ ವ್ಯವಸ್ಥೆಯಲ್ಲಿ ಸಮಾನತೆ ಮತ್ತು ಆಧ್ಯಾತ್ಮಕ್ಕೆ ಅನುವು ಮಾಡಿಕೊಡದೆ ಕೇವಲ 'ಪದ್ಧತಿ'ಗೆ ಜೋತುಬಿದ್ದು ಸೋಲುತ್ತಾನೆ. ಶಿಖರಸೂರ್ಯ'ದಲ್ಲಿ 'ಗುರು'ವಿನ ಬಲದಿಂದ ದುಷ್ಟಶಕ್ತಿಯ ನಾಶವಿದ್ದು, ಗುರುವು ಮಾನವನಾಗಿಯೇ ಕಾಣುತ್ತಾನೆ. ಇಲ್ಲಿ ಸಂಗಯ್ಯ ಸಾಕ್ಷಾತ್ ಕೂಡಲಸಂಗಮದೇವನೇ ಆಗಿದ್ದು ಅವನ ಅಸ್ತಿತ್ವ ಬಸವಣ್ಣನ ಒಳಗೆ ಮತ್ತು ಹೊರಗೂ ಇದೆ. ಈ ದೃಷ್ಟಿಯಿಂದ ನಾಟಕಕಾರರು ಆರಿಸಿ ಕೊಂಡಿರುವ ಈ ವಸ್ತು ಪ್ರೌಢಿಮೆಯನ್ನು ಸಾಧಿಸಿದ ಬರಹಗಾರನಿಗೆ ಆಹ್ವಾನದಂತೆಯೇ ಇದೆ. ನಟಿಯ ಈ ಮಾತುಗಳು ಪ್ರಾರಂಭದಲ್ಲಿಯೇ ಬಸವಣ್ಣ ಮತ್ತು ಬಿಜ್ಜಳರ ಮನಸ್ಥಿತಿಗಳನ್ನು ಬಿಚ್ಚಿಡುತ್ತವೆ:

ಬಸವಣ್ಣನ ಮಾತು ಮುತ್ತಿನಹಾರ
ಅಲ್ಲಮನ ಮಾತು ಜ್ಯೋತಿರ್ಲಿಂಗ
ಆದರೆ ಬಿಜ್ಜಳನ ಮಾತಿಗೆ ಹತ್ತು ಮನಸ್ಸು
ಹದಿನೆಂಟು ಬುದ್ಧಿ!

ಇನ್ನು ಬಸವಣ್ಣ ಮತ್ತು ಬಿಜ್ಜಳರ ಭಿನ್ನಾಭಿಪ್ರಾಯಕ್ಕೆ ಇನ್ನೊಂದು ಮಹತ್ವದ ಕಾರಣವೆಂದರೆ 'ರಾಜಕೀಯವನ್ನು ಧರ್ಮವಿವೇಕ ಸಂಧಿಸಿ'ದ್ದು. ಈ 'ಧರ್ಮವಿವೇಕ' ಎಂಬ ಮಾತಿನಲ್ಲಿ ಹಲವಾರು ಅರ್ಥಗಳು ಅಡಗಿವೆ. ಇದು ಸನಾತನ ಧರ್ಮ ವಿವೇಕವಲ್ಲ. ಇದು ಬಸವಣ್ಣ ಹೊಸದಾಗಿ ರೂಪಿಸಿದ 'ಧರ್ಮವಿವೇಕ'. ಇದರಲ್ಲಿ ಸಮಾನತೆ ಮತ್ತು ಸ್ವಾತಂತ್ರ್ಯಗಳು ಆಧಾರ ಸ್ತಂಭಗಳು. ಬಿಜ್ಜಳನ ಸಮಸ್ಯೆ ಎರಡು ಬಗೆಯದು: 'ಅವನು 'ಪದ್ಧತಿ'ಯನ್ನು ಅನುಸರಿಸ ಬಯಸುತ್ತಾನೆ ಮತ್ತು ಚಾಡಿಗೆ ಕಿವಿಗೊಡುತ್ತಾನೆ. ಇವೆಲ್ಲಕ್ಕೆ ಮಿಗಿಲಾಗಿ ಅವನು ತನ್ನ ವ್ಯವಸ್ಥೆಗೆ ಸಮಾನಾಂತರವಾದ ಇನ್ನೊಂದು ಅಧಿಕಾರ ಕೇಂದ್ರವನ್ನು ಸಹಿಸಲಾರ. ಅವನ ದುರಂತವೆಂದರೆ 'ಇಲ್ಲದ ವೈರಿ'ಯನ್ನು 'ಇದೆ' ಎಂದು ಭ್ರಮಿಸಿದ್ದಾನೆ. ಬಸವಣ್ಣ ಇನ್ನೊಂದು ಸಮಾನಾಂತರ ಅಧಿಕಾರ ಕೇಂದ್ರವನ್ನು ಸ್ಥಾಪಿಸಲು ಹೊರಟೇ ಇಲ್ಲ. ಆಮೂಲಾಗ್ರ ಬದಲಾವಣೆಗೆ ಒಗ್ಗದ ಅಧಿಕಾರಶಾಹಿ ಮನಸ್ಸಿಗೆ, ಅಂಥ ಬದಲಾವಣೆಯಲ್ಲಿ ಸಮಾನಾಂತರ ಅಧಿಕಾರ ಕೇಂದ್ರ ಸ್ಥಾಪನೆಯ ಹುನ್ನಾರ ಕಂಡರೆ ಆಶ್ಚರ್ಯವಿಲ್ಲ. ಆಮೂಲಾಗ್ರ ಬದಲಾವಣೆಯನ್ನರಿಯಲು ಬಿಜ್ಜಳನಿಗೆ 'ಪದ್ಧತಿ'ಯು ಅಡ್ಡವಾಗಿ ನಿಂತಿದೆ. ಸಾವಿರಾರು ವರ್ಷಗಳ ಪದ್ಧತಿಯನ್ನು ಅವನು ತ್ಯಜಿಸಲಾರ, ಆ ಪದ್ಧತಿಯನ್ನಿಟ್ಟುಕೊಂಡು ಬಸವಣ್ಣ ಆಮೂಲಾಗ್ರ ಬದಲಾವಣೆ ತರಲಾರ. ಬಿಜ್ಜಳನಿಗೆ ಯಾವುದು 'ಧರ್ಮ ವಿವೇಕ'ವೊ ಅದು ಬಸವಣ್ಣನಿಗೆ ಅವನತಿಯ ವಿವೇಕವಾಗಿದೆ. ಈಗಿನ ನಮ್ಮ ರಾಜಕೀಯದಲ್ಲಿ ಕೂಡ ಆಗಾಗ ಕಾಣಿಸಿಕೊಳ್ಳುವ ಬಿಕ್ಕಟ್ಟು ಇದೇ ತರಹದ್ದು. ಇನ್ನೊಂದು ಅಧಿಕಾರ ಕೇಂದ್ರವನ್ನು ಸಹಿಸಿದ, ಹೊಸ ವಿಚಾರಗಳಿಗೆ ಮನಸ್ಸನ್ನು ತೆರೆದಿಡಲು ಸಿದ್ಧವಿಲ್ಲದ, ಸದಾ ಜನರ ಬೆಂಬಲ ಯಾವ ಕಡೆ ವಾಲುತ್ತದೊ ಎಂಬ ಭಯದಲ್ಲೇ ಬದುಕುತ್ತಿರುವ ಇಂದಿನ ರಾಜಕಾರಣಿ ಇಲ್ಲಿಯ ಬಿಜ್ಜಳನಿಗಿಂತ ಭಿನ್ನವಲ್ಲ. ಈ ನಾಟಕವು ಇಲ್ಲಿಯೇ ಕಂಬಾರರ ಇನ್ನಿತರ ನಾಟಕಗಳಿಗಿಂತ ಭಿನ್ನವಾಗಿದೆ. ಅವರ ಈ ಮೊದಲಿನ ನಾಟಕಗಳಲ್ಲಿ ವರ್ತಮಾನಕ್ಕೆ ನಿರ್ದೇಶನ ಇಷ್ಟೊಂದು ಪ್ರಖರವಾಗಿ ಮತ್ತು ನೇರವಾಗಿ ನಮಗೆ ದೊರೆಯುವುದಿಲ್ಲ. ಇತಿಹಾಸ ಮತ್ತು ಪುರಾಣದ ವಸ್ತುಗಳನ್ನು ಆಧರಿಸಿ ಬರೆದ ಕೃತಿಗಳು ಕೇವಲ ಮನುಷ್ಯನ ಮುಲಭೂತ ಪ್ರವೃತ್ತಿಗಳತ್ತ ನಮ್ಮ ಗಮನ ಸೆಳೆದರೆ ಸಾಲದು, ಅವು ವರ್ತಮಾನದ ಸಮಸ್ಯೆಗಳನ್ನೂ ಒಳಗೊಳ್ಳುವಂತಿರಬೇಕು. ಸೃಜನಶೀಲತೆಯ ಪರೀಕ್ಷೆ ಇರುವುದೇ ಅಲ್ಲಿ. ಶೇಕ್ಸ್‌ಪಿಯರನ ನಾಟಕಗಳು ಈ ಕಾರಣಕ್ಕಾಗಿಯೇ ಬಹುಮುಖಿ. ಕಂಬಾರರ ಈ ನಾಟಕದಲ್ಲೂ ಸೃಜನಶೀಲತೆಯು ಅಂಥ ಸವಾಲನ್ನು ಎದುರಿಸಿ ಗೆದ್ದಿದೆ.

ನಗರದೇವತೆಯಾದ 'ಹುಚ್ಚಿ' ಮತ್ತು ಭಗವಂತನ ಸ್ವರೂಪಿಯಾದ ಸಂಗಯ್ಯ ಇವರು ನಾಟಕದಲ್ಲಿ ಸಂಕೇತಗಳಂತೆ ಕೆಲಸ ಮಾಡಿದರೂ ಅವರೂ ವಾಸ್ತವದಲ್ಲಿ ನೆಲೆಯೂರುವ ಪಾತ್ರಗಳಂತೆಯೇ ಕಾಣುತ್ತಾರೆ. ಒಂದು ಹಂತದಲ್ಲಿ ಮಾತ್ರ "ಸಂಗಯ್ಯ ಹಾಗೇ ನಿಂತಿದ್ದಾನೆ. ಅವನು ರಾಜಭಟರಿಗೆ ಕಾಣುವುದಿಲ್ಲ" ಎಂದು ನಾಟಕಕಾರರು ಸೂಚಿಸಿದ್ದಾರೆ. ಇದೊಂದು ಸ್ಥಳ ಬಿಟ್ಟರೆ ಸಂಗಯ್ಯ ಎಲ್ಲರಿಗೂ 'ಗೋಚರಿಸುತ್ತಾನೆ'. 'ಆತ್ಮ' 'ಲಿಂಗ' ಇತ್ಯಾದಿ ಪದಗಳನ್ನರಿಯದ ಕೆಳವರ್ಗದವರು ಅವುಗಳನ್ನು ಕುರಿತು ಹಾಸ್ಯವಾಗಿ ಮಾತನಾಡುತ್ತಾರೆ. ಬಸವಣ್ಣನನ್ನು ಕೊಲ್ಲಲೆಂದು ಕಾಶ್ಮೀರದಿಂದ ಬಂದ ಕಳ್ಳನೊಬ್ಬ ಬಸವಣ್ಣನ ಆಕರ್ಷಣೆಗೆ ಒಳಗಾಗಿ ಶರಣನಾಗಿದ್ದಾನೆ. ಹಾಗೆಯೇ ಸೂಳೆ ಸಾವಂತ್ರಿ ಶರಣ ಸಂಪ್ರದಾಯದ ಮತ್ತು 'ಕಾಯಕ ಧರ್ಮದ'ದ ಅರ್ಥವನ್ನು ಚೆನ್ನಾಗಿ ಮನಗಂಡಿದ್ದಾಳೆ. ಸಾಮಾನ್ಯರಿಂದ ಹಿಡಿದು ರಾಜನವರೆಗೆ, ವಾಸ್ತವದಿಂದ ಹಿಡಿದು ಆಧ್ಯಾತ್ಮಿಕ ಮಾಂತ್ರಿಕತೆಯವರೆಗೆ ನಾಟಕದ ಬೀಸು ಇರುವುದರಿಂದ ಸಮಾಜದ ಪಲ್ಲಟದ ಕಾಲದಲ್ಲಿ ಜನರ ಮನಸ್ಸು ಪರಿವರ್ತೀತವಾಗುವ ಬಗೆಯನ್ನು ಬಹು ಮಾರ್ಮಿಕವಾಗಿ ಈ ನಾಟಕವು ಸೆರೆ ಹಿಡಿಯುತ್ತದೆ. ಹುಚ್ಚಿಯೊಡನೆ ನಡೆಯುವ ಸಂಭಾಷಣೆಯ ಒಂದು ಹಂತದಲ್ಲಿ ಸಂಗಯ್ಯ ಹೀಗೆ ಹೇಳುತ್ತಾನೆ: "...ಅಂತರಾತ್ಮನೇ ಪ್ರಾಚೀನತಮ. ಅದೇ ಕೂಡಲ ಸಂಗಯ್ಯನನ್ನು| ಬಸವನನ್ನು ಹುಟ್ಟಿಸಿದ್ದು". ದೇವತಾ ಸ್ವರೂಪಿಯಾದ ಸಂಗಯ್ಯನನ್ನು ಹುಟ್ಟಿಸಿದ್ದು ಅಂತರಾತ್ಮ. ಈ ಅಂತರಾತ್ಮವೇ ಆದಿಮ. ಕಂಬಾರರನ್ನು ವೈದಿಕ ವಿಚಾರಧಾರೆಯಲ್ಲಿ ಬರುವ 'ಆತ್ಮ'ದ ಕಲ್ಪನೆ ಬಹುವಾಗಿ ಕಾಡಿದೆ. ಬಸವಣ್ಣ ಪ್ರತಿನಿಧಿಸುವ ಮೌಲ್ಯಗಳು ಪೂರ್ತಿ ಅವೈದಿಕವಲ್ಲ. ಆದರೆ ಮೂಲ ವೈದಿಕ ವಿಚಾರಧಾರೆಗೆ ಬಳಿದ 'ಪದ್ಧತಿ'ಗಳನ್ನು ಅವರು ವಿರೋಧಿಸುತ್ತಿದ್ದಾರೆ. ಅಲ್ಲದೆ ಧರ್ಮವೇ ಇಲ್ಲದವರಿಗೆ ಅವರದೇ ಆದ ಮತ್ತು 'ಪಾಲಿಸಲು ಸಾಧ್ಯವಾದ' ಧರ್ಮವನ್ನು ಒದಗಿಸಿದಾಗ 'ಹುಸಿ ಧರ್ಮ'ದ ಆಧಾರದ ಮೇಲೆ ಕಟ್ಟಿದ ವ್ಯವಸ್ಥೆಯು ಹೇಗೆ ಕುಸಿಯುತ್ತದೆ ಮತ್ತು ಆ 'ಹುಸಿಧರ್ಮ'ವನ್ನು ನಂಬಿದವರು ಆಗ ಹೇಗೆ ದುರಂತವನ್ನೆದುರಿಸಬೇಕಾಗುತ್ತದೆ ಎಂಬುದೇ ಈ ನಾಟಕದ ಮುಂದಿರುವ ಪ್ರಶ್ನೆ. ಮುಖ್ಯವಾದದ್ದೆಂದರೆ ನಾಟಕವು ಬಸವಣ್ಣನ ಪರವಾಗಿಯಾಗಲಿ, ಬಿಜ್ಜಳನ ವಿರುದ್ಧವಾಗಿಯಾಗಲಿ ನಿಲುವು ತಾಳುವುದಿಲ್ಲ. ನಾಟಕವು 'ಅನಿವಾರ್ಯತೆ'ಯ ಪರವಾದ ನಿಲುವು ತಾಳುತ್ತದೆ.

ನಾಟಕದ - ಕೇಂದ್ರ ಘಟನೆಯು ಸೂಳೆ ಸಾವಂತ್ರಿಯ ಮನೆಯಲ್ಲಿ ನಡೆಯಲು ಕಾರಣವೇನು ಎನ್ನುವ ಪ್ರಶ್ನೆಯೂ ಎದುರಾಗುತ್ತದೆ. ಮೊದಲನೆಯದಾಗಿ ಸಾವಂತ್ರಿಯಂಥ ಸೂಳೆಯಲ್ಲಿ ಕೂಡ ಕಾಯಕ ಧರ್ಮವು ನೆಲೆಗೊಂಡಿತ್ತು ಮತ್ತು ಅದು ಬಸವಣ್ಣನ ಪ್ರಭಾವದ ಆಳವನ್ನು ತೋರಿಸಲು ನಾಟಕವು ಆಯ್ದುಕೊಂಡ ಒಂದು ವಿಧಾನವಾಗಿದೆ. ಎರಡನೆಯದಾಗಿ ಸಂಗಯ್ಯನಿಗೆ ಕಾಶವ್ವ, ಕಳ್ಳ ಚಿಕ್ಕಯ್ಯ, ಬ್ರಾಹ್ಮಣ ದಾಮೋದರ, ಬಿಜ್ಜಳನ ಯುವ ಕಾಮಿನಿ ಕಾಮಾಕ್ಷಿ ಎಲ್ಲರೂ ಸರಿಸಮಾನರು ಮತ್ತು ಅವನಿಗೆ ಎಲ್ಲರಿಂದಲೂ ದೊರೆಯುವ ಗೌರವ ಸಮ್ಮತವಾಗಿದೆ ಎಂಬುದನ್ನು ತೋರಿಸಬೇಕಾಗಿದೆ. ಸಂಗಯ್ಯನು ದಾಮೋದರನು ಕದ್ದ ಸರವನ್ನು ಹಿಡಿದುಕೊಂಡು ಸಾವಂತ್ರಿಯ ಮನೆ ಪ್ರವೇಶಿಸುವುದು ಮತ್ತು ಬಿಜ್ಜಳ ಕಾಮಾಕ್ಷಿಗಾಗಿ ಆಸೆ ಪಟ್ಟು ಶಿವರಾತ್ರಿಯ ಕರಾಳ ರಾತ್ರಿಯಲ್ಲಿ ಸಾವಂತ್ರಿಯ ಮನೆ ಪ್ರವೇಶಿಸುವುದು - ಇವೆರಡೂ ಅವರ 'ಉದ್ದೇಶ'ಗಳಲ್ಲಿಯ ಸಂಘರ್ಷವನ್ನೇ ತೋರಿಸುತ್ತವೆ. ಸಂಗಯ್ಯ ಶಿವರಾತ್ರಿಯ ಇರುಳಿನಲ್ಲಿ ಕಾಮಾಕ್ಷಿಯ ಮನೆಯಲ್ಲಿಯೇ ಲಿಂಗಪೂಜೆಗೆ ಕುಳಿತುಕೊಳ್ಳುವುದು ಪ್ರಾರಂಭದಲ್ಲಿ ಸೋಜಿಗವಾಗಿ ಕಂಡರೂ ಸಾವಂತ್ರಿಯ ಮತ್ತು ಕಾಮಾಕ್ಷಿಯ ಮಾತುಗಳ ಮೂಲಕ ವೇದ್ಯವಾಗುವ ಅವರ 'ಶರಣತ್ವ'ದಿಂದಾಗಿಯೇ ಸಂಗಯ್ಯ ಆ ಸ್ಥಳವನ್ನು ಪೂಜೆಗಾಗಿ ಆಯ್ದುಕೊಂಡಿರುವುದು ಸ್ಪಷ್ಟವಾಗುತ್ತದೆ. ಸಾವಂತ್ರಿಯು ಕಾಯಕಧರ್ಮವನ್ನು ಅನುಸರಿಸಿದರೆ, ಕಾಮಾಕ್ಷಿಯು ತನ್ನ ಒಂದು ದಿನದ ದೇಹಸುಖಕ್ಕೆ ಸಂಗಯ್ಯನು ತಂದ ರತ್ನದ ಹಾರವನ್ನು ಸ್ವೀಕರಿಸಿದರೆ ಹೆಚ್ಚು ಬೆಲೆ ತೆಗೆದುಕೊಂಡಂತಾಗುತ್ತದೆಂದು ಅದನ್ನು ನಿರಾಕರಿಸುತ್ತಾಳೆ. ಸಾವಂತ್ರಿಯು ಬಹುಮೂಲ್ಯ ಉಳ್ಳ ಆ ಸರವನ್ನು ಒಂದು ಸಾಧಾರಣ ಮಾಡದಲ್ಲಿ ಎಸೆಯುತ್ತಾಳೆ. ಈ ಮೊದಲು ಕೂಡ ಕಾಶವ್ವನ ಮನೆಯಲ್ಲಿ ಆ ಸರವು ಹೆಗ್ಗಣಸತ್ತ ವಾಸನೆಯನ್ನು ಹರಡಿ ನಿರಾಕರಿಸಲ್ಪಟ್ಟಿದೆ. ಅಂದರೆ ಯಾವುದರ ಆಧಾರದ ಮೇಲೆ ಬಿಜ್ಜಳನ ಐಶ್ವರ್ಯದ ಬೆಲೆ ಕಟ್ಟಲಾಗುತ್ತದೊ ಅದು ಬಸವ ಧರ್ಮದಿಂದಾಗಿ ಸಾಮಾನ್ಯರಿಂದ ಹಿಡಿದು ಒಬ್ಬ ಬೆಲೆವೆಣ್ಣಿನವರೆಗೆ ತನ್ನ ಮೌಲ್ಯವನ್ನೇ ಕಳೆದುಕೊಂಡಿದೆ. ಎಲ್ಲಿ ಐಶ್ವರ್ಯದ ವ್ಯಾಖ್ಯೆಯೇ ಬದಲಾಗಿದೆಯೋ ಅಲ್ಲಿ ಸಂಗಯ್ಯ ತನ್ನ ಆವಾಸ ಸ್ಥಾನವನ್ನು ತೆರೆಯುತ್ತಾನೆ. ಆಗ ಕಾಮಾಕ್ಷಿಯಂಥ ಸುಂದರಿ ಕೂಡ ಅವನ ಸೇವೆಗೆ ನಿಂತು ಸೌಂದರ್ಯದ ವ್ಯಾಖ್ಯೆಯನ್ನೂ ಬದಲಿಸುತ್ತಾಳೆ. ಈ ಮೊದಲು ಬಸವಣ್ಣನನ್ನು ಕುರಿತಾಗಿ ಬಂದ ನಾಟಕಗಳಲ್ಲಿ ಷಡ್ಯಂತ್ರ ಮತ್ತು ಫಿತೂರಿಗಳೇ ಕೇಂದ್ರ ಸ್ಥಾನಕ್ಕೆ ಬರುತ್ತವೆ. ಅಲ್ಲದೆ ಕೆಳವರ್ಗದವರನ್ನು ಏನು ಮಾಡಿದರೂ ಬದಲಿಸಲಾಗುವುದಿಲ್ಲ ಎಂಬ ಧ್ವನಿಯೂ ಅಂಥ ಕೆಲ ನಾಟಕಗಳಲ್ಲಿದೆ. ಇನ್ನು ಕೆಲವು

ನಾಟಕಗಳು ಹರಳಯ್ಯ ಮತ್ತು ಮಧುವರಸರ ಬೀಗತನದ ಪರಿಣಾಮವಾಗಿ ಬಸವಣ್ಣನ ಜೀವನವನ್ನು ಅದು ಹೇಗೆ ಆಹುತಿ ತೆಗೆದುಕೊಂಡಿತು ಎಂಬುದನ್ನು ಬಿಂಬಿಸಲು ಶ್ರಮಿಸುತ್ತವೆ. ಆದರೆ ಕಂಬಾರರ ಈ ನಾಟಕದಲ್ಲಿ ಬೀಗತನ ಹಿನ್ನೆಲೆಯಲ್ಲಿದೆ ಮತ್ತು ಜನಸಾಮಾನ್ಯರಿಗೆ ಅವರದೇ ಆದ ಧರ್ಮವೊಂದು ಸಿಕ್ಕರೆ, ಅವರೂ ಕೂಡ ಆಮೂಲಾಗ್ರವಾಗಿ ಬದಲಾಗುತ್ತಾರೆಂಬ ಆಶಾವಾದವಿದೆ. ಸಾಮಾನ್ಯ ಜನರ ವರ್ತನೆಯು ನಾಟಕದುದ್ದಕ್ಕೂ ಬಸವಧರ್ಮದ ಪ್ರಭಾವದಲ್ಲಿ ಬದಲಾದದ್ದು ಸ್ಪಷ್ಟವಾಗಿ ಕಾಣುತ್ತ ಹೋಗುತ್ತದೆ. ಈ ದೃಷ್ಟಿಯಿಂದ ದಾಮೋದರನ ಪಾತ್ರವು ಈ ನಾಟಕದಲ್ಲಿ ಬಹಳ ಮಹತ್ವವಾದದ್ದು. ಅವನು ಬ್ರಾಹ್ಮಣ ಮತ್ತು ಆತನ ತಂದೆ ಹರಿಹರ ಅರಮನೆಯಲ್ಲಿದ್ದವನು. ತಂದೆಯ ಆಜ್ಞೆಯ ಮೇರೆಗೆ ಶರಣರ ವೇಷ ಧರಿಸಿ ಆತನು ರತ್ನಹಾರವನ್ನು ಕದ್ದಿದ್ದಾನೆ. ರಾಜಭಟರು ಅವನನ್ನು ಬೆನ್ನಟ್ಟಿದ್ದರಿಂದ ಅವನು ಕೆಳವರ್ಗದವರ ಮನೆಯನ್ನು ನುಗ್ಗಿ ಅಲ್ಲಿ ಬಚ್ಚಿಟ್ಟುಕೊಂಡು, ಕಾಮಾಕ್ಷಿಯನ್ನು ನೋಡಬಯಸುವ ಸಂಗಯ್ಯನಿಗೆ ಆ ಸರವನ್ನು ಕೊಟ್ಟು ಅವನು ಸೂಳೆ ಸಾವಂತ್ರಿಯ ಮನೆಯನ್ನು ಪ್ರವೇಶಿಸುವಂತೆ ಮಾಡುತ್ತಾನೆ. ಇಲ್ಲಿಯವರೆಗೆ ಅವನಲ್ಲಿ ಕೂಡ ಕುತಂತ್ರದ ಒಂದು ಅಂಶ ಇರಬಹುದಾದ ಸಾಧ್ಯತೆ ಇದೆ. ಆದರೆ ಮುಂದೆ ನಿಜ ಹೇಳಬೇಕಾದ ಸಮಯ ಬಂದಾಗ ಅವನು ಕೂಡ ಸಾವಂತ್ರಿಯ ಮನೆಯಲ್ಲಿ ತನ್ನ ತಂದೆಯ ವಿರುದ್ಧ ಸಾಕ್ಷಿ ನುಡಿಯುತ್ತಾನೆ. ಮೇಲ್ವರ್ಗಕ್ಕೆ ಸೇರಿದ ಇವನನ್ನು ಕೂಡ ಆ ಬಸವ ಧರ್ಮ ತಟ್ಟದೇ ಹೋಗಿಲ್ಲ. ಅವನಿನ್ನೂ ಶರಣನಾಗಿಲ್ಲ. ಆದರೆ ಅವನೂ ಶರಣನಾಗುವ ಪ್ರಕ್ರಿಯೆಯಲ್ಲಿದ್ದಾನೆ. ನಂತರ ಕೇರಿಯ ಜನರಿಗೆ 'ಮಹಾಮನೆ'ಯ ಬಗ್ಗೆ ಕುತೂಹಲ ಮತ್ತು ಗೌರವವಿದೆ, ಮೇಲ್ವರ್ಗದ ಎರಡನೇಯ ತಲೆಮಾರಿನ ದಾಮೋದರ ತನ್ನ ತಂದೆಯ ವಿರುದ್ಧವೇ ಸಾಕ್ಷಿ ನುಡಿಯುವಂತೆ ಬವಸಧರ್ಮ ಪ್ರೇರೆಪಿಸಿದೆ ಮತ್ತು ಸೂಳೆ ಸಾವಂತ್ರಿಯ ನಿಜವನ್ನು ತೆರೆದು ಬಿಜ್ಜಳನ ಮುಖಕ್ಕೆ ಹಿಡಿಯುವಷ್ಟು ಪ್ರಬಲಳಾಗಿ ನಿಂತಿದ್ದಾಳೆ. ಇಂಥ ಸಂದರ್ಭದಲ್ಲಿ ಬಿಜ್ಜಳನು ತನ್ನ ಐಡೆಂಟಿಟಿಗಾಗಿ ಪರಿತಪಿಸಬೇಕಾದ ಸನ್ನಿವೇಶವೊಂದು ನಿರ್ಮಾಣವಾಗಿದೆ.

ಹುಚ್ಚಿ ಅಥವಾ ಕಲ್ಯಾಣದ ನಗರದೇವತೆಯು ಸಂಗಯ್ಯನಿಗೆ ಹೇಳುವ ಈ ಮಾತುಗಳು ಬಿಜ್ಜಳನು ಸಿಲುಕಿ ಹಾಕಿಕೊಂಡಿರುವ ಬಲೆಯನ್ನು ಚಿತ್ರಿಸುತ್ತವೆ:

ಅರಮನೆಗೆ ಕೊಂಡೆಯರು ಬೇಕು. ಕೊಂಡೆಯರು
ಚಾಡಿ ಹೇಳಿದರು.
ಚಾಡಿಯ ಸಮರ್ಥನೆಗೆ ಸುಳ್ಳು ಹೇಳಿದರು
ಸುಳ್ಳನ್ನು ನಿಜ ಮಾಡಲು ಮೋಸ ಮಾಡಿದರು.
ಪರಿಣಾಮವೆಂದರೆ ಶರಣರು ಕಣ್ಣು
ಕಳೆದುಕೊಳ್ಳಬೇಕಾಯಿತು.
ಮೊನ್ನೆ ಅವರನ್ನು ಶೂಲಕ್ಕೇರಿಸುವಾಗ
ಅಡ್ಡನಿಂತ ನನ್ನನ್ನ
ಬಿಜ್ಜಳ ಅವಮಾನಿಸಿದ.
ಕಲ್ಯಾಣದ ಬದುಕು ಕಗ್ಗಂಟಾಗುತ್ತಿದ್ದಂತೆ
ಬಸವಣ್ಣ ನಿನ್ನನ್ನ ತುಂಬ ಜ್ಞಾಪಿಸಿಕೊಂಡ
ನೀನು ಬರಲೇ ಇಲ್ಲ.

ಸಂಗಯ್ಯ ಕೂಡ ಸತತವಾಗಿ ಬಸವಣ್ಣನೊಡನಿಲ್ಲ. ಅವನು ಕಾಮಾಕ್ಷಿಯ ಬಳಿ ಲಿಂಗಪೂಜೆಗೆ ಬರುವುದು, ದಾಮೋದರ ಕದ್ದ ಸರವನ್ನು ಜೊತೆಯಲ್ಲಿ ತರುವುದು, ಅಲ್ಲಿಯೇ ಬಸವ ಮತ್ತು ಬಿಜ್ಜಳ ಸಂಧಿಸುವುದು, ಸಂಗಯ್ಯ ಕೆಲವರಿಗೆ ಕಾಣದೇ ಇರುವುದು, ಇವುಗಳೆಲ್ಲ ಗಮನಿಸಿದರೆ ಸಂಗಯ್ಯನಿಗೆ ಭವಿಷ್ಯದ ಅರಿವಿದೆ ಮತ್ತು ಅವನು ಕಾರಣಿಕ ನುಡಿಯುವ ಸಮಯವೊಂದನ್ನುಳಿದು ಬೇರೆ ಕಡೆ ಎಲ್ಲಿಯೂ ತನ್ನ 'ಅಭಿಪ್ರಾಯ'ವನ್ನು ಮಂಡಿಸುವುದಿಲ್ಲವೆಂಬುದು ಮಹತ್ವದ್ದಾಗಿದೆ. ಬಸವಣ್ಣ ಕಲ್ಯಾಣವನ್ನು ಪ್ರವೇಶಿಸುವಾಗ

ಅವನೊಡನಿದ್ದ ಸಂಗಯ್ಯನು ಬಸವಣ್ಣ ರಾಜ್ಯದ ವ್ಯವಹಾರಗಳಲ್ಲಿ ತೊಡಗಿಸಿಕೊಂಡ ಮೇಲೆ ಇಲ್ಲವಾಗಿ ಮತ್ತೆ ಆತನ ಆತಂಕದ ಘಳಿಗೆಯಲ್ಲಿ ಕಾಣಿಸಿಕೊಂಡಿರುವುದು ದೈವ ಮತ್ತು ಭಕ್ತನ ಮಧ್ಯದ ಸೂಕ್ಷ್ಮಕೊಂಡಿಯನ್ನು ನಾಟಕ ಸೂಕ್ಷ್ಮವಾಗಿ ತೋರಿಸುತ್ತದೆ.

ಸಾವಂತ್ರಿಯ ಮನೆಯಲ್ಲಿ ಸಂಧಿಸುವ ಬಸವಣ್ಣ ಮತ್ತು ಬಿಜ್ಜಳರು ಸಂಗಯ್ಯನ ಲಿಂಗ ಪೂಜೆಗೆ ಸಾಕ್ಷಿಯಾಗಿರುವುದರ ಜೊತೆಗೇ ಸಾವಂತ್ರಿಯನ್ನೂ ಒಳಗು ಮಾಡಿಕೊಂಡು ತಮ್ಮ ತಮ್ಮ ನಿಲುವುಗಳನ್ನು ತಮಗೇ ಸ್ಪಷ್ಟಪಡಿಸಿಕೊಳ್ಳಲು ತೊಡಗುತ್ತಾರೆ. ಬಿಜ್ಜಳನ ಈ ಮಾತುಗಳು ಅವನ ಆಗಿನ ಮನಃಸ್ಥಿತಿಯನ್ನು ಬಿಂಬಿಸುತ್ತವೆ:

ಈ ಜನಕ್ಕೆ ಅದೇನು ಮಾಟ ಮಾಡಿದ್ದೀ ಬಸವ?
ಕಲ್ಯಾಣದ ಒಬ್ಬರಲ್ಲೂ ಸ್ವಾಮಿ ಭಕ್ತಿ ಇಲ್ಲ
ಇದ್ದದ್ದೆಲ್ಲಾ ಬಸವ ಭಕ್ತೀನೇ! ಬಸವ ಭಕ್ತಿ,
ಸ್ವಾಮಿ ಭಕ್ತಿ, ಎರಡರಲ್ಲಿ ಯಾವುದು ಹೆಚ್ಚು ಅಂತ
ಒರೆಗೆ ಹಚ್ಚಲೇಬೇಕಲ್ಲ!
…………………………………………………….
ಒಂದು ಕಡೆ ಲಿಂಗಪೂಜೆಯಲ್ಲಿ
ನಿರತರಾದ ಮುಗ್ಧ ಸಂಗಯ್ಯ ದೇವರು!
ಇನ್ನೊಂದೆಡೆಗೆ ಮಹಾತ್ಮ ಬಸವಣ್ಣನವರು!
ಮಧ್ಯೆ ಬಡಪಾಯಿ ಮಹಾರಾಜ ಬಿಜ್ಜಳ!

ಇನ್ನು ಸಾವಂತ್ರಿಯು ಬಿಜ್ಜಳನು ಕ್ರಮಿತರ ಚಾಡಿ ಕೇಳುವುದನ್ನು 'ಕತೆಮಾಡಿ' ಹೇಳಿ ಕೊನೆಗೆ 'ಕ್ರಮಿತ ಮಂತ್ರಿಯಾದ. ಮಂತ್ರಿ ಪೇದೆಯಾದನಂತೆ ಪ್ರಭು!' ಎಂದು ಹೇಳಿದಾಗ ಬಿಜ್ಜಳನು ಅದನ್ನು ತುಂಟತನವೆಂದು ಕರೆಯುತ್ತಾನೆ. ಸಾವಂತ್ರಿ ಅದನ್ನು 'ಜಾನಪದ ಪ್ರತಿಭೆ' ಎಂದು ಸಮರ್ಥಿಸಿಕೊಳ್ಳುತ್ತಾಳೆ. ಬಸವಣ್ಣನ ಮಾತುಗಳಲ್ಲಿ ಪ್ರತಿರೋಧವೇ ಇಲ್ಲದಿದ್ದರೂ ಬಿಜ್ಜಳ ಅದರ ಭ್ರಮೆಗೊಳಗಾಗಿದ್ದಾನೆಂಬುದು ಸ್ಪಷ್ಟವಾಗಿದೆ:

ಬಸವಣ್ಣ ಹೇಳುತ್ತಾನೆ:

ಧರ್ಮಯುದ್ಧವಾದರೆ ತತ್ವಗಳ ಘರ್ಷಣೆ ಇರಬೇಕು
ಇಲ್ಲಿ ಹಾಗಿಲ್ಲ. ತಾವಾಡುವುದು ನಾಟಕ ಎಂದು
ಚಾಡಿಕೋರರಿಗೂ ಗೊತ್ತಿದೆ.

ಬಿಜ್ಜಳ ಮತ್ತು ಬಸವಣ್ಣನವರ ಮಧ್ಯೆ ವರ್ಣಸಂಕರದ ಪ್ರಶ್ನೆ ಬಂದಾಗ ನಡೆಯುವ ಈ ಸಂಭಾಷಣೆಯೂ ನಾಟಕದ ಒಟ್ಟು ಅರ್ಥದ ಮೇಲೆ ಬೆಳಕು ಚೆಲ್ಲುತ್ತದೆ:

ಬಿಜ್ಜಳ : ಹೊಸಗಾಳಿಯ ಹೆಸರಿನಲ್ಲಿ ನೀನು ವರ್ಣಸಂಕರ,
ವರ್ಣಾಶ್ರಮ ಧರ್ಮವನ್ನ ಪ್ರಶ್ನಿಸುವಂಥ ಮದುವೆ
ಮಾಡಬಹುದೆ?

ಬಸವ : ಅದು ವರ್ಣಸಂಕರದ ಮದುವೆಯಲ್ಲ ಪ್ರಭು,
ಅನುಭವ ಮಂಟಪದ ಸಿದ್ಧಾಂತ. ಒಂದು ಕಾಲಕ್ಕೆ
ಮಧುವರಸರು ಬ್ರಾಹ್ಮಣರಾದುದು ನಿಜ. ಹರಳಯ್ಯನವರು
ಶೂದ್ರರಾಗಿದ್ದುದೂ ನಿಜ. ಆದರೆ ಅವರು ಲಿಂಗದೀಕ್ಷೆ
ತಗೊಂಡು ಶಿವಧರ್ಮದವರಾಗಿದ್ದಾರೆ. ಶರಣರಾದ
ಮೇಲೆ ಹರಳಯ್ಯ ಅಂತ್ಯಜನಲ್ಲ, ಮಧುವರಸ ವಿಪ್ರನಲ್ಲ.
ಶರಣರಿಗೆ ಜಾತಿ ಭೇದವಿಲ್ಲ. ಆದ್ದರಿಂದ ಅದು
ಸ್ವಜಾತಿಯ ಸ್ವಧರ್ಮದ ವಿವಾಹ. ಜಾತೀಯತೆಯನ್ನ
ನಿರ್ನಾಮ ಮಾಡುವ ವೀರಸಾಹಸ. ಈವರೆಗಿನ ನಮ್ಮ ಸಿದ್ದಾಂತ
ಬರೀ ವಚನವಾಗಿತ್ತು. ಈಗ ಕೃತಿಯಾಯಿತು.

ಇದು ಬಸವಣ್ಣ ನಿರ್ಮಿತ ಶಿವಧರ್ಮದ ಘೋಷಣಾ ಪತ್ರವಿದ್ದಂತಿದೆ. ಇದನ್ನು ಒಪ್ಪಿದರೆ ಬಿಜ್ಜಳನಿಗಾಗುವ ಹಾನಿ ಏನು ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಅವನು ಸಿಂಹಾಸನದ ಸಹಜ ಉತ್ತರಾಧಿಕಾರಿಯಾಗಿ ಪಟ್ಟಕ್ಕೆ ಬಂದಿದ್ದರೆ ಅವನು ಬಸವಣ್ಣನ ಮಾತನ್ನು ಒಪ್ಪಬಹುದಾಗಿತ್ತೇನೊ. ಆದರೆ ನಮ್ಮ ಇಂದಿನ ಎಷ್ಟೋ ರಾಜಕಾರಣಿಗಳಂತೆ ಅವನು ತುಳಿದು ಬಂದ ದಾರಿಯೇ ಅನ್ಯಾಯದಿಂದ ಕೂಡಿದೆ ಮತ್ತು ರಕ್ತಸಿಕ್ತವಾಗಿದೆ. ಇಂದಿನ ರಾಜಕಾರಣಿ ಗಾಂಧೀತತ್ವವನ್ನು ಸ್ವೀಕರಿಸಲಾರದ ಸ್ಥಿತಿಯನ್ನು ತಲುಪಿದಂತೆ ಬಿಜ್ಜಳನೂ ಬಸವತತ್ವವನ್ನು ಸ್ವೀಕರಿಸುವ ಸ್ಥಿತಿಯಲ್ಲಿಲ್ಲ. ಎಲ್ಲ ಸರ್ವಾಧಿಕಾರಿಗಳಂತೆ ಅವನಿಗೂ ಕೂಡ 'ತತ್ವನಿಷ್ಠೆ' ಎಂಬುದು ವೈರಿಯ ರೂಪದಲ್ಲೇ ಕಾಣಿಸುತ್ತದೆ. ಅದಕ್ಕಾಗಿ ಬಿಜ್ಜಳನು ಬಸವಣ್ಣನಿಗೆ "ನಿಮ್ಮ ಸಿದ್ಧಾಂತವನ್ನು ಜೀರ್ಣಿಸಿಕೊಂಬ ಶಕ್ತಿ ಸಮಾಜಕ್ಕಿಲ್ಲ" ಎಂದು ಹೇಳುತ್ತಾನೆ. ಇದೂ ಕೂಡ ರಾಜಕಾರಣದ ಒಂದು ಭಾಗ ಮತ್ತು ಸರ್ವಾಧಿಕಾರಿಯ ಮನೋಧರ್ಮ. ಸಮಾಜಕ್ಕೇನು ಬೇಕು ಎಂಬುದು ಸಮಾಜದಿಂದಲೇ ಎದ್ದು ಬರಬೇಕೆಂಬ ತತ್ವಕ್ಕಿಂತ ಹೆಚ್ಚಾಗಿ ತಾನು ಯಾವುದನ್ನು 'ಸರಿ' ಎಂದು ನಿರ್ಣಯಿಸಿತ್ತಾನೊ ಅದನ್ನು ಸಮಾಜ ಒಪ್ಪಬೇಕು ಎಂಬುದೇ ಅವನ ಧೋರಣೆಯಾಗಿದೆ. ಬಿಜ್ಜಳನ ಈ ಮಾತುಗಳು ಅವನ ಈ ಅಭಿಮತವನ್ನು ತೋರಿಸುತ್ತವೆ:

ಎಲ್ಲರಿಗೂ ಅವರವರಿಗೆ ಎಂಥ ಧರ್ಮದ ಅಗತ್ಯವಿದೆಯೋ
ಅದನ್ನು ಅಲ್ಲಲ್ಲಿ ಅವರವರಿಗೆ ಕಲ್ಪಿಸಿಕೊಡುವ ಶಕ್ತಿ
ವ್ಯವಸ್ಥೆಗಿದೆ. ವ್ಯವಸ್ಥೆಯಲ್ಲಿರುವ ದೇವರು ಎಲ್ಲರ
ಯೋಗಕ್ಷೇಮ ನೋಡಿಕೊಳ್ಳಬಲ್ಲವನಾಗಿದ್ದಾನೆ. ಇದು ಅನಿವಾರ್ಯ.

ಅಂದರೆ ಎಲ್ಲರಿಗೂ ಸಮಾನವಾಗಿರುವ ಧರ್ಮವೊಂದರ ಸಾಧ್ಯತೆಯನ್ನೇ ಅವನು ಅಲ್ಲಗಳೆಯುತ್ತಾನೆ. ಜಾತಿ ರಾಜಕೀಯದಿಂದ ತುಂಬಿರುವ ಸಮಾಜದಲ್ಲಿ ಎಲ್ಲ ಜಾತಿಗಳೂ ನಾಶವಾಗಿ ಒಂದೇ ಧರ್ಮಸ್ಥಾಪಿತವಾದರೆ ಜಾತಿಯನ್ನು ದುರುಪಯೋಗ ಪಡಿಸಿಕೊಂಡು ಅಧಿಕಾರದ ಚುಕ್ಕಾಣಿ ಹಿಡಿದವರಿಗೆ ಅಪಾಯವೆಂಬ ಬಿಜ್ಜಳನ ಮಾತಿನ ಇಂಗಿತ ಅಂದಿಗೆ ಹೇಗೆ ಸತ್ಯವಾಗಿತ್ತೋ ಇಂದಿಗೂ ಅಷ್ಟೇ ಸತ್ಯವಾಗಿದೆ. ಬಸವಣ್ಣ ಇದಕ್ಕೆ ಬದಲಾಗಿ ಬೇರೊಂದು ದಾರಿಯಲ್ಲಿ ಸಾಗಿ ಹೀಗೆ ಹೇಳುತ್ತಾನೆ:

....ದೇವರ ಜೊತೆಯಲ್ಲಿ ದೇವಭಾಷೆಯಲ್ಲೇ ಮಾತನಾಡಬೇಕು.
ಮಹಾಮನೆಯಲ್ಲಾದರೆ ದೇವರು ಭಕ್ತರ ಭಾಷೆಯಲ್ಲೇ
ಮಾತನಾಡುತ್ತಾನೆ. ಈಗ ದೇವರು ಮತ್ತು ಭಿಕಾರಿಗಳು
ಪರಸ್ಪರ ಅವರವರೇ ಮಾತನಾಡಿಕೊಳ್ಳುತ್ತಾರೆ. ಆ ಮೂಲಕ

ಅವರಿಗೂ ಧರ್ಮ ಅಂತ ಒಂದು ಸಿಕ್ಕಿದೆ. ಆತ್ಮವಿಶ್ವಾಸ
ಸಿಕ್ಕಿದೆ……………….

ಜನರಿಗೆ ಆತ್ಮವಿಶ್ವಾಸ ಸಿಗುವುದು ಸರ್ವಾಧಿಕಾರಿಗೆ ಯಾವಾಗಲೂ ಅಪಾಯ! ನಗರ ದೇವತೆ ಹುಚ್ಚಿಯ ಒಂದು ಮಾತು ಮಾತ್ರ ನಾಟಕಕಾರರೇ ಆಗಿನ ಇಡೀ ಇತಿಹಾಸದ ಮೇಲೆ ಬರೆದ ಒಂದು ಭರತವಾಕ್ಯದಂತಿದೆ. ಬಸವಣ್ಣ ಹೊಸ ಕ್ರಾಂತಿಯನ್ನು ಕುರಿತು ಅವಳು ಹೀಗೆ ಹೇಳುತ್ತಾಳೆ:

ಬಸವಾ ಬಸವಣ್ಣಾ, ನಿನ್ನ ಕನಸು ಇರುತ್ತದೆ
ನನ್ನಪ್ಪಾ - ನನಸಾಗುವವರೆಗೆ.
ಕೊಂಚ ಅವಸರವಾಯ್ತು. ಅತಿ ಉತ್ಸಾಹದಲ್ಲಿ
ಮಧ್ಯರಾತ್ರಿಯಲ್ಲೆ ಎದ್ದು ಕೂತೆ ನೀನು!
ಎದ್ದವನೇ ಮುಖಕ್ಕೆ ತಣ್ಣೀರೆರಚಿಕೊಂಡು
ಬನ್ನಿರೋ ಬನ್ನಿರಿ ಹೊಸಬೆಳಕಿನ ಉದಯಕ್ಕೆ!
ಅಂತ ಜನಗಳ ಕರೆದೆ.
ನಿಜ ಹೇಳಬೇಕೆಂದರೆ ಆಗಿನ್ನೂ ಬೆಳಗಿನ ತಾರೆ
ಮೂಡಿರಲೇ ಇಲ್ಲ!

ಕಾಲಮಾಗದೇ ಬಂದ ಕ್ರಾಂತಿಯ ಫಲಗಳೇನು ಎಂಬ ಚಿಂತನೆಯೂ ನಾಟಕಕಾರನನ್ನೂ ಕಾಡಿದೆ. ಅಲ್ಲದೆ ತನ್ನ ಕಾಲಕ್ಕಿಂತ ಮುಂದಿದ್ದವನೊಬ್ಬ ಅವತರಿಸಿದಾಗ ಉಂಟಾಗುವ ಅಲ್ಲೋಲ ಕಲ್ಲೋಲ ಬಗೆಗೆ ಕೂಡ ನಾಟಕಕಾರರು ತತ್ವಜ್ಞಾನಿಯ ಸ್ಥಳದಲ್ಲಿ ನಿಂತು ಚಿಂತಿಸಿದ್ದಾರೆ. ಸಂಗಯ್ಯ ಭರತವಾಕ್ಯ ನುಡಿಯುವಾಗ ಬಿಜ್ಜಳನೂ ಎದ್ದು ನಿಲ್ಲುತ್ತಾನೆಂಬುದನ್ನು ಗಮನಿಸಬೇಕು. ಸಂಗಯ್ಯ ನುಡಿಯುವಾಗ ಬಿಜ್ಜಳನೂ ನಾಟಕದ ಒಂದು ಪಾತ್ರವೆ ಸರಿ. “ಅವಧಿಯಳಿಯಿತ್ತು ವ್ಯವಧಾನ ಉಳಿಯಿತ್ತೋ ಬಸವಣ್ಣಾ” ಇದು ಭರತವಾಕ್ಯದ ಒಂದು ಮಾತು. ಹೌದು. ಕ್ರಾಂತಿಯ ಅವಧಿ ಮುಗಿದಿದೆ. ಬಸವಣ್ಣನಿಗೀಗ ವ್ಯವಧಾನವಿದೆ. ಆದರೆ ಉಳಿವಿಯಲ್ಲಿ ಶರಣರು ಎಲ್ಲವನ್ನೂ ‘ಮನಮುಟ್ಟಿ’ ಮಾಡಿದ್ದರೂ ಅದು ಕೊನೆ ಮುಟ್ಟಿದ್ದರೆ ಹೇಗೆ ಎಂದು ಹಲುಬುತ್ತಿದ್ದಾರೆ. ಸಂಗಯ್ಯ ಮತ್ತು ಬಸವಣ್ಣ ಕ್ರಾಂತಿಯ ಪರಿಣಾಮವನ್ನು ಕೂಡಲಸಂಗಮದಲ್ಲಿ ಎದುರಿಸಬೇಕಾಗಿದೆ. ನಗರದೇವತೆ ಕಲ್ಯಾಣಿಯು ಬಸವನಿಲ್ಲದ ಕಲ್ಯಾಣವನ್ನು ಕನ್ನಡಿಯಲ್ಲಿ ಮಾತ್ರ ಕಂಡು ಕೇವಲ ಇತಿಹಾಸದಲ್ಲಿ ಗೋಗರೆಯಬೇಕಾಗಿದೆ. ಸಂಗಯ್ಯನ ಭರತವಾಕ್ಯದ ಈ ಮಾತುಗಳು ಅತ್ಯಂತ ಮಾರ್ಮಿಕವಾಗಿವೆ. ಇವು ನಾಟಕವನ್ನು ಹಲವಾರು ದೃಷ್ಟಿಕೋನಗಳಿಂದ ನೋಡಲು ಅನುವು ಮಾಡಿಕೊಡುತ್ತವೆ. ದಾಮೋದರ ಮತ್ತು ಬಿಜ್ಜಳನ ಮಧ್ಯೆ ನಡೆಯುವ ಮಾತುಗಳೂ ಬಹಳ ಮಹತ್ವದ್ದಾಗಿವೆ. ಶರಣರ ಕಣ್ಣಲ್ಲಿ ತನ್ನನ್ನು ರಾಕ್ಷಸನನ್ನಾಗಿ ಮಾಡಿ ತನ್ನಿಂದ ಎಲ್ಲವನ್ನೂ ಬಸವಣ್ಣ ಕಸಿದುಕೊಂಡ ಎಂದು ಬಿಜ್ಜಳ ಆರೋಪಿಸುತ್ತಾನೆ. ದಾಮೋದರ ಇದಕ್ಕೆ ಕೊಡುವ ಉತ್ತರ ಮಹತ್ವದ್ದಾಗಿದೆ. ‘ಹಾಗೆಂದು ನಂಬುವುದು ನಿಮಗೆ ಇಷ್ಟವಾದುದರಿಂದ ಹಾಗೆ ಹೇಳುತ್ತಿದ್ದೀರಿ’ ಎಂದು ದಾಮೋದರ ಹೇಳುತ್ತಾನೆ. ಬಿಜ್ಜಳನ ಇರಿತದಿಂದ ಸಾಯುವ ಮೊದಲು ದಾಮೋದರನು ಕೊನೆಯ ಸತ್ಯವನ್ನೇ ಹೇಳುತ್ತಾನೆ:

ಹಿಂದೆ ಪ್ರಜೆಗಳ ಮಧ್ಯೆ, ಬಸವಣ್ಣನ ಪಕ್ಕದಲ್ಲಿ ನಿಂತಾಗಿನ
ಬಿಜ್ಜಳ ಉಜ್ವಲ ಕನಸುಗಳಿಂದ ಥಳಥಳ ಹೊಳೆವ
ತರುಣನಾಗಿದ್ದ. ಈಗ ಇಂದ್ರನ ಮಾದರಿಯ ಕಿರೀಟ,
ಜಗಮಗ ಆಭರಣ ಧರಿಸಿ ಚಾಡಿಕೋರರ ಕಣ್ಣಲ್ಲಿ
ನೋಡಿಕೊಳ್ಳುತ್ತಿದ್ದೀರಿ

…………………………………

ತರುಣ ಬಿಜ್ಜಳನ ಭೂತದಂತೆ!

ದಾಮೋದರ ತಂದೆ ಹರಿಹರ ಕಳ್ಳತನದ ಆಪಾದನೆಯಿಂದ ತಪ್ಪಿಸಿಕೊಳ್ಳಲು ತನ್ನ ಮಗನನ್ನೇ ನಿರಾಕರಿಸುತ್ತಾನೆ. ಆದರೆ ನಿಜ ನುಡಿದ ದಾಮೋದರ ಬಿಜ್ಜಳನ ಕೈಯಿಂದ ಕೊಲೆಯಾಗುತ್ತಾನೆ. ಮುಂದೆ ಹುಚ್ಚಿಯ ಪ್ರವೇಶವಾಗಿ ಬಿಜ್ಜಳನು ಅವಳೆದುರು ಮಂಡಿಯೂರಿ ಕುಳಿತು ಹೇಳುತ್ತಾನೆ:

ನಾನು ಒಂದಕ್ಕೊಂದು ಹೊಂದಾಣಿಕೆ ಇಲ್ಲದ ಎರಡು
ಅರ್ಧಗಳಿಂದ ಕೂಡಿದ್ದೇನೆ ತಾಯೀ!
ಮೊದಲನೇ ಅರ್ಧದಲ್ಲಿ ಬಸವಣ್ಣ ಮುಗ್ಧ
ಸಂಗಯ್ಯನನ್ನು ಸೃಷ್ಟಿಸಿದ. ನಾನು ಅವನ ಮುಗ್ಧ ಮುಖ
ಮತ್ತು ವಚನಗಳಿಂದ ತುಂಬಾ ಪ್ರಭಾವಿತನಾದೆ.
ಅವನೆದುರು ನಾನೊಬ್ಬ ಅಲ್ಪನೆನ್ನಿಸಿ ಪಶ್ಚಾತ್ತಾಪ
ಪಡುವಂತೆ ಮಾಡಿದ ಸಂಗಯ್ಯ. ಆದರೆ
ಯಾವ ರಾಜ ತಾನೇ ಸದಾಕಾಲ ಪಶ್ಚಾತ್ತಾಪ ಪಡಲು
ಇಷ್ಟಪಡುತ್ತಾನೆ?

ಇನ್ನೊಂದರ್ಧದಲ್ಲಿ ಕೊಂಡೆಯರು ಅವನಲ್ಲಿ ರಾಕ್ಷಸನನ್ನು ಸೃಷ್ಟಿಸಿ ಸಂಗಯ್ಯನನ್ನು ಸಂಹರಿಸಲು ಹೇಳಿದ್ದಾರೆ! ಚಾಲುಕ್ಯರಿಗೆ ದ್ರೋಹ ಮಾಡಿ ಅವನು ಮಹಾರಾಜನಾಗಿದ್ದಾನೆ. ಈಗ ಬೊಮ್ಮರಸ ಮತ್ತು ಜಗದೇವನು ಆ ದ್ರೋಹಕ್ಕೆ ಪ್ರತೀಕಾರ ಕೈಗೊಳ್ಳಲು ದ್ವಾರಪಾಲಕರ ವೇಷದಲ್ಲಿ ಬಂದಿದ್ದಾರೆ. ನಗರ ದೇವತೆಯೇ ಅವರಿಗೆ ದಾರಿ ಮಾಡಿಕೊಟ್ಟಿದ್ದಾಳೆ. ಬಿಜ್ಜಳನನ್ನು ರಕ್ಷಿಸಲು ಯಾರೂ ಇಲ್ಲ. ಅವನು ಸಾಯಲು ಸಿದ್ಧನಾಗಿದ್ದಾನೆ. ಆತನ ಕೊನೆಯ ಸ್ವಗತದಂತಿರುವ ಮಾತುಗಳು ಶೇಕ್ಸ್‌ಪಿಯರನ ಸಮಕಾಲೀನನಾಗಿದ್ದ ಮಾರ್ಲೋನ ನಾಟಕ 'ಡಾ. ಫಾಸ್ಟಸ್'ದಲ್ಲಿಯ ಫಾಸ್ಟಸ್‌ನ ಕೊನೆಯ ದೀರ್ಘ ಸ್ವಗತವನ್ನೇ ಜ್ಞಾಪಕಕ್ಕೆ ತರುತ್ತವೆ. ಅಲ್ಲಿ ಫಾಸ್ಟಸ್‌ನು ಲೋಕದ ಐಷಾರಾಮಕ್ಕಾಗಿ ತನ್ನ ಆತ್ಮವನ್ನೇ ಸೈತಾನನಿಗೆ ಮಾರಿದ್ದಾನೆ. ತನ್ನ ಕೊನೆ ಬಂದಾಗ ಸೈತಾನನು ಕರೆಯಲು ಬಂದೊಡನೆ ಕರುಣೆಗಾಗಿ ದೇವರನ್ನು ಯಾಚಿಸುತ್ತಾನೆ. ಬಿಜ್ಜಳನ ಸ್ಥಿತಿಯೂ ಇಲ್ಲಿ ಹೆಚ್ಚು ಭಿನ್ನವಾಗಿಲ್ಲ. ಆದರೆ ಬಿಜ್ಜಳ ಕರುಣೆಯಾಗಿ ಯಾರನ್ನೂ ಮೊರೆ ಹೋಗುವುದಿಲ್ಲ. ಬಿಜ್ಜಳನ ಕೊನೆಯ ಮಾತುಗಳು ಅದ್ಭುತವಾಗಿ ಮೂಡಿಬಂದಿವೆ. ಬಸವಣ್ಣ ಬಿಟ್ಟು ಹೋದದ್ದನ್ನೂ ಕುರಿತು ಬಿಜ್ಜಳ ಹೀಗೆ ಹೇಳುತ್ತಾನೆ:

ಶಿವರಾತ್ರಿಯ ಕತ್ತಲೆ, ಎಲ್ಲಾ ಮೌನಗಳ, ಎಲ್ಲಾ
ಅಜ್ಞಾತಗಳ, ಎಲ್ಲ ಎಲ್ಲದರ ಇಲ್ಲದಿರುವಿಕೆಯ ಮೊತ್ತವಾದ
ಕತ್ತಲೆಯನ್ನು ಬಿಟ್ಟು ಹೋದ!
……………………………

ಮುಟ್ಟಲಾಗದ ನನ್ನ ಎದೆಯ ಮೂಲೆಗಳನ್ನು
ಮುಟ್ಟಿದವ, ತಟ್ಟಿದವ ನೀನೊಬ್ಬನೇ ಬಸವಣ್ಣಾ!
ನಿನ್ನ ವಚನಗಳಿಗೆ ಆ ಶಕ್ತಿ ಇತ್ತು ನಿಜ.
ಆದರೆ ಚಾಡಿಗೆ ನಿನ್ನ ಮಾತಿಗಿಂತ ಹೆಚ್ಚಿನ ಶಕ್ತಿ,
ವ್ಯಾಪ್ತಿ, ವೇಗವಿತ್ತು ಬಸವಣ್ಣಾ!

ಬಿಜ್ಜಳನ ಕೊನೆಯ ಮಾತುಗಳಲ್ಲಿ ಅವನ ಅವಸಾನದ ಧ್ವನಿಯನ್ನು ಸೆರೆಹಿಡಿಯಲು ಉಪಯೋಗಿಸಿದ ಕಾವ್ಯಭಾಷೆಯು ಇತ್ತೀಚಿನ ಯಾವ ಕನ್ನಡ ನಾಟಕದಲ್ಲಿಯೂ ನನಗೆ ಕಂಡು ಬಂದಿಲ್ಲ. ಮರಣಕ್ಕೆ ಮೊದಲು ಬಿಜ್ಜಳನು ಆಡುವ ಈ ಮಾತುಗಳು ಅವನ ದುರಂತವನ್ನೇ ಸಾರುತ್ತವೆ:

ವ್ಯವಸ್ಥೆಗೆ ಹೃದಯವಿಲ್ಲ, ಸಂಗಯ್ಯನಿಗೆ ಕರುಣೆಯಿಲ್ಲ ಬಸವಣ್ಣಾ,
ಎರಡು ತಿರಸ್ಕಾರಗಳ ಮಧ್ಯೆ ನಿಂತಿದ್ದೇನೆ.

ಸಂಗಯ್ಯನಿಗೆ ಕರುಣೆಯಿಲ್ಲ ಎನ್ನುತ್ತಾನೆಯೆ ಹೊರತು ಅವನು ನನ್ನ ಮೇಲೆ ಕರುಣೆ ತೋರಿಸಲಿ ಎನ್ನುವುದಿಲ್ಲ! ದೇವರೆ, ಕರುಣೆ ತೋರಿಸು ಎನ್ನುವುದಕ್ಕೂ, ದೇವರಿಗೆ ಕರುಣೆ ಇಲ್ಲ ಎನ್ನುವುದಕ್ಕೂ, ಭಕ್ತ ಮತ್ತು ದುರಹಂಕಾರಿಯ ಮಧ್ಯದ ವ್ಯತ್ಯಾಸದಂತೆಯೇ ಕಾಣುತ್ತದೆ. ಅವನು ಭಗವಂತನವನಾಗಲಾರ, ಅವನ ಅಭಿಮಾನ ಅವನಿಗೆ ಅಡ್ಡವಾಗಿ ನಿಂತಿದೆ. "ಹೇಳಿ ಕೇಳಿ ಭವಿ ನಾನು ಬಸವಾ,| ಕ್ಷಮಿಸು ನನ್ನ" ಎನ್ನುವ ಅವನ ಕೊನೆಯ ಮಾತುಗಳಲ್ಲಿ ಕೂಡ ತಾನು ಮೀರಲಾಗದ್ದರ ಬಗೆಗೆ ಅವನಿಗರಿವಿದೆ ಎಂಬ ಇಂಗಿತವೇ ಇದೆ.

ಈ ನಾಟಕವನ್ನು ಓದಿದ ತಕ್ಷಣ ಲಂಕೇಶರ "ಸಂಕ್ರಾಂತಿ" ಮತ್ತು ಕಾರ್ನಾಡರ "ತಲೆದಂಡ" ನಾಟಕಗಳು ನಮ್ಮ ನೆನಪಿಗೆ ಬಾರದೆ ಹೋಗುವುದಿಲ್ಲ. ಕಂಬಾರರ ಇಲ್ಲಿಯ ಸ್ವಚ್ಛಂದ ಲಯಗಾರಿಕೆಯ ಕಾವ್ಯ ಆ ಎರಡೂ ನಾಟಕಗಳಲ್ಲಿ ಕಂಡುಬರುವುದಿಲ್ಲ. ಕಂಬಾರರಲ್ಲಿಯ ಕವಿ ಮತ್ತು ನಾಟಕಕಾರ ಇವರಿಬ್ಬರೂ ಇಲ್ಲಿ ಏಕತ್ರಗೊಂಡಿರುವುದರಿಂದ ಈ ನಾಟಕವು ಇನ್ನುಳಿದ ಎರಡು ನಾಟಕಗಳಿಗಿಂತ ಒಂದು ಹೆಚ್ಚಿನ ಸ್ತರವನ್ನು ಸಾಧಿಸುತ್ತದೆ. ಬಿಜ್ಜಳ ಮತ್ತು ಬಸವಣ್ಣನನ್ನು ನೋಡುವ ದೃಷ್ಟಿಕೋನವೂ ಇಲ್ಲಿ ಭಿನ್ನವಾಗಿದೆ. ಸಂಗಯ್ಯನನ್ನು ಮತ್ತು ಹುಚ್ಚಿಯನ್ನು ನಾಟಕದಲ್ಲಿ ತರುವ ಮೂಲಕ ಕಂಬಾರರು ನಾಟಕಕ್ಕೆ ದೈವೀಸ್ಪರ್ಶವನ್ನು ತರುತ್ತಾರೆ. ಅದರಲ್ಲಿ ಜಾನಪದ ಅಂಶವೂ ಇದೆ. ಆಧ್ಯಾತ್ಮ ಮತ್ತು ದೈವೀಸ್ಪರ್ಶದ ಅಭಾವವಿದ್ದಲ್ಲಿ ಬಸವಣ್ಣನ ವ್ಯಕ್ತಿತ್ವ, ಕಾರ್ಯ ಮತ್ತು ಬಿಜ್ಜಳನ ದುರಂತಗಳು ಒಟ್ಟಾರೆಯಾಗಿ ಒಡಮೂಡುವುದು ಸಾಧ್ಯವಿಲ್ಲ. "ಸಂಕ್ರಾಂತಿ"ಯ ವೈಚಾರಿಕತೆ ಮತ್ತು "ತಲೆದಂಡ"ದ 'ಸ್ಥಾಪಿತ ಚಿಂತನೆ' ಇನ್ನಿಲ್ಲ. ಹೀಗಾಗಿಯೇ ನಾಟಕದಲ್ಲಿ ಚಲನಶೀಲತೆ ಇದೆ.

ನವ್ಯ ಸಾಹಿತ್ಯವು ಕಾವ್ಯದಲ್ಲಿ ಆಡುಮಾತನ್ನು ಅದರ ಲಯಗಾರಿಕೆ ಸಹಿತ ಸೆರೆಹಿಡಿಯಿತು. ಆ ಸ್ವಚ್ಛಂದ ಲಯಗಾರಿಕೆಯ ಒಂದು ತುರೀಯಾವಸ್ಥೆ ಈ ನಾಟಕದಲ್ಲಿ ಕಂಡುಬರುತ್ತದೆ. ದಿನ ಬಳಕೆಯ ಮಾತು ಆಡುಮಾತಲ್ಲ. ಸಾಹಿತ್ಯದಲ್ಲಿ ಸಂದರ್ಭಕ್ಕೆ ತಕ್ಕ ಲಯಗಾರಿಕೆಯನ್ನು ಸಾಧಿಸುವ ಭಾಷೆ ಆಡು ಮಾತಾಗುತ್ತದೆ. ಇದರ ಸ್ಪಷ್ಟ ಅರಿವು ಈ ನಾಟಕದಲ್ಲಿ ಕಂಬಾರರಿಗಿದೆ. ಇಂಥ ಮಾತನ್ನು ಮತ್ತೆ ನಾಟಕದಲ್ಲಿ ಮರಳಿ ತಂದಿರುವುದು ಈ ನಾಟಕದ ಬಹುದೊಡ್ಡ ಸಾಧನೆ. ಸಂಗೀತ ಮತ್ತು ಆಂಗಿಕ ಅಭಿನಯಗಳಿಂದಾಗಿ 'ಮಾತು' ನಾಟಕದಲ್ಲಿ ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ ಈ ನಾಟಕ ಮೂಡಿ ಬಂದಿರುವುದು ಕನ್ನಡ ನಾಟಕದ ಸುದೈವ. ನಮ್ಮ ಸೃಜನಶೀಲ ನಿರ್ದೇಶಕರಲ್ಲಿ ಕೆಲವರಾದರೂ ಇದನ್ನು ಅರ್ಥ ಮಾಡಿಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ. ನಾಟಕವು ವರ್ತಮಾನದ ಮೇಲೆ ಬೆಳಕು ಚೆಲ್ಲಲು ಸಾಧ್ಯವಾಗಿರುವುದು ಈ ಸೃಜನಶೀಲ ಮಾತಿನಿಂದಾಗಿಯೆ. ಕಂಬಾರರು ಇಂಥ ಇನ್ನೂ ಅನೇಕ ನಾಟಕಗಳನ್ನು ರಚಿಸಲಿ ಎಂದು ನಾನು ಆಶಿಸುತ್ತೇನೆ.

**ಮಾಧವ ಕುಲಕರ್ಣಿ**
ಮೈಸೂರು